The State Government had referred several issues concerning Illegal Mining in the State, after framing comprehensive terms of reference to the Honb'le Lokayukta for investigation under Section 7 (2A) of Karnataka Lokayuktha Act 1984. The Hon'ble Lokayukta has submitted a detailed investigation report (Part-II) to the State Government on 27/07/2011 containing many chapters and annexure. The State Government constituted High Level Committee under the Chairmanship of the Additional Chief Secretary to advise the Government regarding ways and means of implementation of recommendations contained in the Hon'ble Lokayukta's report. The High Level Committee has submitted its final report to the State Government on 24/10/2011.

The High Level Committee in its report has recommended to constitute the Special Investigation Team (SIT) consisting of an interdisciplinary team of experts of the departments like Home, Mines and Geology, Commercial Tax, Forest, Revenue etc., or designate an appropriate agency to carry out further investigation wherever the Hon'ble Lokayukta has recommended for in-depth investigation in the matters like Illegal Mining, Illicit Extraction of Iron Ore and Transportation for Local Consumption and export, cases of benami transactions, Formation of Front Companies for the purpose of Evasion of Tax, Money Laundering and Parking of unaccounted wealth in tax havens.

The Government has agreed in principle to constitute Special Investigation Team as per recommendation of High Level Committee.

The Director, Mines and Geology in his letter dated: 15/12/2011 read at above (1) has requested to constitute Special Investigation Team.

The proposal has been examined in detail and decided to constitute Committee/Team. Hence. the following order:-

Government Order No: CI.282:MMM.2011, Bangalore, Dated: 09/01/2012.

In the circumstances explained in the preamble, the Government is pleased to constitute the following Special Investigation Team (SIT) to carry out further investigation in the matters like Illegal Mining, Illicit Extraction of Iron Ore and Transportation for Local Contruciton and export, cases of benami transactions, Formation of Front Companies for the purpose of Evasion of Tax, Money Laundering and Parking of unaccounted wealth in tax havens:-

1.	Shri Deepak Sarmah, IFS, Additional Principal Chief Conservator of Forest	Chairman
2.	Shri Shivakumar, IPS., Inspector General of Police. (Fire Force)	Member
3.	Shri H.R. Srinivas IAS., Director, Department of Mines and Geology.	Member
4.	Shri Amlan Adithya Biswas, IAS., Deputy Commissioner, Bellary.	Member
5.	Shri J. Ramalinge Gowda, Additional Commissioner Department of Commercial Taxes.	Member
6.	Shri Richard V.D'Souza, Joint Commissioner (Admn), Department of Transport.	Member
7.	Shri D.R. Veeranna, Additional Director (Mineral), Department of Mines and Geology.	Convener

The Special Investigation Team can co-opt any State government officer to be its member and may also invite any officer for the meetings, if it feels necessary to do so.

The Special Investigation Team shall look in to the issues enlisted in the Annexure and also investigate such issues that may be entrusted to it by the Govenrment from time to time.

The Special Investigation Team shall submit its report to the Government within a period of three months.

A separate Government order will be issued providing for a support team consisting of officers of different departments which will work under the Special Investigation Team directly.

By Order and in the name of the Governor of Karnataka
M.V. Shivasubramani
Under Secretary to Government (Mines)
Commerce & Industries Department

P.R. No: 326

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಯಾದಗಿರಿ ಜಿಲ್ಲೆಗೆ ವಿವಿಧ ವೃಂದದ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/59/ಭೂದಾಮ 2008, ದಿನಾಂಕ: 26/12/2009.
2. ಸರ್ಕಾರದ ಆದೇಶ ಸಂಖ್ಯೆ: ವಾಕೈ 216/ಕೈಸೇವಿ/2009 (ಭಾಗ–1), ದಿನಾಂಕ: 19/05/2010.
3. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ–ಇ–2/112/2009–10, ದಿನಾಂಕ: 04/09/2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1) ರ ಆದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ. ಯಾದಗಿರಿ ಪಟ್ಟಣವನ್ನು ಕೇಂದ್ರಸ್ಥಾನವನ್ನಾಗಿಸಿ. ಹೊಸದಾಗಿ ಯಾದಗಿರಿ ಜಿಲ್ಲೆಯನ್ನು ರಚಿಸಿ. ದಿನಾಂಕ: 30/12/2009 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಸಂ. (2) ರ ಆದೇಶದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ ಕಚೇರಿಯ ರಾಜ್ಯವಲಯ/ಜಿಲ್ಲಾ ಪಂಚಾಯತ್ ವಲಯಗಳಿಗೆ Ad-hoc ಆಧಾರದ ಮೇಲೆ ಹುದ್ದೆಗಳನ್ನು ಸೃಜಿಸಿ/ಸ್ಥಳಾಂತರಿಸಿ, ಸರ್ಕಾರದ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಸಂ. (3)ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ. ಬೆಂಗಳೂರು ಇವರು ಹೊಸದಾಗಿ ಸೃಜನೆಯಾಗಿರುವ ಯಾದಗಿರಿ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಗೆ ಈ ಕೆಳಕಂಡ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಕ್ರಮ ಸಂಖ್ಯೆ	ಹುದ್ದೆ	ವೃಂದ	ಅಧಿಕಾರಿಗಳ ಮತ್ತು ನೌಕರರ ಸಂಖ್ಯೆ	ಹೊಸದಾಗಿ ಸೃಜಿಸಿರುವ/ಸೃಜಿಸುವ ಹುದ್ದೆಗಳು
1.	ಅಧೀಕ್ಷಕರು	ಸಿ	1	1
2.	ಪ್ರಥಮ ದರ್ಜೆ ಸಹಾಯಕರು	ಸಿ	1	1
3.	ಶೀಘ್ರಲಿಪಿಗಾರರು	ಸಿ	1	1
4.	ಡಿ ದರ್ಜೆ	ಡಿ	2	2
ಒಟ್ಟು			5	5

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 216 ಕೈಸೇವಿ 2009 (ಭಾಗ–2) ಬೆಂಗಳೂರು, ದಿನಾಂಕ: 9/01/2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹೊಸದಾಗಿ ರಚಿಸಿರುವ ಯಾದಗಿರಿ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಗೆ ಈ ಕೆಳಕಂಡ ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತುತ ಜಾರಿಯಲ್ಲಿರುವ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಿ ಸರ್ಕಾರವು ಆದೇಶಿಸಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1.	ಅಧೀಕ್ಷಕ	01
2.	ಪ್ರಥಮ ದರ್ಜೆ ಸಹಾಯಕ	01
3.	ಶೀಘ್ರಲಿಪಿಗಾರ	01
4.	ಗ್ರೂಪ್ 'ಡಿ'	01
ಒಟ್ಟು		04

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1682 ವೆಚ್ಚ–1 2011. ದಿನಾಂಕ: 20/12/2011ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ವಾಸನ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
(ಸೇವೆಗಳು)

ಪಿ.ಆರ್: 327

ಇಂಧನ ಸಚಿವಾಲಯ

ವಿಷಯ : ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 1.7 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್‌ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇನ್ 337 ಎನ್‌ಸಿಇ 2006, ದಿನಾಂಕ: 16/10/2006.
2. ಸರ್ಕಾರಿ ಆದೇಶ ಸಂಖ್ಯೆ: ಇನ್ 09 ಎನ್‌ಸಿಇ 2007, ದಿನಾಂಕ: 12/01/2007.
3. ಸರ್ಕಾರಿ ಆದೇಶ ಸಂಖ್ಯೆ: ಇನ್ 432 ಎನ್‌ಸಿಇ 2010, ದಿನಾಂಕ: 16/12/2010.
4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 318 ಎನ್‌ಸಿಇ 2011, ದಿನಾಂಕ: 26/07/2011.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/GH-1.7(GNS-32&33)/RSR/2011/4500, ದಿನಾಂಕ: 30/11/2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಸರ್ಕಾರಿ ಆದೇಶದಲ್ಲಿ ಮೆ: ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮೆ: ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಅನುಮತಿಸಿರುವ ಒಟ್ಟು ಸಾಮರ್ಥ್ಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ ಆಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ. ಸಾಮರ್ಥ್ಯವನ್ನು 30.60 ಮೆ.ವ್ಯಾ.ಗೆ 25 ಮೆ.ವ್ಯಾ. ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದ್ದು ಹಾಗು ಈ ಯೋಜನೆಯನ್ನು ದಿ: 31/3/2011ರೊಳಗೆ ಅನುಷ್ಠಾನಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಹೆಚ್ಚಿಸಲು ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ: 31/12/2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಆರ್‌ಎಸ್‌ಆರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 1.7 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ:: ಗೋಲ್ಡನ್ ಹ್ಯಾಚರೀಸ್ ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಯೋಜನೆಯು ಖಾಸಗಿ ಜಮೀನಿನಲ್ಲಿ ಬರುತ್ತದೆ ಮತ್ತು ಈ ಯೋಜನೆಯನ್ನು ದಿನಾಂಕ: 31/12/2011ಕ್ಕೆ ಅನುಷ್ಠಾನಗೊಳಿಸಲಾಗುವುದೆಂದು ಸಹ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 446 ಎನ್‌ಸಿಇ 2011, ಬೆಂಗಳೂರು, ದಿನಾಂಕ: 10/01/2012

ಮೆ:: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ **1.7** ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಮೆ:: ಗೋಲ್ಡನ್ ಹ್ಯಾಚರೀಸ್ ಕಂಪನಿಯವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ:–

Schedule

Lacation and District	Description
Nej village, Chikkodi Taluk, Belgaum District.	The identified potential comprises of two areas and mixture of hill and plains. Area A is spread N-E direction of Shiragaon. Whereas Area B is located in South of Girgaon and is spread in E-W directions. The Geographical co-oridinates of Area-A & Area-B are as follows:- Area-A: Latitude: 16°27'32" - 16°30'0" N Longitude: 74°31'06" - 74°32'57" E Ridge peaks: 620 & 647m AMSL. Area – B: Latitude: 16°25'52" - 16°26'41" N Longitude: 74°30'52" - 74°32'41" E Ridge peaks: 720m AMSL. Toposheet: 47 L/11

Land details of the project

Village Name	Taluk & District	MW	Land Sy.No	No. of WTGs	Extent in land (Acres)	WTG Location No.
Nej	Chikkodi / Belgaum	0.85	412/4 & 412/5	1 No.	2 Acres	GNS 32
Nej		0.85	403/1	1 No.	2 Acres	GNS 33
Total		**1.70**		**2 Nos.**	**4 Acres**	

1. **ಮೆ:: ಗೋಲ್ಡನ್ ಹ್ಯಾಚರೀಸ್** ರವರು ಇತ್ತೀಚಿನ ಆದೇಶದನ್ವಯ ಕೆ.ಆರ್.ಇ.ಡಿ.ಎಲ್. ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಸದರಿ ಯೋಜನೆಯನ್ನು ದಿನಾಂಕ: 31/01/2012 ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ರೆಡಲ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (commitment letter).
3. **ಮೆ:: ಗೋಲ್ಡನ್ ಹ್ಯಾಚರೀಸ್** ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ,

ಪಿ.ಆರ್: 328

ಇಂಧನ ಸಚಿವಾಲಯ

ವಿಷಯ : ವಿತರಣಾ ಕಂಪನಿಗಳಿಗೆ ವಿದ್ಯುತ್ ಹಂಚಿಕೆ

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇನ್‌ಎನ್ 45 ಪಿಎಸ್‌ಆರ್ 2006, ದಿನಾಂಕ: 22/04/2006.
2. ಪತ್ರ ಸಂಖ್ಯೆ: ಇಎನ್ 70 ಇಎಮ್‌ಸಿ 2009, ದಿನಾಂಕ: 10/11/2009.
3. ಸರ್ಕಾರಿ ಆದೇಶ ಸಂಖ್ಯೆ: ಇಎನ್ 126 ಇಎಮ್‌ಸಿ 2010, ದಿನಾಂಕ: 24/03/2010.
4. ಸರ್ಕಾರಿ ಆದೇಶ ಸಂಖ್ಯೆ: ಇಎನ್ 126 ಇಎಮ್‌ಸಿ 2010, ದಿನಾಂಕ: 12/10/2011.
5. ಸರ್ಕಾರಿ ಆದೇಶ ಸಂಖ್ಯೆ: ಇಎನ್ 81 ಇಎಮ್‌ಸಿ 2010, ದಿನಾಂಕ: 03/11/2011.

ಪ್ರಸ್ತಾವನೆ:-

ರಾಜ್ಯ ಸರ್ಕಾರವು ಆದೇಶ ಸಂಖ್ಯೆ ಇಎನ್ 126 ಇಎಂಸಿ 2010 ದಿನಾಂಕ: 24/03/2010ರಲ್ಲಿ ತಿಳಿಸಿರುವಂತೆ, ರಾಜ್ಯದಲ್ಲಿ ವಿವಿಧ ಮೂಲಗಳಿಂದ ನಿತ್ಯ ಲಭ್ಯವಿರುವ ಒಟ್ಟಾರೆ ವಿದ್ಯುತ್ ಪ್ರಮಾಣದಲ್ಲಿ ಎಲ್ಲಾ ವಿತರಣಾ ಕಂಪನಿಗಳಿಗೆ ಕೆಳಕಂಡಂತೆ ಶೇಕಡಾವಾರು ಪ್ರಮಾಣದಲ್ಲಿ ವಿದ್ಯುತ್ ಹಂಚಿಕೆ ಮಾಡಲಾಗಿರುತ್ತದೆ.

ವಿತರಣಾ ಕಂಪನಿ	ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣ
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	49.62
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	8.33
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	18.18
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	13.26
ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ	10.61
ಒಟ್ಟು	100.00

ವಿತರಣಾ ಕಂಪನಿಗಳಿಗೆ ವಿದ್ಯುತ್ ಹಂಚಿಕೆ ಪ್ರಮಾಣವನ್ನು ಕಂಪನಿಗಳು ನಿತ್ಯ ಬಳಸುವ ಸರಾಸರಿ ವಿದ್ಯುತ್ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಲಾಗಿರುತ್ತದೆ. ಪ್ರತಿ ವರ್ಷದ ವಿದ್ಯುತ್ ಬಳಕೆಯ ಪ್ರಮಾಣಲ್ಲಿ ಸರಾಸರಿ ಶೇ. 8 ರಷ್ಟು ಬೆಳವಣಿಗೆ ಕಂಡುಬಂದಿರುತ್ತದೆ. ಮತ್ತು ಋತುಮಾನ ಬದಲಾವಣೆಗಳಿಂದಾಗಿ ಕೆಲವು ವಿತರಣಾ ಕಂಪನಿಗಳಲ್ಲಿ ಹಂಚಿಕೆ ಮತ್ತು ಬಳಕೆ ಪ್ರಮಾಣದಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ಇತ್ತೀಚಿನ ಸರ್ಕಾರಿ ಆದೇಶ ಸಂಖ್ಯೆ: ಇಎನ್ 126 ಇಎಂಸಿ 2010 ದಿನಾಂಕ: 12/10/2011ರಲ್ಲಿ ತಿಳಿಸಿರುವಂತೆ ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ಮೂಲಗಳಿಂದ ಖರೀದಿಸುವ ವಿದ್ಯುತ್ತಿನ ಪ್ರಮಾಣವನ್ನು ಮರು ಹಂಚಿಕೆ ಮಾಡಲಾಗಿರುತ್ತದೆ. ಇದರ ಉದ್ದೇಶವು ವಿವಿಧ ಕಂಪನಿಗಳ ಆರ್ಥಿಕ ಹೊರೆಯನ್ನು ಸರಿದೂಗಿಸಿ, ರಾಜ್ಯದ ವಿವಿಧ ಭಾಗಗಳಲ್ಲಿರುವ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ KERC ಯವರ ಸೂಚನೆ ಮೇರೆಗೆ ಮರು ಹಂಚಿಕೆ ಮಾಡಲಾಗಿದೆ. ಈ ಮರು ಹಂಚಿಕೆ ಪ್ರಮಾಣವು ಕಂಪನಿಗಳು ವಿವಿಧ ಮೂಲಗಳಿಂದ ವಿದ್ಯುತ್ ಖರೀದಿಸುವ ಬಿಲ್ ಪಾವತಿ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿದೆ. ಈ ಸಂಬಂಧವಾಗಿ ವಿವಿಧ ಮೂಲಗಳ ವಿದ್ಯುತ್ ಖರೀದಿಸುವ ಪ್ರಮಾಣ ಮತ್ತು ನಿತ್ಯ ವಿದ್ಯುತ್ ಬಳಕೆಯ ಪ್ರಮಾಣದಲ್ಲಿ, ವ್ಯತ್ಯಾಸ ಕಂಡು ಬಂದಿದ್ದು, ಈ ಅಸಮತೋಲವನ್ನು ಸರಿಪಡಿಸುವ ಉದ್ದೇಶದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ದಿನನಿತ್ಯದ ವಿದ್ಯುತ್ ಹಂಚಿಕೆ ಪ್ರಮಾಣದಲ್ಲಿ ಮಾರ್ಪಾಡು ಮಾಡಬೇಕೆಂಬ ಅಂಶವನ್ನು ಮನಗಾಣಲಾಯಿತು. ಅದರಂತೆ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ ನಿತ್ಯ ವಿದ್ಯುತ್ ಬಳಕೆಯ ಉದ್ದೇಶದಿಂದ ರಾಜ್ಯದಲ್ಲಿ ಒಟ್ಟಾರೆ ಲಭ್ಯವಿರುವ (ಕಂಪನಿಗಳ ಖರೀದಿ ಹೊರತುಪಡಿಸಿ) ವಿದ್ಯುತ್ ಪ್ರಮಾಣವನ್ನು ಆಧರಿಸಿ ಆದೇಶ ಸಂಖ್ಯೆ: ಇಎನ್ 81 ವಿಎಸ್‌ಸಿ 2011ರ ಪ್ರಕಾರ ಕೆಳಕಂಡಂತೆ ಮರು ಹಂಚಿಕೆ ಮಾಡಲಾಯಿತು.

ವಿತರಣಾ ಕಂಪನಿ	ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣ
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	49.00
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	8.33
ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ	10.65
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	18.50
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	13.52
ಒಟ್ಟು	100.00

ವಿತರಣಾ ಕಂಪನಿಗಳ ವಿದ್ಯುಚ್ಛಕ್ತಿ ಬಳಕೆ ಪ್ರಮಾಣವು ಬೇಸಿಗೆ ತಿಂಗಳುಗಳಲ್ಲಿ ಏರುಗತಿಯಲ್ಲಿ ಸಾಗುತ್ತಿದ್ದು, ಹಿಂದಿನ ಹಂಚಿಕೆ ಪ್ರಮಾಣವನ್ನು ಮರು ಹಂಚಿಕೆ ಮಾಡಲು ವಿತರಣಾ ಕಂಪನಿಗಳು ಕೋರಿಕೆಯನ್ನು ಸಲ್ಲಿಸಿರುತ್ತವೆ. ವಿತರಣಾ ಕಂಪನಿಗಳ ವಿದ್ಯುತ್ ಬಳಕೆ ಪ್ರಮಾಣವು ಋತುಮಾನ ಆಧರಿಸಿ ಬದಲಾವಣೆಯಾಗುವ ಅಂಶವನ್ನು ಪರಿಗಣಿಸಿ ಪ್ರತಿ ತ್ರೈಮಾಸಿಕ ಬಳಕೆ ಪ್ರಮಾಣವನ್ನು ನಿರ್ಧರಿಸಿ ಹಂಚಿಕೆ ಮಾಡುವುದು ಸೂಕ್ತವಾಗುವುದೆಂಬ ನಿಟ್ಟಿನಲ್ಲಿ ಹಂಚಿಕೆ ಪ್ರಮಾಣವನ್ನು ಮರು ಪರಿಶೀಲಿಸಲಾಯಿತು. ಅದರಂತೆ ವಿತರಣಾ ಕಂಪನಿಗಳು ಕಳೆದ ಮೂರು ವರ್ಷಗಳ (2009ರಿಂದ 2011ರ ವರೆಗೆ) ಜನವರಿಯಿಂದ ಮಾರ್ಚ್ ವರೆಗಿನ ತಿಂಗಳಿನಲ್ಲಿ ಬಳಸಿದ ವಿದ್ಯುತ್ ಪ್ರಮಾಣದ ಸರಾಸರಿ ಬಳಕೆಯನ್ನು ಲೆಕ್ಕಚಾರ ಮಾಡಲಾಗಿದೆ. ಈ ಸರಾಸರಿ ಆಧಾರದ ಹಂಚಿಕೆ ಪ್ರಮಾಣವು ರಾಜ್ಯದ ದಿನ ನಿತ್ಯದ ಒಟ್ಟಾರೆ ಎಲ್ಲಾ ಮೂಲಗಳಿಂದ ದೊರಕುವ ವಿದ್ಯುತ್ ಪ್ರಮಾಣದಲ್ಲಿ ವಿತರಣಾ ಕಂಪನಿವಾರು ಹಂಚಿಕೆ ಮಾಡಬಹುದಾಗಿದೆ.

ಅದರಂತೆ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 81 ವಿಎಸ್‌ಸಿ 2011 ಬೆಂಗಳೂರು, ದಿನಾಂಕ: 11/01/2012

ಪ್ರಸ್ತಾವನೆಯಲ್ಲಿ ವಿವರಿಸಲಾದ ಸಂದರ್ಭದಲ್ಲಿ ಸರ್ಕಾರವು ವಿತರಣಾ ಕಂಪನಿಗಳಿಗೆ ಈ ಕೆಳಕಂಡಂತೆ ಶೇಕಡಾವಾರು ವಿದ್ಯುಚ್ಛಕ್ತಿ ಪ್ರಮಾಣವನ್ನು ಈ ಅದೇಶದಲ್ಲಿ ತಿಳಿಸಿರುವ ನಿಬಂಧನೆಗೊಳಪಟ್ಟು ಮರು ಹಂಚಿಕೆ ಮಾಡಲಾಗಿರುತ್ತದೆ.

ವಿತರಣಾ ಕಂಪನಿ	ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣ
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	47.88
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	8.46
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	19.35
ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	13.72
ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ	10.59
ಒಟ್ಟು	100.00

ನಿಬಂಧನೆಗಳು:

1. ಈ ಆದೇಶವು 11/01/2012 ರಿಂದ ಜಾರಿಗೆ ಬರಲಿದೆ ಹಾಗೂ ಮುಂದಿನ ಆದೇಶದ ವರೆಗೂ ಜಾರಿಯಲ್ಲಿರುತ್ತದೆ.
2. ಈ ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣವು ಮುಂಬರುವ ಎಲ್ಲಾ ಹೊಸ ದೀರ್ಘಾವಧಿ ವಿದ್ಯುತ್ ಯೋಜನೆಗಳಿಂದ ಲಭ್ಯವಿರುವ ವಿದ್ಯುತ್ ಪ್ರಮಾಣಕ್ಕೆ ಅನ್ವಯಿಸುತ್ತದೆ.
3. ಈ ಹಂಚಿಕೆ ಪ್ರಮಾಣವು ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಎಲ್ಲಾ ಸಾಂಪ್ರದಾಯಿಕ ವಿದ್ಯುತ್ ಮೂಲಗಳು, ಕೇಂದ್ರೀಯ ವಿದ್ಯುತ್ ಘಟಕಗಳು ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರುಗಳಿಂದ ನಿತ್ಯ ಲಭ್ಯವಿರುವ ವಿದ್ಯತ್ ಪ್ರಮಾಣವನ್ನು ಆಧರಿಸಿರುತ್ತದೆ. ವಿತರಣಾ ಕಂಪನಿಗಳು ಸ್ವತಂತ್ರವಾಗಿ ಖರೀದಿ ಮಾಡುವ ಅಲ್ಪಾವಧಿ ವಿದ್ಯುತ್ ಪ್ರಮಾಣವು ಈ ಹಂಚಿಕೆಯಲ್ಲಿ ಸೇರಿರುವುದಿಲ್ಲ.
4. ಈ ಶೇಕಡಾವಾರು ಹಂಚಿಕೆ ಪ್ರಮಾಣವು ಅಸಂಪ್ರದಾಯಿಕ ಇಂಧನ ಮೂಲಗಳ ವಿದ್ಯುಚ್ಛಕ್ತಿಗೆ ಅನ್ವಯಿಸುವುದಿಲ್ಲ.
5. ಈ ಶೇಕಡಾವಾರು ಹಂಚಿಕೆ ಪ್ರಮಾಣವನ್ನು ವಿತರಣಾ ಕಂಪನಿಗಳು ವಿದ್ಯುತ್ ಖರೀದಿ ಒಪ್ಪಂದ (PPA) ದ ಮೂಲಕ ಇತರೆ ಮೂಲಗಳಿಂದ ಖರೀದಿಸಿ ಬೇರೆಯಾಗಿ ಹಣ ಪಾವತಿ ಮಾಡುತ್ತಿರುವ ವಿದ್ಯುಚ್ಛಕ್ತಿ ಪ್ರಮಾಣವನ್ನು ಹೊರತುಪಡಿಸಿ ನಿಗದಿಪಡಿಸಲಾಗಿದೆ.
6. ಈ ಶೇಕಡಾವಾರು ಹಂಚಿಕೆಯು ವಿತರಣಾ ಕಂಪನಿಗಳು ಬಳಕೆಮಾಡದಿರುವ Wheeled energy ಗೆ ಅನ್ವಯಿಸುವುದಿಲ್ಲ.
7. ಈ ಆದೇಶವನ್ನು ದೈನಂದಿನ ಲಭ್ಯವಿರುವ ವಿದ್ಯುತ್ತನ್ನು ಹಂಚಿಕೆ ಮಾಡಲು ಪಾಲಿಸಬೇಕಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸರೇಶ್.ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್: 329 ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ:: ಗೋಕಾಕ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ (ಗೋಕಾಕ್ ಮಿಲ್ಸ್ ವಿಭಾಗ) ರವರ 4.5 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಕಿರು ಜಲ ವಿದ್ಯುತ್ ಯೋಜನೆಯನ್ನು 8.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಇಎನ್ 88 ಎನ್‌ಸಿಇ 2007, ದಿನಾಂಕ: 07/08/2007.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/SH–2/ಗೋಕಾಕ್ ಫಾಲ್ಸ್ ಎಂಹೆಚ್‌ಎಸ್/1381, ದಿನಾಂಕ: 12/16.05.2011 ಮತ್ತು ಕೆಆರ್‌ಇಡಿ/06/SH–2/ಗೋಕಾಕ್‌ಫಾಲ್ಸ್/2011/4276, ದಿನಾಂಕ: 03/04/11/2011.

ಪ್ರಸ್ತಾವನೆ:–

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಫೋರ್ಬ್ಸ್ ಗೋಕಾಕ್ ಲಿಮಿಟೆಡ್ ಕಂಪನಿಗೆ ಬೆಳಗಾಂ ಜಿಲ್ಲೆಯ ಗೋಕಾಕ್ ಫಾಲ್ಸ್‌ನಲ್ಲಿ ಅನುಷ್ಠಾನ ಮಾಡಲು ಅನುಮತಿಸಲಾದ 3.5 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಫಾಲ್ಸ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 4.5 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಮೆ: ಗೋಕಾಕ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ (ಗೋಕಾಕ್ ಮಿಲ್ಸ್ ವಿಭಾಗ) ಸಂಸ್ಥೆಯ 4.5 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಫಾಲ್ಸ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ

ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಕರ್ನಾಟಕ ವಿದ್ಯುತ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯೋಜನೆಗೆ ಸದರಿ ಯೋಜನೆಯಿಂದ ಯಾವುದೇ ಭಾದಕವಿರುವುದಿಲ್ಲವೆಂದು ತಿಳಿಸಿರುತ್ತಾರೆಂದು ವರದಿ ಮಾಡಿರುತ್ತಾರೆ.

ಆದುದರಿಂದ, ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 507 ಎನ್‌ಸಿಇ 2010, ಬೆಂಗಳೂರು, ದಿನಾಂಕ: 10/01/2012.

ಮೆ:: ಗೋಕಾಕ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ (ಗೋಕಾಕ್ ಮಿಲ್ಸ್ ವಿಭಾಗ) ಕಂಪನಿಗೆ ಬೆಳಗಾವಿ ಜಿಲ್ಲೆಯ ಗೋಕಾಕ್ ಫಾಲ್ಸ್‌ನಲ್ಲಿ ಅನುಷ್ಠಾನ ಮಾಡಲು ಅನುಮತಿಸಲಾದ 4.5 ಮೆಗಾ ವ್ಯಾಟ್ ಸಾಮರ್ಥ್ಯದ ಗೋಕಾಕ್ ಫಾಲ್ಸ್ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 4.5 ಮೆಗಾ ವ್ಯಾಟ್ ನಿಂದ 8.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿದೆ.

1. ಮೆ:: ಗೋಕಾಕ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ರವರು 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸರೇಶ್.ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್: 330

ಇಂಧನ ಸಚಿವಾಲಯ

ವಿಷಯ : ಮೆ. ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮತ್ತು ಅದರ ಸಮೂಹ ಕಂಪನಿಗಳಿಗೆ ಹಂಚಿಕೆಯಾಗಿರುವ ಪವನ ವಿದ್ಯುತ್ ಯೋಜನೆ ಸಾಮರ್ಥ್ಯದಲ್ಲಿ 102.75 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಇಂಇ 124 ಎನ್‌ಸಿಇ 2002, ದಿನಾಂಕ: 31-05-2002.
2) ಸರ್ಕಾರದ ಆದೇಶ ಸಂಖ್ಯೆ: ಡಿಇ 124 ಎನ್‌ಸಿಇ 2002, ದಿನಾಂಕ: 05-03-2003.
3) ಸರ್ಕಾರದ ಆದೇಶ ಸಂಖ್ಯೆ: ಇಎನ್ 210 ಎನ್‌ಸಿಇ 2005, ದಿನಾಂಕ: 20-08-2005.
4) ಸರ್ಕಾರದ ಆದೇಶ ಸಂಖ್ಯೆ: ಇಎನ್ 463 ಎನ್‌ಸಿಇ 2006, ದಿನಾಂಕ: 22-12-2006.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/VWTIPL-102.75 MW/2011/4380, ದಿನಾಂಕ: 21/23-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ: ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ (ಚಿತ್ರದುರ್ಗ ಜಿಲ್ಲೆಯಲ್ಲಿ 46 ಮೆ/ವ್ಯಾ) ಮತ್ತು (ದಾವಣಗೆರೆ ಜಿಲ್ಲೆಯಲ್ಲಿ 21 ಮೆ.ವ್ಯಾ) ಒಟ್ಟು 67 ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಸರ್ಕಾರಿ ಆದೇಶದಲ್ಲಿ ಮೆ: ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ರವರಿಗೆ (ಶಿವಮೊಗ್ಗ ಜಿಲ್ಲೆಯಲ್ಲಿ 15 ಮೆ.ವ್ಯಾ) ಮತ್ತು (ಗದಗ ಜಿಲ್ಲೆಯಲ್ಲಿ 24 ಮೆ.ವ್ಯಾ) ಒಟ್ಟು 39 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರಿ ಆದೇಶದಲ್ಲಿ ಮೆ. ಎನ್.ಇ.ಜಿ.- ಮೈಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿ ಚನ್ನೈ ಇವರಿಗೆ ಬಾಗಲಕೋಟೆ, ರಾಯಚೂರು, ಬೀದರ್, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಒಟ್ಟು 99.75 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರಿ ಆದೇಶದಲ್ಲಿ ಮೆ. ಎನ್.ಇ.ಜಿ.- ಮೈಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರನ್ನು ಮೆ: ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲಾಗಿತ್ತು.

ಮೆ. ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಕಂಪನಿ ಹಾಗೂ ಅದರ ಸಮೂಹ ಕಂಪನಿಗೆ ವಿವಿಧ ಆದೇಶಗಳಲ್ಲಿ ಹಂಚಿಕೆಯಾಗಿರುವ ಒಟ್ಟು ಸಾಮರ್ಥ್ಯದಲ್ಲಿ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಸ್ಥಳವು ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಗ್ಯವಿರುವುದಿಲ್ಲವಾದ್ದರಿಂದ ಈ ಸಾಮರ್ಥ್ಯವನ್ನು ಸರ್ಕಾರಕ್ಕೆ ಅಧ್ಯರ್ಪಿಸಲು ಸಿದ್ದರಿರುವುದಾಗಿ ತಿಳಿಸಿರುವುದರಿಂದ, ಅಭಿವೃದ್ಧಿದಾರರ ಕೋರಿಕೆಯನ್ನು ಪರಿಗಣಿಸುವಂತೆ ಮೇಲೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ	ಯೋಜನಾ ಸ್ಥಳ	ಅಧ್ಯರ್ಪಿಸಲು ಉದ್ದೇಶಿಸಿರುವ ಸಾಮರ್ಥ್ಯ (ಮೆಗಾ ವ್ಯಾಟ್‌ಗಳಲ್ಲಿ)
ಇನ್ 210 ಎನ್‌ಸಿಇ 2005 ದಿನಾಂಕ: 20-08-2005	ಗುಲ್ಬರ್ಗಾ ಜಿಲ್ಲೆಯ ಸುಗುರು, ಸುಗುರುತಾಂಡ, ಕಾಂಚನಹಾಳ, ಕಲ್ಲಗಿತಾಂಡ ಗ್ರಾಮಗಳಲ್ಲಿ	6 ಮೆ.ವ್ಯಾ
	ಗುಲ್ಬರ್ಗಾ ಜಿಲ್ಲೆಯ ಹೊಡ್ಯೆ ಬೀರನಹಳ್ಳಿ, ಗಂಜಿಗೀರ್, ರುಸ್ತಾಂಪುರ, ಹುವಿನಬಾವಿ	12.75 ಮೆ. ವ್ಯಾ

	ಗುಲ್ಬರ್ಗಾ ಜಿಲ್ಲೆಯ ಚಿಮ್ಮನಕೋಡು, ನರನಾಳ, ಮಾರಪಲ್ಲಿ	12 ಮೆ.ವ್ಯಾ.
	ಬೀದರ್ ಜಿಲ್ಲೆಯ ಮುತ್ತಂಗಿ	4.50 ಮೆ.ವ್ಯಾ.
	ಗುಲ್ಬರ್ಗಾ ಜಿಲ್ಲೆಯ ಕುಸರಾಂಪಲ್ಲಿ ಮತ್ತು ತುಮಕುಂಟ	3 ಮೆ. ವ್ಯಾ.
ಇನ್ 210 ಎನ್‌ಸಿಇ 2005 ದಿನಾಂಕ: 20-08-2005	ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಅದಗಾಳ	12 ಮೆ.ವ್ಯಾ.
	ಬೀದರ್ ಜಿಲ್ಲೆಯ ಈಶ್ವರನಾಯಕತಾಂಡ, ಜಾನಹಿಕೇರಿ, ಎಕಲಾರ, ಮುನ್ನಹನಾಳ ಮತ್ತು ಸಂತಪುರ	10.50 ಮೆ.ವ್ಯಾ.
	ಒಟ್ಟು	60.75 ಮೆ.ವ್ಯಾ.
ಇಂಇ 124 ಎನ್‌ಸಿಇ 2002 ದಿನಾಂಕ:31-05-2002	ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ	10 ಮೆ.ವ್ಯಾ.
	ಚಿತ್ರದುರ್ಗ ಜಿಲ್ಲೆಯ 3/4 ವೆಸ್ಟ್ ಆಫ್ ಜೋಗಿಮಟ್ಟಿ	12 ಮೆ.ವ್ಯಾ.
	ಒಟ್ಟು	22 ಮೆ.ವ್ಯಾ.
ಡಿಇ 124 ಎಸ್‌ಸಿಇ 2002 ದಿನಾಂಕ: 05-03-2003	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 1	4 ಮೆ.ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 2	3 ಮೆ. ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 4	3 ಮೆ. ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 5	8 ಮೆ.ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 6	2 ಮೆ. ವ್ಯಾ.
	ಒಟ್ಟು	20 ಮೆ.ವ್ಯಾ.
ಎಲ್ಲಾ ಸೇರಿ ಒಟ್ಟು		102.75

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 441 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ. ವೆಸ್ಟಾಸ್ ವಿಂಡ್ ಟೆಕ್ನಾಲಜಿ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಮತ್ತು ಅದರ ಸಮೂಹ ಕಂಪನಿಗಳಿಗೆ ಹಂಚಿಕೆಯಾಗಿರುವ ಪವನ ವಿದ್ಯುತ್ ಯೋಜನೆ ಸಾಮರ್ಥ್ಯದಲ್ಲಿ ಈ ಕೆಳಕಂಡಂತೆ 102.75 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆಯನ್ನು ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ	ಯೋಜನಾ ಸ್ಥಳ	ರದ್ದುಪಡಿಸಿರುವ ಸಾಮರ್ಥ್ಯ (ಮೆಗಾ ವ್ಯಾಟ್‌ಗಳಲ್ಲಿ
ಇಂಇ 124 ಎನ್‌ಸಿಇ 2002 ದಿನಾಂಕ: 31-05-2002	ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ	10 ಮೆ. ವ್ಯಾ
	ಚಿತ್ರದುರ್ಗ ಜಿಲ್ಲೆಯ 3/4 ವೆಸ್ಟ್ ಆಫ್ ಜೋಗಿಮಟ್ಟಿ	12 ಮೆ. ವ್ಯಾ
	ಒಟ್ಟು	**22 ಮೆ. ವ್ಯಾ**
ಡಿಇ 124 ಎನ್‌ಸಿಇ 2002 ದಿನಾಂಕ: 05-03-2003	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 1	4 ಮೆ. ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 2	3 ಮೆ. ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 4	3 ಮೆ. ವ್ಯಾ
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 5	8 ಮೆ. ವ್ಯಾ.
	ಗದಗ ಜಿಲ್ಲೆಯ ಕಪ್ಪದಗುಡ್ಡ ಏರಿಯಾ 6	2 ಮೆ. ವ್ಯಾ.
	ಒಟ್ಟು	**20 ಮೆ.ವ್ಯಾ**
ಇನ್ 210 ಎನ್‌ಸಿಇ 2005 ದಿನಾಂಕ: 20-08-2005	ಗುಲ್ಬರ್ಗಾ ಜಿಲ್ಲೆಯ ಸುಗುರು, ಸುಗುರುತಾಂಡ, ಕಾಂಚನಹಾಳ, ಕಲ್ಲಗಿತಾಂಡ ಗ್ರಾಮಗಳಲ್ಲಿ	6 ಮೆ. ವ್ಯಾ
	ಗುಲ್ಬರ್ಗಾ ಜಿಲ್ಲೆಯ ಹೊಡ್ಯೆ ಬೀರನಹಳ್ಳಿ, ಗಂಜಿಗೀರ್, ರುಸ್ತಾಂಪುರ, ಹುವಿನಬಾವಿ	12.75 ಮೆ. ವ್ಯಾ
	ಗುಲ್ಬರ್ಗಾ ಜಿಲ್ಲೆಯ ಚಿಮ್ಮನಕೋಡು, ನರನಾಳ, ಮಾರಪಲ್ಲಿ	12 ಮೆ.ವ್ಯಾ
	ಬೀದರ್ ಜಿಲ್ಲೆಯ ಮುತ್ತಂಗಿ	4.50 ಮೆ.ವ್ಯಾ
	ಗುಲ್ಬರ್ಗಾ ಜಿಲ್ಲೆಯ ಕುಸರಾಂಪಲ್ಲಿ ಮತ್ತು ತುಮಕುಂಟ	3 ಮೆ. ವ್ಯಾ
	ಬಾಗಲಕೋಟೆ ಜಿಲ್ಲೆಯ ಬಾದಾಮಿ ಮತ್ತು ಅದಗಾಳ	12 ಮೆ.ವ್ಯಾ
	ಬೀದರ್ ಜಿಲ್ಲೆಯ ಈಶ್ವರನಾಯಕತಾಂಡ, ಜಾನಹಿಕೇರಿ, ಎಕಲಾರ, ಮುನ್ನಹನಾಳ ಮತ್ತು ಸಂತಪುರ	10.50 ಮೆ.ವ್ಯಾ.
	ಒಟ್ಟು	**60.75 ಮೆ.ವ್ಯಾ**
	ಎಲ್ಲಾ ಸೇರಿ ಒಟ್ಟು	**102.75**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್. ಬಿ.ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ಪಿ.ಆರ್. 331

ಇಂಧನ ಸಚಿವಾಲಯ

ವಿಷಯ : ಮೆ. ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 2.55 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್ ರವರಿಗೆ ವರ್ಗಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಇನ್ 337 ಎನ್‌ಸಿಇ 2006, ದಿನಾಂಕ: 16–10–2006.
2) ಸರ್ಕಾರದ ಆದೇಶ ಸಂಖ್ಯೆ: ಇನ್ 09 ಎನ್‌ಸಿಇ 2007 ದಿನಾಂಕ: 12–1–2007.
3) ಸರ್ಕಾರದ ಆದೇಶ ಸಂಖ್ಯೆ: ಇನ್ 432 ಎನ್‌ಸಿಇ 2010 ದಿನಾಂಕ: 16–12–2010.
4) ಸರ್ಕಾರದ ಆದೇಶ ಸಂಖ್ಯೆ: ಇಎನ್ 318 ಎನ್‌ಸಿಇ 2011, ದಿನಾಂಕ: 26–07–2011.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/GH-2.55 (GNS-02,03 & 34)/RSR/2011/4499, ದಿನಾಂಕ: 30–11–2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಮೆ: ಆರ್ ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಆದೇಶದಲ್ಲಿ ಮೆ: ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಅನುಮತಿಸಿರುವ ಒಟ್ಟು ಸಾಮರ್ಥ್ಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ ಅಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ. ಸಾಮರ್ಥ್ಯವನ್ನು 30.60 ಮೆ.ವ್ಯಾ ಗೆ 25 ಮೆ.ವ್ಯಾ ವಿದ್ಯುತ್‌ನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದ್ದು ಹಾಗೂ ಈ ಯೋಜನೆಯನ್ನು ದಿ: 31–03–2011ರೊಳಗೆ ಅನುಷ್ಠಾನಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಹೆಚ್ಚಿಸಲು ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ: 31–12–2011 ರವರಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು: ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 2.55 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಮೆ: ಗೋಲ್ಡನ್ ಹ್ಯಾಚರೀಸ್ ಕಂಪನಿಗೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸದರಿ ಯೋಜನೆಯು ಖಾಸಗಿ ಜಮೀನಿನಲ್ಲಿ ಬರುತ್ತದೆ ಮತ್ತು ಈ ಯೋಜನೆಯನ್ನು ದಿನಾಂಕ: 31–12–2011ಕ್ಕೆ ಅನುಷ್ಠಾನಗೊಳಿಸಲಾಗುವುದೆಂದು ಸಹ ತಿಳಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 450 ಎನ್‌ಸಿಇ 2011, ಬೆಂಗಳೂರು, ದಿನಾಂಕ: 11–01–2012

ಮೆ: ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಿಂದ 2.55 ಮೆ.ವ್ಯಾ ಸಾಮರ್ಥ್ಯದ ಯೋಜನೆಯನ್ನು ಮೆ: ಗೋಲ್ಡನ್ ಹ್ಯಾಚರೀಸ್ ಕಂಪನಿಯವರಿಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ವರ್ಗಾಯಿಸಲಾಗಿದೆ:–

Schedule

Location and District	Description
Shirgaon village, Chikkodi Taluk Belgaum District	The identified potential comprises of two areas and mixture of hill and plains. Area A is spread N-E direction of Shirgaon. Whereas Area B is located in South of Girgaon and is spread in E-W directions. The Geographical co-ordinates of Area A & Area-B are as follows:- Area –A: Latitude : $16^0$27'32"- $16^0$30'0" N Longitude : $74^0$31'06" – $74^0$32'57" E Ridge peaks: 620 & 647m AMSL Area – B Latitude : $16^0$25'52"- $16^0$26'41" N Longitude : $74^0$30'52" – $74^0$32'41" E Ridge peaks: 720m AMSL Toposheet: 47 L/11

Land details of the Project

Village Name	Taluk & District	MW	Land Sy. No	No. of WTGs	Extent in land (Acres)	WTG Location No.
Shirgaon	Chikkodi/ Belgaum	0.85	194& 158	1 No.	2 Acres	GNS 02
		0.85	140/4	1 No.	2 Acres	GNS 03
		0.85	157	1 No.	2 Acres	GNS 34

1. ಮೆ: ಗೋಲ್ಡನ್ ಹ್ಯಾಚರೀಸ್ ರವರು ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 2011 ದಿನಾಂಕ: 06-01-2012ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಸದರಿ ಯೋಜನೆಯನ್ನು ದಿನಾಂಕ 31-1-2011ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಈ ಕುರಿತಂತೆ ಕ್ಯಾಪ್ಟಿವ್ ಅಭಿವೃದ್ಧಿದಾರರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು (committed letter)
3. ಮೆ: ಗೋಲ್ಡನ್ ಹ್ಯಾಚರೀಸ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು.
4. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತದ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್. ಬಿ.ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 332 ಇಂಧನ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸಹಾಯಕ ಸರ್ಕಾರಿ ಅಭಿಯೋಜಕರು -ವ-ಸಹಾಯಕ ಸರ್ಕಾರಿ ವಕೀಲರುಗಳ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಸಮಿತಿಯನ್ನು ಪುನರ್ ರಚಿಸುವ ಕುರಿತು.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ: ಒಇ 520 ಪಿಪಿಇ 2008, ದಿನಾಂಕ: 12-01-2009.

2) ತಿದ್ದುಪಡಿ ಸಂಖ್ಯೆ: ಒಇ 520 ಪಿಪಿಇ 2008, ದಿನಾಂಕ: 11-02-2009.

3) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎಲ್/ಸಿಶಾ-1ಎ /71/2011-12 ದಿನಾಂಕ: 30-12-2011.

ಪ್ರಸ್ತಾವನೆ :

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರುಗಳ ಹುದ್ದೆಗಳನ್ನು ಭರ್ತಿ ಮಾಡಲು ಮೇಲೆ (1)ರಲ್ಲಿ ಓದಲಾಗಿರುವ ದಿನಾಂಕ 12-01-2009ರ ಆದೇಶ ಮತ್ತು ಮೇಲೆ ಓದಲಾದ (2)ರಲ್ಲಿ ತಿದ್ದುಪಡಿಯಲ್ಲಿ ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು.

1.	ಸಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು	:	ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಸೆರೆಮನೆ, ಅಪರಾಧಗಳು ಮತ್ತು ಸಹಾಯಕ ಸೇವೆಗಳು) ವಿಧಾನ ಸೌಧ, ಬೆಂಗಳೂರು	:	ಸದಸ್ಯರು
3.	ಸರ್ಕಾರದ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ವಿಧಾನ ಸೌಧ, ಬೆಂಗಳೂರು	:	ಸದಸ್ಯರು
4.	ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ವಿಕಾಸ ಸೌಧ, ಬೆಂಗಳೂರು	:	ಸದಸ್ಯರು
5.	ರಿಜಿಸ್ಟ್ರಾರ್, ಜುಡಿಷಿಯಲ್. ಕರ್ನಾಟಕ ಉಚ್ಚ, ನ್ಯಾಯಾಲಯ, ಬೆಂಗಳೂರು	:	ಸದಸ್ಯರು
6.	ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕಾವೇರಿ ಭವನ, ಬೆಂಗಳೂರು	:	ಸದಸ್ಯರು
7.	ಶ್ರೀ ಎಸ್.ಪಿ. ಅಣ್ಣೇಗೌಡ ಜಂಟಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು	:	ಕಾರ್ಯದರ್ಶಿಗಳು

ಮೇಲೆ ಓದಲಾದ (3)ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಇವರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರುಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆಯ್ಕೆ ಸಮಿತಿಯನ್ನು ಪುನರ್ ರಚಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 486 ಪಿಪಿಇ 2011, ಬೆಂಗಳೂರು, ದಿನಾಂಕ: 10-01-2012

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರುಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆಯ್ಕೆ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ.

1. ಸಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು	:	ಅಧ್ಯಕ್ಷರು
2. ಸರ್ಕಾರದ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಸೆರೆಮನೆ, ಅಪರಾಧಗಳು ಮತ್ತು ಸಹಾಯಕ ಸೇವೆಗಳು) ವಿಧಾನ ಸೌಧ, ಬೆಂಗಳೂರು	:	ಸದಸ್ಯರು
3. ಸರ್ಕಾರದ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ವಿಧಾನ ಸೌಧ, ಬೆಂಗಳೂರು	:	ಸದಸ್ಯರು
4. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ವಿಕಾಸ ಸೌಧ, ಬೆಂಗಳೂರು	:	ಸದಸ್ಯರು
5. ರಿಜಿಸ್ಟ್ರಾರ, ಜುಡಿಷಿಯಲ್, ಕರ್ನಾಟಕ ಉಚ್ಚ, ನ್ಯಾಯಾಲಯ, ಬೆಂಗಳೂರು	:	ಸದಸ್ಯರು
6. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕಾವೇರಿ ಭವನ, ಬೆಂಗಳೂರು	:	ಕಾರ್ಯದರ್ಶಿ

ಸಭೆಯಲ್ಲಿ ಹಾಜರಿರಬೇಕಾದ ಸದಸ್ಯರ ಗಣಪೂರ್ತಿ (ಕೋರಂ) ಸಂಖ್ಯೆ: 3 (ಮೂರು) ಆಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು-ಬಿ)

ಪಿ.ಆರ್. 333

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಶೇಖರ್ ಭೋವಿ, ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ರವರ ವಿರುದ್ಧ ದಾಖಲಾದ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

ಉಲ್ಲೇಖ :
1) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಂ-2/ಸಿಆರ್ 1/2011 ಉಡುಪಿ. ದಿನಾಂಕ: 18-10-2011.
2) ತನಿಖಾಧಿಕಾರಿಯ ವರದಿ ಸಂ.ಪೊವಿ/ಕೆಎಲ್ಎ/ಇಐ/ಉಡುಪಿ/ಸಿಆರ್-1/2011, ದಿನಾಂಕ: 12-10-2011.
3) ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಯೋಗಿಕ ಪಂಚನಾಮೆ, ಸ್ವತ್ತುಗಳ ಪಟ್ಟಿ ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ದಿನಾಂಕ: 18-10-2010 ಪತ್ರದೊಡನೆ ಮೇಲೆ (2) ಮತ್ತು (3)ರಲ್ಲಿ ಓದಲಾದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಕಳುಹಿಸುತ್ತಾ, ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ಇವರ ವಿರುದ್ಧ ಉಡುಪಿಯ ಲೋಕಾಯುಕ್ತ ಠಾಣೆಯಲ್ಲಿ ದಾಖಲಿಸಿರುವ ಮೊಕದ್ದಮೆ ನಂ. 01/2011ರ ಪ್ರಕರಣದ ಸಂಬಂಧ ಅಪಾಧಿತನನ್ನು ಘನ ನ್ಯಾಯಾಲಯುದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ-1988ರ 19(1)(ಬಿ) ಕಲಂನ ಅಡಿಯಲ್ಲಿ ಸರ್ಕಾರದ ಮಂಜೂರಾತಿ ಕೋರಿರುತ್ತಾರೆ.

ಸರ್ಕಾರವು, ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಮೇಲೆ (1)ರಲ್ಲಿ ಓದಲಾದ ಪತ್ರ ಸಂಖ್ಯೆ ಲೋಕ್/ಐಎನ್ಎ(ಜಿ)/ಎಂ-2/ಸಿಆರ್-1/2011 ಉಡುಪಿ, ದಿನಾಂಕ: 18-10-2011 ರೊಡನೆ ಕಳುಹಿಸಿಕೊಟ್ಟ ಮೇಲೆ (2)ರಲ್ಲಿ ಓದಲಾದ ಅಂತಿಮ ವರದಿಯ ಜೊತೆಗಿದ್ದ ಮೇಲೆ (3)ರಲ್ಲಿ ಓದಲಾದ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ. ಬಿ. ನಾಗೇಶ್ ನಾಯಕ್ ಬೈರಂಪಳ್ಳಿ ಗ್ರಾಮ, ಹರಿಕಂಡಿಕೆ, ಉಡುಪಿ ತಾಲ್ಲೂಕ್, ಉಡುಪಿ ಜಿಲ್ಲೆರವರ ದಿನಾಂಕ: 10-01-011 ರ ಫಿರ್ಯಾದು.
2. ಉಡುಪಿಯ ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ ನಂ 01/2011ರ ಪ್ರಥಮ ವರ್ತಮಾನ ವರದಿ.
3. ದಿನಾಂಕ: 10-01-2011 ರ ಪ್ರಾಯೋಗಿಕ ಪಂಚನಾಮೆ.
4. ದಿನಾಂಕ: 10-01-2011ರ ಟ್ರ್ಯಾಪ್ ಮಹಜರ್
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: MRL/LOK/35/10-11, ದಿನಾಂಕ: 26-02-2011.
6. ಕೃತ್ಯ ನಡೆದ ಸ್ಥಳದ ನಕಾಶೆ,

7. ಫಿರ್ಯಾದಿ ಮತ್ತು ಸಾಕ್ಷಿಗಳಾದ ಈ ಕೆಳಕಂಡವರ ಹೇಳಿಕೆಗಳು
1. ಶ್ರೀ ಬಿ. ನಾಗೇಶ್ ನಾಯಕ್.
2. ಶ್ರೀ ಗಿರೀಶ್ ಡಿ. ಗೌರವ್‌ಗೋಳ
3. ಶ್ರೀ ಬಿ. ದೇವರಾಜಪ್ಪ.
8. ಲಂಚ ಕೇಳಲು ಆಧಾರವಾದ ಕಡತ/ದಾಖಲೆ: ಉಡುಪಿ ಹಿರಿಯಡ್ಕ ಠಾಣೆಯ ವ್ಯಾಪ್ತಿಯಲ್ಲಿ ಶ್ರೀ ಬಿ. ನಾಗೇಶ್ ನಾಯಕ್ ಇವರ ಮೇಲೆ ಬೈರಂಪಳ್ಳಿಯ ಶ್ರೀ ಪದ್ಮರಾಜ್ ರಾವ್ ಮತ್ತಿತರ ಒಟ್ಟು 6 ಜನರು ದಿನಾಂಕ: 20-03-2009 ರಂದು ಹಲ್ಲೆ ನಡೆಸಿದ್ದಕ್ಕೆ ಸಂಬಂಧಿಸಿದ ಉಡುಪಿಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ.ದ.ನ್ಯಾ.ದಂ.ದ ಸಿ.ಸಿ.ನಂ 3311/2009ರ ಆದೇಶದ ವಿರುದ್ದದ ಉಡುಪಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದ Crl A No. 64/2010
9. ಅಪಾಧಿತರಾದ ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ರವರ ಸಮಜಾಯಿಸಿ, ಹೇಳಿಕೆಗಳು.

ತನಿಖಾಧಿಕಾರಿಗಳಾದ ಶ್ರೀ ಬಿ.ಪಿ. ದಿನೇಶ್ ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ವಿಭಾಗ ಕರ್ನಾಟಕ ಲೋಕಾಯುಕ್ತ ಉಡುಪಿ, ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಉಡುಪಿಯ ಪೊಲೀಸ್ ಠಾಣೆ ಯಲ್ಲಿ ಗುನ್ನೆ ಸಂಖ್ಯೆ: 01/2011ರ ಲಂಚ ನಿರೋಧಕ ಕಾಯ್ದೆ 1988ರ ಕಲಮ 7 13(1)ಡಿ) ಜೊತೆಯಲ್ಲಿ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ಇವರು ಫಿರ್ಯಾದಿ ಶ್ರೀ ಬಿ. ನಾಗೇಶ್ ನಾಯಕ್, ವಯಸ್ಸು 47 ವರ್ಷ, ತಂದೆ: ಬಿ. ಕೃಷ್ಣಾ ನಾಯಕ್, ಬೈರಂಪಳ್ಳಿ, ಗ್ರಾಮ, ಹರಿಕಂಡಿಕೆ, ಉಡುಪಿ, ತಾಲ್ಲೂಕ್, ಉಡುಪಿ ಜಿಲ್ಲೆ ಇವರಿಂದ ಉಡುಪಿಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ದ ಸಿ.ಸಿ.ನಂ 3311/2009 ರ ಆದೇಶದನ್ವಯ ಆರೋಪಿಗಳಿಗೆ ನಿಡಲಾದ ಶಿಕ್ಷೆಯನ್ನು ಉಡುಪಿಯ ಜಿಲ್ಲಾ ಮತ್ತು ಸತ್ರ ನ್ಯಾಯಾಧಿಶರ ನ್ಯಾಯಾಲಯದ Crl A No. 64/2010 ಪ್ರಕರಣದಲ್ಲಿ ಖಾಯಂಗೊಳಿಸುವ ಸರ್ಕಾರಿ ಕೆಲಸವನ್ನು ಮಾಡಲು ರೂ. 10000-00 ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸಾರ್ವಜನಿಕ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ: 10-01-2011 ರಂದು ನ್ಯಾಯಾಲಯದ ಹಳೆ ಕಟ್ಟಡದ ಮೊದಲನೆಯ ಮಹಡಿಯ ತ್ವರಿತ ವಿಲೇವಾರಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ, ಕಛೇರಿಯಲ್ಲಿ ಬಿಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ಅಕ್ರಮ ಸಂಭಾವನೆಯಾದ ರೂ. 5000-00 ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆದ ವೇಳೆಯಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತ ಸಾರ್ವಜನಿಕ ಅಧಿಕಾರಿಯ ಬಲಗೈ ಹಸ್ತ ಮತ್ತು ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ ಫಿನಾಪಿಲೀನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಯನಿಕ ತಜ್ಞರ ಪರೀಕ್ಷಣಾ ವರದಿಯಲ್ಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಪಿರ್ಯಾದಿ ಹಾಗೂ ಆಪಾಧಿತ ಸಾರ್ವಜನಿಕ ಅಧಿಕಾರಿಯ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 5000-00ಗಳನ್ನು ಶ್ರೀ ಶೇಖರ್ ಭೋವಿ, ವಿಶೇಷ ಸರ್ಕಾರಿ ಅಭಿಯೋಜಕರು ಇವರಿಂದ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ -1988ರ ಕಲಂ 7,13(1)ಡಿರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ-1988ರ ಅನ್ವಯ ಕಲಂ 7,13(1)(ಡಿ) ಜೊತೆಗೆ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು ಮನಗಂಡಿದೆ. ಸರ್ಕಾರವು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977ರ ನಿಯಮ 5(5) ಮೇರೆಗೆ ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾಗಿದ್ದು ಸರ್ಕಾರ ಆದೇಶ ಸಂ. ಲಾ 31 ಎಲ್‌ಸಿಇ 2011, ದಿನಾಂಕ: 26-05-2011 ರನ್ವಯ ದಿನಾಂಕ: 10-01-2011 ರಿಂದಲೇ ಜಾರಿಗೆ ಬರುವಂತೆ ಸದರಿ ತಾತ್ಕಾಲಿಕ ಹುದ್ದೆಯಿಂದ ವಿಮುಕ್ತಿಗೊಳಿಸಿದೆ. ಆದ್ದರಿಂದ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ)ರ ಅಡಿ ಆಪಾದಿತ ಸಾರ್ವಜನಿಕ ಅಧಿಕಾರಿಯಾಗಿದ್ದ ಶ್ರೀ ಶೇಖರ್ ಭೋವಿರವರನ್ನು ಕಲಂ 7 ಮತ್ತು 13(ಡಿ) ಜೊತೆಗೆ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 553 ಪಿಪಿಇ 2011, ಬೆಂಗಳೂರು, ದಿನಾಂಕ: 09-01-2012

ಆರೋಪಿತರಾದ ಶ್ರೀ ಶೇಖರ್ ಭೋವಿ, ಈ ಹಿಂದೆ ವಿಶೇಷ ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಉಡುಪಿ ಇವರ ವಿರುದ್ಧ ಉಡುಪಿಯ ಲೋಕಾಯುಕ್ತ ಠಾಣೆಯಲ್ಲಿ ದಾಖಲಿಸಿರುವ ಮೊಕದ್ದಮೆ ನಂ. 01/2011ರ ಪ್ರಕರಣದಲ್ಲಿ ಲಂಚ ನಿರೋಧ ಕಾಯ್ದೆ - 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಮಾನ್ಯ ಲೋಕಾಯುಕ್ತರಿಗೆ ಈ ಮೂಲಕ ಅಭಿಯೋಜನಾ ಮಂಜೂರಾತಿಯನ್ನು ನೀಡಿದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿರ್ವಹಣೆ ನಿಯಮಾವಳಿ -1977ರ ನಿಯಮ 19(1)ರ ನ್ವಯ ಈ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ: 09-01-2012ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್.ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು-ಬಿ)

ಪಿ.ಆರ್. 334

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ತನ್ವೀರ್ ಅಹಮದ್, ಪಿ.ಐ., ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: ಡಿಇ(2)ಸಿಓಪಿ/229/2009 ದಿ: 26-11-2009
2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)82/2009-10 ದಿನಾಂಕ: 22-9-2010
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 17-6-2011
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)82/2009-10 ದಿನಾಂಕ: 18-8-2011

ಪ್ರಸ್ತಾವನೆ :

ಶ್ರೀ ತನ್ವೀರ್ ಅಹಮದ್, ಪಿ.ಐ., ಇವರು ಬೆಂಗಳೂರಿನ ಜೆ.ಸಿ. ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಉದಾಸೀನತೆ, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

> "ಶ್ರೀ ತನ್ವೀರ್ ಅಹಮದ್, ಪಿ.ಐ., ಆದ ನೀವು ಜೆ.ಸಿ. ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅರ್ಜಿದಾರರಾದ ಶ್ರೀ ಮೊಹಮ್ಮದ್ ಮುಸ್ತಾಕ್ ಅಹಮದ್, ನಂ. 20/2, ನೆಲಮಹಡಿ, 1ನೇ ಕ್ರಾಸ್, ಮಾರಪ್ಪ ಗಾರ್ಡನ್, ಬೆಂಗಳೂರು ನಗರ ರವರ ಮನೆಯಲ್ಲಿ ದಿ: 11-12-2008 ರಂದು ಕಳ್ಳತನವಾಗಿರುವ ಬಗ್ಗೆ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರನ್ನು ನೀವು ದಾಖಲಿಸಿಕೊಳ್ಳದೆ ಸದರಿ ದೂರಿನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ದೂರಿಗೆ ಯಾವುದೇ ಸ್ವೀಕೃತಿಯನ್ನು ನೀಡದೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಪರಿಶೀಲಿಸದೇ ಶ್ವಾನ ದಳದಿಂದ ಸ್ಥಳವನ್ನು ಪರಿಶೀಲಿಸದೇ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸದೇ, ನೀವು ಅರ್ಜಿದಾರರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದೆ ಆರೋಪಿಗಳನ್ನು ಪತ್ತೆ ಹಚ್ಚಿ ನಿಮ್ಮ ಒಡವೆಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಕೊಡುತ್ತೇನೆಂದು ಅರ್ಜಿದಾರರಿಗೆ ಕೇವಲ ಆಶ್ವಾಸನೆಯನ್ನು ಮಾತ್ರ ನೀಡಿ ಅರ್ಜಿದಾರರು ಈ ಬಗ್ಗೆ ಹಲವಾರು ಬಾರಿ ಠಾಣೆಗೆ ಬಂದು ನಿಮ್ಮನ್ನು ವಿಚಾರಿಸಿದರೂ ಸಹ ಅರ್ಜಿದಾರರ ದೂರಿನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ನಂತರದಲ್ಲಿ ಮೇಲಾಧಿಕಾರಿಗಳಿಂದ ಒತ್ತಡ ತಂದಾಗ ದಿನಾಂಕ: 07-02-2009 ರಂದು ವಿಳಂಬವಾಗಿ ದೂರು ದಾಖಲಿಸಿರುತ್ತೀರಿ. ಈ ರೀತಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾದ ನೀವು ದೂರನ್ನು ದಾಖಲಿಸದೆ ನಿಮ್ಮ ಕರ್ತವ್ಯದಲ್ಲಿ ಉದಾಸೀನತೆ, ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 26-11-2009ರ ಆದೇಶದಲ್ಲಿ ಅರ್ಜಿದಾರ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೆಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 22-9-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯದಲ್ಲಿ ಉದಾಸೀನತೆ, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 68 ಪೊಸಿಆ 2011, ಬೆಂಗಳೂರು, ದಿನಾಂಕ: 07-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ತನ್ವೀರ್ ಅಹಮದ್, ಪಿ.ಐ. ಬೆಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 335

ಒಳಾಡಳಿತ ಸಚಿವಾಲಯ

ವಿಷಯ : ದತ್ತ ಮಾಲಾ ಅಭಿಯಾನ ಕಾರ್ಯಕ್ರಮ ಸಂಬಂಧ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನು ನೇಮಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಜೆ1/ಎಂಎಎಜಿ/80/2011-12 ದಿನಾಂಕ: 4.11.2011.

2) ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಜೆ1/ದತ್ತಮಾಲಾ/80/2011-12 ದಿನಾಂಕ: 4.11.2011.

ಪ್ರಸ್ತಾವನೆ :

ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ದತ್ತ ಮಾಲಾ ಅಭಿಯಾನ ಕಾರ್ಯಕ್ರಮ ಸಂಬಂಧ ದಿನಾಂಕ 9.11.2011 ರಿಂದ 13.11.2011 ರವರೆಗೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ 24 ಅಧಿಕಾರಿಗಳನ್ನು ಸಿಆರ್‌ಪಿಸಿ ಕಲಂ 21 ರನ್ವಯ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ನೇಮಿಸಿ ಮೇಲೆ ಓದಲಾದ ಕ್ರಮಸಂಖ್ಯೆ (2) ದಿನಾಂಕ 4.11.2011 ರ ಪತ್ರದಲ್ಲಿ ಸರ್ಕಾರದ ಘಟನೋತ್ತರ ಅನುಮೋದನೆ ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಕೈಗೊಂಡಿರುವ ಕ್ರಮವನ್ನು ಅನುಮೋದಿಸಿ ಘಟನೋತ್ತರ ಅನುಮೋದನೆ ನೀಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 516 ಎಸ್‌ಎಸ್‌ಟಿ 2011, ಬೆಂಗಳೂರು, ದಿನಾಂಕ: 07-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಅಧಿಕೃತ ಜ್ಞಾಪನ ಸಂಖ್ಯೆ: ಜೆ1/ದತ್ತಮಾಲಾ/80/2011-12, ದಿನಾಂಕ 4.11.2011 ರಲ್ಲಿ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನು ನೇಮಿಸಿರುವುದಕ್ಕೆ ಸರ್ಕಾರದ ಘಟನೋತ್ತರ ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಈ. ಪಾಪಣ್ಣ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ)

ಪಿ.ಆರ್. 337

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮಲ್ಲೇಗೌಡ, ನಿವೃತ್ತ ಎ.ಎಸ್.ಐ., ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರ ಹಾಗೂ ಉಪ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳೂರು, ಇವರ ಆದೇಶ ಸಂಖ್ಯೆ: ಡಿಇ/11/ಆರ್.6/ಡಿಸಿಪಿ(ಕೇ)03 ದಿ: 15-11-2003

2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 25/ಅಪೀಲು/08 ದಿನಾಂಕ: 03-7-08

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 06-01-10

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)5/2010-11 ದಿನಾಂಕ: 23-11-2011

ಪ್ರಸ್ತಾವನೆ :

ಶ್ರೀ ಮಲ್ಲೇಗೌಡ, ನಿವೃತ್ತ ಎ.ಎಸ್.ಐ., ಬೆಂಗಳೂರು, ಇವರು ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಬೆಂಗಳೂರು, ಇಲ್ಲಿ ಎಚ್.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಧಿಕಾರ ದುರುಪಯೋಗ ಮತ್ತು ಕರ್ತವ್ಯದಲ್ಲಿ ಅತೀವ ದುರ್ನಡತೆ ಎಸಗಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

> "ಶ್ರೀ ಮಲ್ಲೇಗೌಡ, ಹೆಚ್.ಸಿ.-1354, ಹೈಗ್ರೌಂಡ್ಸ್ ಠಾಣೆ ಆದ ನೀವು ಜುಲೈ 2001ರಲ್ಲಿ 50,000-00 ರೂ.ಗಳನ್ನು ಶ್ರೀ ತ್ಯಾಗರಾಜನಗರದ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಸಾಲ ಪಡೆಯುವ ಸಲುವಾಗಿ ಪೊಲೀಸ್ ಇನ್ಸ್‌ಪೆಕ್ಟರ್ ರವರ ಸೀಲನ್ನು ಸಂಬಳ ಚೀಟಿ ಮತ್ತು ಸಂಬಳ ಪ್ರಮಾಣ ಪತ್ರದ ಮೇಲೆ ಹಾಕಿ ಬ್ಯಾಂಕಿಗೆ ನೀಡಿ ಸಾಲ ಪಡೆದು ಪೊಲೀಸ್ ಇನ್ಸ್‌ಪೆಕ್ಟರ್‌ರವರ ಅಧಿಕಾರ ವ್ಯಾಪ್ತಿಯನ್ನು ದುರುಪಯೋಗಪಡಿಸಿಕೊಂಡು ಸಂಜ್ಞೇಯ ಪ್ರಕರಣದಲ್ಲಿ ಭಾಗಿಯಾಗಿ ಶಿಸ್ತು ಇಲಾಖೆಯಲ್ಲಿರುವ ನೀವು ನಿಮ್ಮ ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಕಮೀಷನರ್, ಕೇಂದ್ರ ವಿಭಾಗ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 15-11-2003ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರುವಂತೆ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 03–7–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಮತ್ತು ಕರ್ತವ್ಯದಲ್ಲಿ ಅತೀವ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 51 ಪೊಸಿಅ 2010 ಬೆಂಗಳೂರು, ದಿನಾಂಕ: 07–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಮಲ್ಲೇಗೌಡ, ನಿವೃತ್ತ ಎ.ಎಸ್.ಐ., ಹೈಗ್ರೌಂಡ್ಸ್ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 338

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಈ ಸಂಸ್ಥೆಗೆ 2011–12ನೇ ಸಾಲಿಗೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಬ್ಬಂದಿ/35/2010–11, ದಿನಾಂಕ: 09.12.2011
2. ಸರ್ಕಾರದ ಆದೇಶ ಸಂಖ್ಯೆ: ಸಿಐ 100 ಎಸ್‌ಜಿಎಫ್ 2011, ದಿನಾಂಕ: 23–06–2011.
3. ಸರ್ಕಾರದ ಆದೇಶ ಸಂಖ್ಯೆ: ಸಿಐ 100 ಎಸ್‌ಜಿಎಫ್ 2011, ದಿನಾಂಕ: 24–08–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರಲ್ಲಿರುವ ದಿನಾಂಕ: 09.12.2011ರ ಪತ್ರದಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ 2011–12ನೇ ಸಾಲಿನ ಆಯವ್ಯಯದಲ್ಲಿ ₹ 100.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಇದರಲ್ಲಿ 3 ಹಾಗೂ 4ನೇ ತ್ರೈಮಾಸಿಕಕ್ಕೆ ಒಟ್ಟು ₹ 50.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಮೇಲೆ ಓದಲಾದ (2) ಮತ್ತು (3)ರಲ್ಲಿರುವ ಆದೇಶಗಳಲ್ಲಿ ಮೊದಲನೆ ಹಾಗೂ 2ನೇ ತ್ರೈಮಾಸಿಕಕ್ಕೆ ಒಟ್ಟು ₹ 50.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 100 ಎಸ್‌ಜಿಎಫ್ 2011, ಬೆಂಗಳೂರು, ದಿನಾಂಕ: 10.01.2012

ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಈ ಸಂಸ್ಥೆಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2852–08–201–0–04–059ರಡಿ ಒದಗಿಸಿರುವ ಅನುದಾನದಲ್ಲಿ ಮೂರನೆ ತ್ರೈಮಾಸಿಕ ಕಂತಾಗಿ ₹ 25.00 ಲಕ್ಷಗಳನ್ನು (ರೂಪಾಯಿ ಇಪ್ಪತ್ತೈದು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ಹಣವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸುವುದು ಹಾಗೂ ಹಣ ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.

ಹಣ ಸಂದಾಯದ ರಸೀದಿ ಮೇಲೆ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರ ಮೇಲು ರುಜು ಪಡೆದು ಸದರಿ ಹಣವನ್ನು ಡ್ರಾ ಮಾಡುವ ಅಧಿಕಾರವನ್ನು ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರಿಗೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು ಟಿಪ್ಪಣಿ ಸಂಖ್ಯೆ: ವಾಕೈ 241 ಆಂಆಸ(1) 2011, ದಿನಾಂಕ: 28.12.2011 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸರ್ಕಾರದ ಆಡಳಿತ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಿವಶಂಕರ ನಾಯಕ್ ಎಲ್

ಪೀಠಾಧಿಕಾರಿ (ಸಕ್ಕರೆ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 339

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸುಗೂರು ಇಲ್ಲಿ 2008–09 ಮತ್ತು 2009–10ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆ/ಯೋಜನೆಗಳಡಿ ಬಿಡುಗಡೆಯಾದ ಅನುದಾನವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ–ಆದೇಶ

ಓದಲಾಗಿದೆ: ಅಪರ ನಿಬಂಧಕರು ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ–23/2011/ಎಆರ್‌ಇ–6, ದಿನಾಂಕ: 01–12–2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ: 01–12–2011ರ ಅರೆ ಸರ್ಕಾರಿ ಪತ್ರದಲ್ಲಿ ಅಪರ ನಿಬಂಧಕರು ವಿಚಾರಣೆಗಳು–6, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸುಗೂರು ಇಲ್ಲಿ 2008–09 ಮತ್ತು 2009–10ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆ/ಯೋಜನೆಗಳಡಿ ಬಿಡುಗಡೆಯಾದ ಅನುದಾನವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿ/ನೌಕರರ ವಿರುದ್ಧ ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರಡಿ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ–1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರಡಿ ಕಳುಹಿಸಿರುವ ತಮ್ಮ ವರದಿಯಲ್ಲಿ ಶ್ರೀ ಎ. ಆಂಜನೇಯ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಲಿಂಗಸುಗೂರು ಮತ್ತಿತರ ಅಧಿಕಾರಿ/ನೌಕರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸುಗೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2008–09 ಮತ್ತು 2009–10ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆ/ಯೋಜನೆಗಳಡಿ ಬಿಡುಗಡೆಯಾದ ಅನುದಾನವನ್ನು ಕಾಮಗಾರಿಗಳು ಪೂರ್ಣಗೊಳ್ಳದೇ ಇದ್ದರೂ ಸಹ ಅಪೂರ್ಣಗೊಂಡ ಕಾಮಗಾರಿಗಳಿಗೆ ಹಣ ಪಾವತಿಸಿ ಸರ್ಕಾರದ ಅನುದಾನವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿರುವುದು ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಅವರುಗಳು ಎಸಗಿರುವ ಅಕ್ರಮಗಳು ಹಾಗೂ ಹಣ ದುರುಪಯೋಗ ಎಸೆಗಿರುವ ದುರ್ನಡತೆಗೆ ಸಂಬಂಧಿಸಿದಂತೆ ಅವರುಗಳ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 (ಎ) ರಡಿಯಲ್ಲಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತಕ್ಕೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ–1 ರವರ ಶಿಫಾರಸ್ಸಿನಂತೆ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಅದಕ್ಕಾಗಿ ವಿವರವಾದ ಇಲಾಖಾ ವಿಚಾರಣೆ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14 (ಎ) ರಡಿಯಲ್ಲಿ ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತಕ್ಕೆ ವಹಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಕೆಳಕಂಡ ಆದೇಶ.

1. ಶ್ರೀ ಎ. ಆಂಜನೇಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
2. ಶ್ರೀ ಎಂ.ಎನ್.ಪಾಟೀಲ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
3. ಶ್ರೀ ವೀರಭದ್ರಪ್ಪ, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
4. ಶ್ರೀ ಸೈಯದ್ ಅಬಿದ ಅಲಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.

ಆದೇಶ ಸಂಖ್ಯೆ: ಗ್ರಾಅಪ 47 ಇಎನ್‌ಕ್ಯೂ 2011, ಬೆಂಗಳೂರು, ದಿನಾಂಕ: 03–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕಾರಿ/ನೌಕರರ ಇವರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

1. ಶ್ರೀ ಎ. ಆಂಜನೇಯ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
2. ಶ್ರೀ ಎಂ.ಎನ್.ಪಾಟೀಲ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
3. ಶ್ರೀ ವೀರಭದ್ರಪ್ಪ, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.
4. ಶ್ರೀ ಸೈಯದ್ ಅಬಿದ ಅಲಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಲಿಂಗಸಗೂರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಆರ್. ಶಿವಾನಂದಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಪಿ.ಆರ್. 340

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮವನ್ನು ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ದಿನಾಂಕ 09/12/2011ರ ಪತ್ರದ ಸಂಖ್ಯೆ:ಮುಇಂ/ಸನೀ(ಉ)ವ/ಭೂಸ್ವಾಪ್ರ/ 2011-12/627.

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ದಾಮಪ್ರ 2007, ದಿನಾಂಕ 25/10/2008.

ಪ್ರಸ್ತಾವನೆ :

ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮವನ್ನು ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ಥಳಾಂತರಿಸಲು ಹೆಚ್ಚುವರಿ ಮೊತ್ತ ರೂ. 70,000/-ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ (1)ರಲ್ಲಿ ಓದಲಾದ ದಿನಾಂಕ 09/12/11ರ ಪತ್ರದಲ್ಲಿ ಕೋರಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ವಜ್ಜಲ ಗ್ರಾಮಸ್ಥರು ರಿಟ್ ಅರ್ಜಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರ ಪ್ರಸ್ತಾವನೆಯಂತೆ ರೂ. 625.00 ಲಕ್ಷಗಳ ಮೊತ್ತದಲ್ಲಿ ಕೈಗೊಳ್ಳಲು ಮೇಲೆ (2)ರಲ್ಲಿ ಓದಲಾದ ದಿನಾಂಕ 25/10/08ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ವಜ್ಜಲ ಗ್ರಾಮದ ಪುನರ್ವಸತಿ ಕೇಂದ್ರದ ಜಮೀನು ಖರೀದಿಗಾಗಿ ಪ್ರಾಥಮಿಕ ಅಂದಾಜಿನಂತೆ ಜಮೀನು ಭೂಸ್ವಾಧೀನ ವೆಚ್ಚವನ್ನು 25.00 ಲಕ್ಷ ರೂ.ಗಳಿಗೆ ನಿಗದಿ ಮಾಡಿ ಈ ಸಂಬಂಧ ಹಿರೇಓತಗೇರಿ 29-27 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಸದರಿ ಜಮೀನಿನ ದರವನ್ನು ಪ್ರತಿ ಎಕರೆಗೆ ರೂ. 3.00 ಲಕ್ಷ ಪರಿಹಾರ ನೀಡುವಂತೆ ಒಪ್ಪಂದದ ಐತೀರ್ಮ ರಚಿಸಿದ್ದು, ಸದರಿ ಐತೀರ್ಪಿನಂತೆ ಜಮೀನು ಮಾಲೀಕರಿಗೆ ರೂ. 89,14,450/-ಗಳ ಪರಿಹಾರ ಪಾವತಿ ಮಾಡಲಾಗಿದೆ. ಇದರಿಂದಾಗಿ ಜಮೀನು ಖರೀದಿಗಾಗಿ ಅಂದಾಜು ಮೌಲ್ಯಕ್ಕಿಂತ ರೂ. 64,14,450/-ಗಳನ್ನು ಹೆಚ್ಚುವರಿ ಹಣ ವೆಚ್ಚ ಮಾಡಲಾಗಿದೆ. ಈ ಹೆಚ್ಚುವರಿ ಮೊತ್ತವನ್ನು ಕಟ್ಟಡಗಳಿಗಾಗಿ ಇರಿಸಲಾದ ಮೊತ್ತದಲ್ಲಿ ಪಾವತಿ ಮಾಡಿದ್ದು, ಸದರಿ ಗ್ರಾಮದ ಕಟ್ಟಡಗಳ ಮೌಲ್ಯಗಳ ಐತೀರ್ಮ ರಚಿಸಲು ಇನ್ನೂ ಅಂದಾಜು 70.00 ಲಕ್ಷ ರೂ.ಗಳ ಹೆಚ್ಚುವರಿ ಮೊತ್ತದ ಅವಶ್ಯಕತೆಯಿದ್ದು, ಸದರಿ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಹೆಚ್ಚುವರಿ ಮೊತ್ತವು ಅಂದಾಜು ಮೊತ್ತ ರೂ. 695.00 ಲಕ್ಷಕ್ಕೆ ಹೋಲಿಸಿದಾಗ ಶೇ. 11.20ರಷ್ಟು ಹೆಚ್ಚುವರಿಯಾಗುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ: ಸನೀಇ 05 ಮಸಾವಿ 2011, ಬೆಂಗಳೂರು, ದಿನಾಂಕ: 11ನೇ ಜನವರಿ 2012

ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮದ ಸ್ಥಳಾಂತರಕ್ಕಾಗಿ ಹಿರೇಓತಗೇರಿ ಗ್ರಾಮದ ಕಟ್ಟಡಗಳ ಮೌಲ್ಯಗಳ ಐತೀರ್ಮ ರಚಿಸಲು ಹೆಚ್ಚುವರಿ ಮೊತ್ತ ರೂ. 70.00 ಲಕ್ಷಗಳನ್ನು (ಎಪ್ಪತ್ತು ಲಕ್ಷ ರೂ.ಗಳು ಮಾತ್ರ) ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜಿನಲ್ಲಿ ಸೇರಿಸಿ ಅನುಮೋದನೆ ಪಡೆದುಕೊಳ್ಳುವ ಹಾಗೂ ನಿಯಮಾನುಸಾರ ಪಾವತಿಸುವ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702-00-101-1-02-139-ಹೊಸ ಕಾಮಗಾರಿಗಳು" ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ:ಎಫ್‌ಡಿ 01 ಟಿಎಫ್‌ಪಿ 2011 ದಿನಾಂಕ 28/09/2011 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ

ಪಿ.ಆರ್. 341

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಸ್.ಡಿ. ಪರಮಾಜ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ: 1. ಅಧಿಸೂಚನೆ ಸಂಖ್ಯೆ: ಸಿಆಸುಇ 56 ಸೇಲೋಯು 2008 ದಿನಾಂಕ: 6.8.2008.

2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 56(3) ಸೇಲೋಯು 2008(ಭಾ) ಬೆಂಗಳೂರು, ದಿನಾಂಕ: 27.5.2009.

3. ಕರ್ನಾಟಕ ಲೋಕಾಯುಕ್ತದ ನಿಬಂಧಕರಿಂದ ಸ್ವೀಕೃತವಾಗಿರುವ ಪತ್ರ ಸಂ: ಕ.ಲೋ./ಸಿಬ್ಬಂದಿ(1)/111/2006-07 ದಿನಾಂಕ : 18.10.2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 6.8.2008 ರ ಅಧಿಸೂಚನೆಯಲ್ಲಿ ಶ್ರೀ ಎಸ್.ಡಿ. ಪರಮಾಜ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಎರಡು ವರ್ಷಗಳ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ಮೇಲೆ (2)ರಲ್ಲಿ ಓದಲಾದ ದಿ: 27.5.2009ರ ಆದೇಶದಲ್ಲಿ ನಿಗದಿಪಡಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ದಿ: 18.10.2011 ರ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತದ ನಿಬಂಧಕರು, ದಿ: 30.09.2011ರ ಮನವಿಯಲ್ಲಿ ಶ್ರೀಯುತರು ಆದೇಶ ಸಂ: ಎಲ್‌ಎಡಬ್ಲ್ಯೂ 147 ಎಲ್‌ಎಸಿ 2009, ದಿ: 30.9.2010 ಮತ್ತು ದಿ: 13.10.2010ರನ್ವಯ ಅವರು ಸೇವೆಯಲ್ಲಿದ್ದಾಗಿನ ಅವಧಿಯಲ್ಲಿನ ವೇತನವನ್ನು ₹ 65,830/- ಗೆ ಹಾಗೂ ನಿವೃತ್ತಿ ವೇತನವನ್ನು ದಿ: 18.8.2008ರಿಂದ ಜಾರಿಗೆ ಬರುವಂತೆ ₹ 32,915/- ಗೆ ಮಹಾಲೇಖಾಪಾಲರು ನಿಗದಿಪಡಿಸಿರುವುದರಿಂದ ಇವರನ್ನು ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತದಲ್ಲಿ ನೇಮಕ ಮಾಡಿದ ಅವಧಿಯ ವೇತನವನ್ನು ಪುನರ್ ನಿಗದಿಪಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂ: ಸಿಆಸುಇ 220 ಸೇಲೋಯು 2011, ಬೆಂಗಳೂರು, ದಿನಾಂಕ: 10.01.2012

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರು (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 8.8.2008 ರಿಂದ 7.8.2010ರವರೆಗೆ ಕರ್ತವ್ಯ ನಿರ್ವಹಿಸಿರುವ ಶ್ರೀ ಎಸ್.ಡಿ. ಪರಮಾಜ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ಮರು ನೇಮಕಾತಿ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 313 (ಬಿ) ಪ್ರಕಾರ ₹ 24,420/- ಗಳಿಗೆ ಪುನರ್ ನಿಗದಿಪಡಿಸಲಾಗಿದೆ. ಈ ಮರುನೇಮಕಾತಿ ವೇತನದೊಂದಿಗೆ ಶ್ರೀಯುತರು ನಿವೃತ್ತಿ ಸಮಯದಲ್ಲಿ ಪಡೆಯುತ್ತಿದ್ದ ಮೂಲ ವೇತನವಾದ ₹ 65,830/- ಗಳಿಗೆ ಲಭ್ಯವಾಗುವ ಡಿ.ಎ/ಹೆಚ್.ಆರ್.ಎ./ಸಿಸಿಎ ಗಳನ್ನು ಪಡೆಯಬಹುದು. ಇದಕ್ಕೆ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ.

1. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಈ ಅಧಿಕಾರಿಯವರು ಅರ್ಹರಾಗಿರುವುದಿಲ್ಲ.

2. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1248 ಸೇ-3/2011 ದಿನಾಂಕ: 8.12.2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ನಾಗೇಶ್ ಪಾಟಕ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

ಪಿ.ಆರ್. 342

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಪರಿಶೋಧನಾಧಿಕಾರಿ ಹುದ್ದೆಯನ್ನು ತಾತ್ಕಾಲಿಕವಾಗಿ ಮುಂದುವರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 460 ಸಅಸೇ 2007 ದಿನಾಂಕ: 25.02.2008
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 26 ಸಿಶಾಸೇ 2008, ದಿನಾಂಕ: 23-05-2008
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 45 ಸಿಶಾಸೇ 2009, ದಿನಾಂಕ: 25-04-2009
4) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 69 ಸಅಸೇ 2010, ದಿನಾಂಕ: 17-09-2010.
5) ಸರ್ಕಾರಿ ಆದೇಸ ಸಂಖ್ಯೆ: ಸಿಆಸುಇ 163 ಸಅಸೇ 2011 ದಿನಾಂಕ: 19-03-2011.
6) ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 22 ಸಿಎಎಂ 2009, ದಿನಾಂಕ: 10-11-2011

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿ ಒಂದು ಲೆಕ್ಕಾಧೀಕ್ಷಕರ ಹುದ್ದೆಯನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (2) ಮತ್ತು (3) ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಾಧಿಕಾರಿ ಹುದ್ದೆಯನ್ನು ಲೆಕ್ಕಪರಿಶೋಧನಾಧಿಕಾರಿ ಹುದ್ದೆಯನ್ನಾಗಿ ಉನ್ನತೀಕರಿಸಿ ಮುಂದುವರಿಸಲಾಗಿದೆ. ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಆದೇಶದಲ್ಲಿ ಆರ್ಥಿಕ ಇಲಾಖೆಯಲ್ಲಿನ ನಿಯಂತ್ರಕರು (ಲೆಕ್ಕಪತ್ರ ನಿರ್ವಹಣೆ) ಶಾಖೆಯಲ್ಲಿನ ಲೆಕ್ಕಪರಿಶೋಧನಾಧಿಕಾರಿ ಹುದ್ದೆಯನ್ನು ದಿನಾಂಕ: 25-02-2009 ರಿಂದ 24-02-2011 ರವರೆಗೆ ಮತ್ತು ಲೆಕ್ಕಾಧೀಕ್ಷಕರ ಹುದ್ದೆಯನ್ನು ದಿನಾಂಕ: 25-02-2011 ರಿಂದ 24-02-2012 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿತ್ತು ಮೇಲೆ (6) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯಲ್ಲಿನ ಲೆಕ್ಕಪತ್ರ ನಿರ್ವಹಣೆ ಶಾಖೆಯ "ಲೆಕ್ಕಪರಿಶೋಧನಾಧಿಕಾರಿ" ಹುದ್ದೆಯ ಶಾಖೆಯಲ್ಲಿ ಅತ್ಯಗತ್ಯವಾಗಿರುವ ಕಾರಣ ಈ ಹುದ್ದೆಯನ್ನು ದಿನಾಂಕ: 25-02-2012 ರಿಂದ ಮತ್ತೆ ಒಂದು ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 611 ಸಅಸೇ 2011, ಬೆಂಗಳೂರು, ದಿನಾಂಕ: 09 ಜನವರಿ 2012

ಕರ್ನಾಟಕ ಸರ್ಕಾರ ಸಚಿವಾಲಯದ ಆರ್ಥಿಕ ಇಲಾಖೆಯ ಕಂಟ್ರೋಲರ್ (ಲೆಕ್ಕಪತ್ರ ನಿರ್ವಹಣ) ಶಾಖೆಯಲ್ಲಿನ 'ಲೆಕ್ಕಪರಿಶೋಧನಾಧಿಕಾರಿ' ಹುದ್ದೆಯನ್ನು ದಿನಾಂಕ: 25-02-2012 ರಿಂದ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ: 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3)

ಪಿ.ಆರ್. 343

ತೋಟಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಕೆನರಾ ಬ್ಯಾಂಕಿನಿಂದ ಪಡೆದ ಸಾಲದ ಮೊತ್ತಕ್ಕೆ ವಿಧಿಸುವ ಬಡ್ಡಿಯನ್ನು ಹಿಂಬರಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ವಾಕೈ 03 ರೇಉನಿ 2011 (ಭಾಗ-1), ದಿನಾಂಕ: 31.03.2011.

2) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ/119/ವೆಚ್ಚ-1/2011, ದಿನಾಂಕ: 21-7-2011.

3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ: ಕರೇಮಾಮ/ಹಣಕಾಸು/2011-12/1294, ದಿ: 3-11-2011.

ಪ್ರಸ್ತಾವನೆ :

ದಿನಾಂಕ: 16-6-2011 ರಂದು ಮಾನ್ಯ ರೇಷ್ಮೆ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಳಿಯು ಪಡೆಯುವ ಸಾಲದ ಮೇಲೆ ಬ್ಯಾಂಕಿನವರು ವಿಧಿಸುವ ಬಡ್ಡಿಯನ್ನು ಸರ್ಕಾರವು ಹಿಂಭರಿಸಬೇಕೆಂದು ತೀರ್ಮಾನಿಸಲಾಗಿತ್ತು. ಅದರಂತೆ ಮಂಡಳಿಯು ದಿನಾಂಕ: 18-6-2011 ರಲ್ಲಿ ಕಳುಹಿಸಿದ ಪತ್ರದಲ್ಲಿನ ಶಿಫಾರಸ್ಸನ್ನು ಹಣಕಾಸು ಇಲಾಖೆಯವರು ಒಪ್ಪಿರುತ್ತಾರೆ. ಬ್ಯಾಂಕಿನವರು ದಿನಾಂಕ: 23-5-2011 ರಿಂದ 31-10-2011ರ ವರೆಗಿನ ಅವಧಿಗೆ ರೂ. 42,67,641/- ಬಡ್ಡಿ ವಸೂಲು ಮಾಡಿರುತ್ತಾರೆ ಮತ್ತು ರೂ. 8,60,340/- ನ್ನು ಸಾಲಕ್ಕೆ ಸಂಬಂಧಪಟ್ಟಂತೆ ಪ್ರೋಸೆಸಿಂಗ್ ವೆಚ್ಚಗಳಿಗೆ ವಸೂಲು ಮಾಡಿರುತ್ತಾರೆ. ಮಂಡಳಿಯಿಂದ ಭರಿಸಿರುವ ಬಡ್ಡಿ ಹಾಗೂ ಇತರೆ ವೆಚ್ಚಗಳ ಒಟ್ಟು ಮೊತ್ತವಾದ ರೂ. 51,27,981/-ಗಳನ್ನು ಸರ್ಕಾರದ ವತಿಯಿಂದ ಹಿಂಭರಿಸುವಂತೆ ಕ್ರಮವಹಿಸಿ ಆದೇಶ ನೀಡಬೇಕೆಂದು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರು ಮೇಲೆ ಓದಲಾದ ಕ್ರಮಸಂಖ್ಯೆ (3) ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ತೋಇ 31 ರೇಉನಿ 2011, ಬೆಂಗಳೂರು, ದಿನಾಂಕ: 06-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಕೆನರಾ ಬ್ಯಾಂಕಿನಿಂದ ಸಾಲ ಪಡೆದ ಮೊತ್ತಕ್ಕೆ ವಿಧಿಸಿರುವ ಬಡ್ಡಿ ವೆಚ್ಚ ರೂ. 51.28 ಲಕ್ಷಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮಂಜೂರು ಮಾಡಲಾದ ಈ ಮೊಬಲಗನ್ನು ಮೊದಲು ಸಾದಿಲ್ವಾರು ನಿಧಿಯಿಂದ ಲೆಕ್ಕ ಶೀರ್ಷಿಕೆ 8000-00-272-0-00-ಗ್ರಾಮೀಣ ಮತ್ತು ಸಣ್ಣ ಉದ್ಯಮಗಳು ಇದರಲ್ಲಿ ಬಿಡುಗಡೆ ಮಾಡಿ ನಂತರ ಲೆಕ್ಕ ಶೀರ್ಷಿಕೆ 2851-00-107-1-46 (ಯೋಜನೆತರ) ಇದರಡಿಯಲ್ಲಿ ಪೂರಕ ಅಂದಾಜುಗಳಲ್ಲಿ ನಿಧಿಗೆ ಮರು ಹಂಚಲಾಗುವುದು.

ಆರ್ಥಿಕ ಇಲಾಖೆಯು ಈ ಮೊಬಲಗನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿ ಪ್ರತ್ಯೇಕ ಆದೇಶವನ್ನು ಹೊರಡಿಸುವುದು. ಆರ್ಥಿಕ ಇಲಾಖೆಯ ಈ ಪ್ರತ್ಯೇಕ ಆದೇಶವಿಲ್ಲದೆ ಈ ಆದೇಶದ ಮೇರೆಗೆ ಮೊಬಲಗನ್ನು ಪಡೆಯುವಂತಿಲ್ಲ. ಹಣ ಪಡೆಯುವ ಅಧಿಕಾರಿ ಸಾದಿಲ್ವಾರು ನಿಧಿಯಿಂದ ಹಣವನ್ನು ಪಡೆಯಲು ಬಿಲ್ಲನ್ನು ಖಜಾನೆಗೆ ಕಳುಹಿಸಿದಾಗ ಇಲಾಖೆಯ ಆದೇಶಕ್ಕೆ ಆರ್ಥಿಕ ಇಲಾಖೆಯು ಹೊರಡಿಸುವ ಪ್ರತ್ಯೇಕ ಆದೇಶವನ್ನು ಲಗತ್ತಿಸಿದ ನಂತರವೇ ಖಜಾನೆಯು ಹಣ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ದಿನಾಂಕ: FD/A/527/Exp.4/2011, 2-1-2012 ರಲ್ಲಿಯ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 344

ಬಿ.ಎಸ್. ಚಂದ್ರಶೇಖರ್

ಪೀಠಾಧಿಕಾರಿ

ತೋಟಗಾರಿಕೆ ಇಲಾಖೆ (ರೇಷ್ಮೆ)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಡಿಎಸ್‌ವೈ 2011 ದಿ: 18.08.2011.

2. ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಶಾಖೆಗಳ ಮನವಿ.
3. ದಿ: 28-11-2011 ರ ಸರ್ಕಾರದ ಪತ್ರ: ಕಸಂವಾಪ್ರ 140 ಸ್ವೀಮರ 2011.
4. ದಿ: 22-12-2011ರ ಸನ್‌ಟೆಕ್ ಸ್ಟೇಷನರೀಸ್ ರವರ ಪತ್ರದ ಸಂಖ್ಯೆ: 191/2011.
5. ದಿ: 5-12-2011ರ ಮಾರುತಿ ಎಂಟರ್ ಪ್ರೈಸಸ್ ರವರ ಪತ್ರದ ಸಂಖ್ಯೆ 123/2011.

ಪ್ರಸ್ತಾವನೆ :

ಮೇಲೆ ಓದಲಾದ (2)ರ ಮನವಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ವಿವಿಧ ಶಾಖೆಗಳು ಲೇಖನ ಸಾಮಗ್ರಿಗಳಿಗಾಗಿ ಮನವಿ ಸಲ್ಲಿಸಿದ್ದವು.

ಮೇಲೆ ಓದಲಾದ (4) ಹಾಗೂ (5)ರ ಪತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಬೇಕಾಗಿರುವ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಖರೀದಿಸಲು 03 ಕಂಪನಿಗಳಿಂದ ದರಪಟ್ಟಿ ನೀಡುವಂತೆ ಕೋರಲಾಗಿತ್ತು. ಹಾಗೂ ಅದರಂತೆ 03 ಕಂಪನಿಗಳಿಂದ ಸ್ವೀಕೃತವಾದ ದರಪಟ್ಟಿಯನ್ವಯ ಇಲಾಖೆಗೆ ಅಗತ್ಯವಾಗಿ ಬೇಕಾಗುವ ಸಾಮಗ್ರಿಗಳ ಒಟ್ಟು ದರಪಟ್ಟಿಯು ಈ ಕೆಳಗಿನಂತಿರುತ್ತದೆ. ಹಾಗೂ 3 ಕಂಪನಿಗಳ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳ ದರ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಲೇಖನ ಸಾಮಗ್ರಿಗಳ ದರಪಟ್ಟಿ

ಕ್ರಸಂ.	ಕಂಪನಿಯ ಹೆಸರು	ವಿವರ	ಪ್ರಮಣ	ಬೆಲೆ ರೂ. ಗಳಲ್ಲಿ	ಒಟ್ಟು ರೂ. ಗಳಲ್ಲಿ
1	ಸನ್ ಟೆಕ್ ಸ್ಟೇಷನರೀಸ್	ಲೇಖನ ಸಾಮಗ್ರಿಗಳು	ಅನುಬಂಧದಲ್ಲಿ ಲಗತ್ತಿಸಲಾಗಿದೆ.		45655.81
2	ಮಾರುತಿ ಎಂಟರ್ ಪ್ರೈಸಸ್	ಲೇಖನ ಸಾಮಗ್ರಿಗಳು			46092.36
3	ಮಾಡ್ರನ್ ಏಜನ್ಸೀಸ್	ಲೇಖನ ಸಾಮಗ್ರಿಗಳು			46284.98

ಪೀಠೋಪಕರಣಗಳ ದರಪಟ್ಟಿ

ಕ್ರಸಂ.	ಕಂಪನಿಯ ಹೆಸರು	ವಿವರ	ಪ್ರಮಣ	ಬೆಲೆ ರೂ. ಗಳಲ್ಲಿ	ಒಟ್ಟು ರೂ. ಗಳಲ್ಲಿ
1	ಸನ್‌ಟೆಕ್ ಸ್ಟೇಷನರೀಸ್	ಪೀಠೋಪಕರಣಗಳು	ಅನುಬಂಧದಲ್ಲಿ ಲಗತ್ತಿಸಲಾಗಿದೆ.		42226.80
2	ಮಾರುತಿ ಎಂಟರ್ ಪ್ರೈಸಸ್				39996.80
3	ಮಾಡ್ರನ್ ಏಜನ್ಸೀಸ್				41719.50

ಈ ಮೇಲ್ಕಂಡ 03 ಕಂಪನಿಗಳಿಂದ ಪಡೆದ ದರಗಳನ್ನು ಪರಿಶೀಲಿಸಿ, ಅತಿ ಕಡಿಮೆ ದರ ನೀಡಿರುವ ಬೆಂಗಳೂರಿನ ಸನ್‌ಟೆಕ್ ಸ್ಟೇಷನರೀಸ್ ಪ್ರೈವೇಟ್ ಲಿಮಿಟೆಡ್ ನಂ. 23, ನೆಲಮಹಡಿ, 14ನೇ ಕ್ರಾಸ್, ಕಬ್ಬನ್ ಪೇಟೆ, ಬೆಂಗಳೂರು-560002 ರವರಿಗೆ ರೂ. 45655.81 ಗಳ (ನಲವತ್ತೈದು ಸಾವಿರದ ಆರನೂರ ಐವತ್ತೈದು ರೂಪಾಯಿ ಹಾಗೂ ಎಂಬತ್ತೈದು ಪೈಸೆಗಳು ಮಾತ್ರ) ವೆಚ್ಚದಲ್ಲಿ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು, ಹಾಗೂ ಮಾರುತಿ ಎಂಟರ್ ಪ್ರೈಸಸ್, ನಂ. 43, ಅಣ್ಣಯಪ್ಪ ಲೇಔಟ್ ಜಿ.ಕೆ.ಎಂ. ಕಾಲೇಜು ರೋಡ್, ಜರಗನಹಳ್ಳಿ, ಬೆಂಗಳೂರು-560078 ರವರಿಗೆ ರೂ. 39996.90 ಗಳ (ಮೂವತ್ತೊಂಬತ್ತು ಸಾವಿರದ ಒಂಬೈನೂರ ತ್ತೊಂಬತ್ತಾರು ರೂಪಾಯಿಗಳು ಹಾಗೂ ತ್ತೊಂಬತ್ತು ಪೈಸೆಗಳು ಮಾತ್ರ) ವೆಚ್ಚದಲ್ಲಿ ಪೀಠೋಪಕರಣಗಳನ್ನು ಸರಬರಾಜು ಮಾಡಲು ಈ ಕೆಳಕಂಡಂತೆ ಆದೇಶಿಸಿದೆ. ದರಪಟ್ಟಿಯು ವ್ಯಾಟ್ ತೆರಿಗೆ ಹಾಗೂ ಸಾಗಾಣೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 140 ಸ್ಟೀಮರ 2011, ಬೆಂಗಳೂರು, ದಿನಾಂಕ: 03-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಎಲ್ಲಾ ಶಾಖೆಗಳಿಗೆ ಲೇಖನ ಸಾಮಗ್ರಿ ಹಾಗೂ ಪೀಠೋಪಕರಣಗಳನ್ನು ಸರಬರಾಜು ಮಾಡಲು 03 ಕಂಪನಿಗಳಿಂದ ದರಪಟ್ಟಿಗಳನ್ನು ಕರೆದಿದ್ದು ಅನುಬಂಧದಲ್ಲಿರುವ ಲೇಖನ ಸಾಮಗ್ರಿಗಳಿಗೆ ಅತಿ ಕಡಿಮೆ ದರ ರೂ. 45655.81 (ನಲವತ್ತೈದು ಸಾವಿರದ ಆರನೂರ ಐವತ್ತೈದು ರೂಪಾಯಿ ಹಾಗೂ ಎಂಬತ್ತೈದು ಪೈಸೆಗಳು ಮಾತ್ರ) ಗಳನ್ನು ಸೂಚಿಸಿರುವ ಬೆಂಗಳೂರಿನ ಸನ್‌ಟೆಕ್ ಸ್ಟೇಷನರೀಸ್ ಪ್ರೈವೇಟ್ ಲಿಮಿಟೆಡ್, ನಂ. 23, ನೆಲಮಹಡಿ, 14ನೇ ಕ್ರಾಸ್, ಕಬ್ಬನ್ ಪೇಟೆ, ಬೆಂಗಳೂರು-560002 ರವರಿಗೆ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಹಾಗೂ ಅನುಬಂಧದಲ್ಲಿರುವ ಪೀಠೋಪಕರಣಗಳಿಗೆ ಅತಿ ಕಡಿಮೆ ದರ ರೂ. 39996.90 (ಮೂವತ್ತೊಂಬತ್ತು ಸಾವಿರದ ಒಂಬೈನೂರ ತ್ತೊಂಬತ್ತಾರು ರೂಪಾಯಿಗಳು ಹಾಗೂ ತ್ತೊಂಬತ್ತು ಪೈಸೆಗಳು ಮಾತ್ರ) ಗಳನ್ನು ಸೂಚಿಸಿರುವ ಬೆಂಗಳೂರಿನ ಮಾರುತಿ ಎಂಟರ್ ಪ್ರೈಸಸ್, ನಂ. 43, ಅಣ್ಣಯ್ಯಪ್ಪ ಲೇಔಟ್, ಜಿ.ಕೆ.ಎಂ. ಕಾಲೇಜ್ ರೋಡ್, ಜರಗನಹಳ್ಳಿ, ಬೆಂಗಳೂರು-560078 ರವರಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಆದೇಶ ನೀಡಿದೆ.

ಈ ವೆಚ್ಚವನ್ನು ಸರ್ಕಾರ ಆದೇಶ ಸಂಖ್ಯೆ: ಸಿಆಸುಇ 3 ಡಿಎಸ್‌ವೈ 2011 ದಿನಾಂಕ: 18-08-2011 ರಲ್ಲಿ ನೀಡಿರುವ ಆದೇಶದನ್ವಯ ಭರಿಸಲು ಸನ್‌ಟೆಕ್ ಸ್ಟೇಷರೀಸ್ ಪ್ರೈ.ಲಿ., ಕಂಪನಿಗೆ ರೂ. 45655.81 ಗಳ (ನಲವತ್ತೈದು ಸಾವಿರದ ಆರನೂರ ಐವತ್ತೈದು ರೂಪಾಯಿ ಹಾಗೂ ಎಂಬತ್ತೈದು ಪೈಸೆಗಳು ಮಾತ್ರ) ಹಾಗೂ ಮಾರುತಿ ಎಂಟರ್ ಪ್ರೈಸಸ್ ರವರಿಗೆ ರೂ. 39996.90 ಗಳ (ಮೂಬತ್ತೊಂಬತ್ತು ಸಾವಿರದ ಒಂಬೈನೂರ ತ್ತೊಂಬತ್ತಾರು ರೂಪಾಯಿಗಳು ಹಾಗೂ ತ್ತೊಂಬತ್ತೊಂಬತ್ತು ಪೈಸೆಗಳು ಮಾತ್ರ) ಗಳ ಮೊತ್ತವನ್ನು ಸಿಆಸುಇ ಲೆಕ್ಕ ಪತ್ರ ಶಾಖೆಯು ಡಿ.ಸಿ.ಬಿಲ್ ಮೂಲಕ ಬಿಡುಗಡೆ ಮಾಡುವುದು.

ಸನ್‌ಟೆಕ್ ಸ್ಟೇಷರೀಸ್ ಪ್ರೈ.ಲಿ., ಕಂಪನಿಯು ಲೇಖನ ಸಾಮಗ್ರಿಗಳನ್ನು ಹಾಗೂ ಮಾರುತಿ ಎಂಟರ್ ಪ್ರೈಸಸ್ ಕಂಪನಿಯು ಪೀಠೋಪಕರಣಗಳನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಶಾಖೆಗಳಿಗೆ ಕೂಡಲೇ ಸರಬರಾಜು ಮಾಡುವುದು ಹಾಗೂ ಸಿಆಸು ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೀತಕುಮಾರಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ

ಹಾಗೂ ಪ್ರವಾಸೋದ್ಯಮ ಇಲಾಖೆ

ANNEXURE-I

TO G.O. NO. KCIT 140 R & I 2011, DATED 03-01-2012

Comparative Statement

Sl. No.	Particulars	No. of Qty.	Suntek Stationers Pvt. Ltd.	Modern Agencies	Maruthi Enterprises
1	ರೀಕೋ ಟೋನರ್ ಎಫ್‌ಟಿ 4621	1	3249.00	3277.00	3300.30
2	ಕಪ್ಸ್ ಸಾಸರ್	3 Set	1624.50	1641.60	1675.80
3	Canan Printer Cartridge 328	3	16773.75	16852.50	17010.00
4	Canan image class MF 4570 dn	1	5827.50	5853.75	5932.50
5	L Shape Plastic Folders	1 Doz	164.16	191.52	164.16
6	Xerox paper	10	1732.50	1764.00	1732.50
7	ಪ್ಲಾಸ್ಕ್	4	1345.20	1482,00	1345.20
8	HP Laser jet 1015 Cartridge	1	3780.00	4100.95	3885.00
9	Pen Drive	5	3255.00	3570.00	3570.00
10	ಕಾಲಿಂಗ್ ಬೆಲ್	2	820.80	855.00	866.40
11	ಎಂಗೇಜ್‌ಮೆಂಟ್ ಪ್ಯಾಡ್ (Dairy Stand)	2	376.20	421.80	410.40
12	ಟೋನರ್–1025/1038/5216/5223	2	1207.50	1356.60	1218.00
13	Wipro LQ DX Printer Ribbon	10	1627.50	1785.00	1680.00
14	ಟೋನರ್–106 R00280	1	1932.30	1993.86	2040.60
15	Steel cups	15	513.00	666.90	684.00
16	TVS 355 Printer Ribbon	10	462.00	472.50	577.50
	Total		**45655.81**	**46284.98**	**46092.36**

Suntek Stationers Pvt. Ltd. - Rs. 45655.81

Modern Agencies - Rs. 46284.98

Maruthi Enterprises - Rs. 46092.36

N. Geetha Kumari
Under Secretary to Government,
Kannada and Culture, Information And Tourism Department.

ANNEXURE-II

TO G.O. NO. KCIT 140 R & I 2011, DATED 03-01-2012

Comparative Statement

Sl. No.	Particulars	No. of Qty.	Suntek Stationers Pvt. Ltd.	Modern Agencies	Maruthi Enterprises
1	Executive revolving chairs	4	24076.80	23712.00	22458.00
2	Visitors chairs	5	17100.00	16957.50	16541.40
3	Window curtain	1	1050.00	1050.00	997.50
	Total		**42226.80**	**41719.50**	**39996.90**

Suntek Stationers Pvt. Ltd. - Rs. 42226.80

Modern Agencies - Rs. 41719.50

Maruthi Enterprises - Rs. 39996.90

N. Geetha Kumari
Under Secretary to Government,
Kannada and Culture, Information and Tourism Department.

ಪಿ.ಆರ್. 345

ಕಂದಾಯ ಸಚಿವಾಲಯ

ವಿಷಯ : 2011ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಸಿಎಎಲ್(1) ಮನವಿ.ಸಿಆರ್: 157/2011-12, ದಿನಾಂಕ: 28-11-2011.
2. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಪತ್ರ ಸಂಖ್ಯೆ: ಎಬಿ/ಎಫ್ಎಎಂ/ಸಿಆರ್-45/2011-12, ದಿನಾಂಕ: 08-12-2011.
3. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಪತ್ರ ಸಂಖ್ಯೆ: ಕಂದಾಯ:ನೈವಿ/ಪ್ರವಾಹ/5/ 2011-12, ದಿನಾಂಕ: 19-11-2011.
4. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ ಇವರ ಪತ್ರ ಸಂಖ್ಯೆ: ಕಂ/ನೈವಿಪ/354/2011-12, ದಿನಾಂಕ: 28-11-2011.

ಪ್ರಸ್ತಾವನೆ :

2011ನೇ ಸಾಲಿನಲ್ಲಿ ಮುಂಗಾರು ಮಳೆ ವಿಫಲದಿಂದಾಗಿ, ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವು ಒದಗಿಸುವುದು ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ಮೇಲೆ ಓದಲಾದ (1) ರಿಂದ (4)ರ ಪತ್ರಗಳಲ್ಲಿ, ತುಮಕೂರು, ಬೆಳಗಾವಿ, ರಾಯಚೂರು ಮತ್ತು ಯಾದಗಿರಿ ಜಿಲ್ಲಾಧಿಕಾರಿಗಳು ಕ್ರಮವಾಗಿ ರೂ. 1,243.05 ಲಕ್ಷ 500.00 ಲಕ್ಷ 767.29 ಲಕ್ಷ ಮತ್ತು 500.00 ಲಕ್ಷಗಳನ್ನು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ, ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 190 ಟಿಎನ್ಆರ್ 2011, ಬೆಂಗಳೂರು, ದಿನಾಂಕ : 09-01-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ಹಾನಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)
1	ತುಮಕೂರು	200.00
2	ಬೆಳಗಾವಿ	100.00
3	ರಾಯಚೂರು	150.00
4	ಯಾದಗಿರಿ	150.00
5	ಬಿಜಾಪುರ	200.00
	ಒಟ್ಟು	800.00

(ರೂ. ಎಂಟುನೂರು ಲಕ್ಷಗಳು ಮಾತ್ರ)

1) ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.
   ಅ) ಮಾನವ/ಪ್ರಾಣಿ ಜೀವಹಾನಿ
   ಆ) ಬೆಳೆ ಹಾನಿ
   ಇ) ಕುಡಿಯುವ ನೀರಿನ ವ್ಯವಸ್ಥೆ
   ಈ) ಜಾನುವಾರುಗಳ ಸಂರಕ್ಷಣೆ
   ಉ) ಮೂಲಭೂತ ಸೌಕರ್ಯಗಳಿಗೆ ತುರ್ತು ರಿಪೇರಿ
2) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.
3) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ಎನ್‌ಸಿಸಿಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.
4) ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-01-102-0-00-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ: 968:ವೆಚ್ಚ–7/2011 ದಿನಾಂಕ: 16–10–2011 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಪಿ.ಆರ್. 346

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ನಗರದ 43 ಉಪ ನೋಂದಣಿ ಕಛೇರಿಗಳಿಗೆ ಡೆಸ್ಕ್ ಟಾಪ್ ಕಂಪ್ಯೂಟರ್ ಹಾಗೂ ಯು.ಪಿ.ಎಸ್.ಗಳನ್ನು ಖರೀದಿಸುವ ಕುರಿತು – ಆದೇಶ.

ಓದಲಾಗಿದೆ :
1) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿಯ ಪತ್ರ ಸಂಖ್ಯೆ: ಸಿಒಎಮ್‌ಪಿ/09–2007–08 ದಿನಾಂಕ: 28–09–2011, 21–10–2011 ಮತ್ತು ಸಿಒಎಮ್‌ಪಿ 33/2004–105 ದಿನಾಂಕ: 19–12–2011.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ, ಸಿ.ಆ.ಸು.ಇ. (ಇ–ಆಡಳಿತ) ರವರ ಸಭಾ ನಡವಳಿ ಪತ್ರ ಸಂಖ್ಯೆ: ಸಿಆಸುಇ 29 ಇಆಇ 2011 ದಿನಾಂಕ: 28–10–2011.
3) ತಾಂತ್ರಿಕ ಸಲಹಾ ಸಮಿತಿ ಸಭೆ ನಡವಳಿ ದಿನಾಂಕ: 17–11–2011.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರುರವರು ನಗರದ 43 ಉಪ ನೋಂದಣಿ ಕಛೇರಿಗಳಿಂದ Any Where Registration/ Encumbrance Certificate ಸೇವೆ ನೀಡುವ ಸಂಬಂಧ ಪ್ರತಿ ಉಪ ನೋಂದಣಿ ಕಛೇರಿಗೆ ತಲಾ 2 ರಂತೆ ಡೆಸ್ಕ್ ಟಾಪ್ ಕಂಪ್ಯೂಟರ್‌ಗಳನ್ನು ಹಾಗೂ 43 ಯುಪಿಎಸ್ ಗಳನ್ನು ಅಂದಾಜು ವೆಚ್ಚ ರೂ. 70,52,000/– ಗಳ ವೆಚ್ಚದಲ್ಲಿ ಖರೀದಿಸಲು ಮತ್ತು ತತ್ಸಂಬಂಧದ ವೆಚ್ಚವನ್ನು 2011–12ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2030–03–001–2–04 Charges of supply of registered documents -051 General Expenses ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಪ್ರಸ್ತುತ ರೂ. 11,83,13,621/– ಗಳ ಅನುದಾನವು ಲಭ್ಯವಿದ್ದು, ಈ ಮೊತ್ತದಲ್ಲಿ ಪ್ರಸ್ತಾಪಿತ ವೆಚ್ಚವನ್ನು ಭರಿಸಲು ಆಡಳಿತಾತ್ಮಕ ಮತ್ತು ಆರ್ಥಿಕ ಮಂಜೂರಾತಿಯನ್ನು ನೀಡಲು ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು (ಇ–ಆಡಳಿತ) ದಿನಾಂಕ: 28–10–2011 ರಂದು ನಡೆದ ಸಭೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಇ– ಆಡಳಿತ 2011–12ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸಿರುತ್ತದೆ.

ಮೇಲೆ ಓದಲಾದ (3) ರಲ್ಲಿ ದಿನಾಂಕ: 17–11–2011 ರಂದು ಜರುಗಿದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ 43 ಉಪ ನೋಂದಣಿ ಕಛೇರಿಗಳಿಗೆ ಒಟ್ಟು 86 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಮತ್ತು 43 ಯು.ಪಿ.ಎಸ್. ಕಾನ್‌ಫಿಗರೇಷನ್‌ಗಳನ್ನು ಖರೀದಿಸಲು ತಾಂತ್ರಿಕ ಸಲಹಾ ಸಮಿತಿಯು ಅನುಮೋದನೆ ನೀಡಿರುತ್ತದೆ.

ಮೇಲೆ ವಿವರಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 112 ಮುನೋಮು 2011, ಬೆಂಗಳೂರು, ದಿನಾಂಕ : 09–01–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ 43 ಉಪ ನೋಂದಣಿ ಕಛೇರಿಗಳಿಗೆ Any Where Registration/ Encumbrance Certificate ಕಾರ್ಯ ನಿರ್ವಹಿಸಲು ತಲಾ ಒಂದು ಉಪ ನೋಂದಣಿ ಕಛೇರಿಗೆ 2 ಡೆಸ್ಕ್ ಟಾಪ್ ಕಂಪ್ಯೂಟರ್‌ಗಳನ್ನು ಹಾಗೂ ಒಂದು ಯು.ಪಿ.ಎಸ್. ರಂತೆ ಒಟ್ಟು 86 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಮತ್ತು 43 ಯು.ಪಿ.ಎಸ್. ಗಳನ್ನು ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಅಂಗೀಕರಿಸಿರುವಂತೆ ಕಾನ್‌ಫಿಗರೇಷನ್‌ಗಳನ್ನು ಒಟ್ಟು ರೂ. 70,52,000/– (ರೂಪಾಯಿ ಎಪ್ಪತ್ತು ಲಕ್ಷ ಐವತ್ತೆರಡು ಸಾವಿರಗಳು ಮಾತ್ರ) ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಖರೀದಿಸಲು ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2011–12ನೇ ಸಾಲಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಲೆಕ್ಕ ಶೀರ್ಷಿಕೆ 2030–03–001–2–04 Charges of supply of registered documents -051 General Expenses ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ: 16–05–2008 ರನ್ವಯ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. 347

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಮುಮಕಾ/2235/2011, ದಿನಾಂಕ: 14-12-2011.

ಪ್ರಸ್ತಾವನೆ :

ಮೇಲೆ ಓದಲಾದ ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಒಟ್ಟು 14,061 ಆಸರೆ ಮನೆಗಳನ್ನು ನಿರ್ಮಿಸಲು ವಹಿಸಿದ್ದು ಪ್ರತಿ ಮನೆಗೆ 1.40 ಲಕ್ಷದಂತೆ ಒಟ್ಟು ಅಂದಾಜು ವೆಚ್ಚ 209.39 ಕೋಟಿಗಳಾಗಲಿದ್ದು ಅದರಲ್ಲಿ 190.79 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಬಾಕಿಯಾಗಿರುವ ಬಾಕಿ ಮೊತ್ತ ರೂ. 18.60 ಕೋಟಿಗಳಾಗಿದ್ದು ಅದರಲ್ಲಿ ರೂ. 10.00 ಕೋಟಿಗಳನ್ನು ಬಿಡುಗಡೆ ಮಾಡಲು ಮಾನ್ಯ ಮುಖ್ಯ ಮಂತ್ರಿಗಳು ಅನುಮೋದನೆ ನೀಡಿದ್ದು ಅದರಂತೆ ಅನುದಾನ ಬಿಡುಗಡೆ ಮಾಡಲು ಕೋರಿರುವ ಹಿನ್ನಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 174 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ : 10-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬಾಕಿ ಉಳಿದಿರುವ ಆಸರೆ ಮನೆಗಳನ್ನು ನಿರ್ಮಿಸಲು ರೂ. 10.00 ಕೋಟಿ (ರೂ. ಹತ್ತು ಕೋಟಿಗಳು ಮಾತ್ರ) ಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಸದರಿ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 "Public Contributions to Calamity Relief" ಅಡಿಯಲ್ಲಿ ಸಂಬಂಧಿಸಿದ ಸಂಸ್ಥೆಯ ಮುಖ್ಯಸ್ಥರು, ಅನುದಾನ ಬಿಲ್ (ಪೇಯೀಸ್ ರಶೀದಿ) ತಯಾರಿಸಿ, ಸರ್ಕಾರದ ಕಾರ್ಯದರ್ಶಿಗಳು, (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ ಇವರಿಂದ ಮೇಲು ಸಹಿ ಪಡೆದು, ರಾಜ್ಯ ಹುಜೂರ್ ಖಜಾನೆಯಿಂದ ಡ್ರಾ ಮಾಡಿಕೊಳ್ಳಲು ಆದೇಶಿಸಿದೆ. ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿಯೇ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಬೆಂಗಳೂರು ಇವರು ಈ ಹಿಂದೆ ಬಿಡುಗಡೆ ಮಾಡಿದ್ದ ಅನುದಾನಕ್ಕೆ ಹಾಗೂ ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ: ಮುಮಕಾ/2235/2011, ದಿನಾಂಕ: 14-12-2011, ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು-2)

ಪಿ.ಆರ್. 348

ಕಂದಾಯ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕು, ಕಂಚಗಾರ ಗಲ್ಲಿಯ ಶ್ರೀ ನಗರೇಶ್ವರ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ: ಎಡಿಎಂ 5 ಸಿಆರ್ 8/2011-12 ದಿನಾಂಕ: 05-07-2011.

ಪ್ರಸ್ತಾವನೆ :

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು, ಕಂಚಗಾರ ಗಲ್ಲಿಯ ಶ್ರೀ ನಗರೇಶ್ವರ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಜಾರಿಗೆ ಬಂದ ನಂತರದಲ್ಲಿ ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿಸಲಾಗಿರುತ್ತದೆ. ಆದರೆ, ಈ ದೇವಸ್ಥಾನವು ಆರ್ಯ ವೈಶ್ಯ ಸಮಾಜಕ್ಕೆ ಸೇರಿದ್ದು, ಆ ಸಮಾಜದ ವತಿಯಿಂದ ಆಡಳಿತ ನಿರ್ವಹಿಸಲಾಗುತ್ತಿದೆ. ಉಲ್ಲೇಖಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವಂತೆ ಜಿಲ್ಲಾಧಿಕಾರಿ, ಧಾರವಾಡ ಇವರು ಕೋರಿರುವ ಹಿನ್ನಲೆಯಲ್ಲಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತಂತೆ ದಿನಾಂಕ: 29-10-2011 ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ ಚರ್ಚಿಸಿದ ನಂತರ ಪ್ರಸ್ತಾಪಿತ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಲು ನಿರ್ಣಯಿಸಲಾಗಿದೆ.

ಆ ಮೇರೆಗೆ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 63 ಮುಅಬಿ 2011 ಬೆಂಗಳೂರು, ದಿನಾಂಕ : 02ನೇ ಜನವರಿ 2012

ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕು, ಕಂಚಗಾರ ಗಲ್ಲಿಯ ಶ್ರೀ ನಗರೇಶ್ವರ ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಕಲಂ 35ರ ಮೇರೆಗೆ ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ತೆಗೆದುಹಾಕಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ಶ್ರೀಕಂಠಬಾಬು
ಪೀಠಾಧಿಕಾರಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 349

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 103 ಮುಸರ 2008(ಭಾ), ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 35 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ರಾಮಣ್ಣ ನಂ. 67, 4ನೇ ಕ್ರಾಸ್, 2ನೇ ಅಡ್ಡರಸ್ತೆ, ಸಮರಾಪುರ, ಕೆಂಪೇಗೌಡನಗರ, ಬೆಂಗಳೂರು-19	ಸಾಮಾನ್ಯ
2	ಶ್ರೀಮತಿ ಪಿ. ಪದ್ಮಾ, ನಂ. 5/1, ಸಿಕೆಸಿ ಗಾರ್ಡನ್, 2ನೇ ಕ್ರಾಸ್, ಡಬಲ್ ರಸ್ತೆ, ಬೆಂಗಳೂರು-27	ಮಹಿಳೆ
3	ಶ್ರೀ ರಮೇಶ್ (ಮೈಕೋ), ನಂ.14, ಎಂ.ವಿ.ಲೇನ್, ಪಾರ್ವತಿಪುರಂ, ಬೆಂಗಳೂರು-04	ಪರಿಶಿಷ್ಟ ಜಾತಿ
4	ಶ್ರೀ ಜಿ. ಕೃಷ್ಣಮೂರ್ತಿ, ನಂ. 24, ಎಂ.ವಿ. ಲೇನ್, ಪಾರ್ವತಿಪುರಂ, ಬೆಂಗಳೂರು-04	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 350

ಕಂದಾಯ ಸಚಿವಾಲಯ

ವಿಷಯ: ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ದಕ್ಷಿಣ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 77 ಮುಸರ 2009 ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಗುಲ್ಬರ್ಗಾ ದಕ್ಷಿಣ ವಿಧಾನಸಭಾ ಕ್ಷೇತ್ರ.	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗುಲ್ಬರ್ಗಾ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಗುಲ್ಬರ್ಗಾ ದಕ್ಷಿಣ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಗುಲ್ಬರ್ಗಾ ದಕ್ಷಿಣ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 75 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ದಕ್ಷಿಣ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಅರವಿಂದ ರಾಮಾಚಾರ್ಯ ನವಲಿ, ಪ್ಲಾಟ್ ನಂ. 146, ಎನ್.ಜಿ.ಓ. ಕಾಲನಿ, ಜೇವರ್ಗಿ ರಸ್ತೆ, ಗುಲ್ಬರ್ಗಾ	ಸಾಮಾನ್ಯ
2	ಶ್ರೀಮತಿ ಪಾರ್ವತಿ ಎಸ್. ನಾಗನಹಳ್ಳಿ, ಮ.ನಂ. 1-867/25/3, ಶರಣ ಆಶ್ರಯ, ಹನುಮನ ಗುಡಿ ಎದುರು, ವೆಂಕಟೇಶ ನಗರ, ಗುಲ್ಬರ್ಗಾ	ಮಹಿಳೆ
3	ಶ್ರೀ ಸುರೇಶ ಮಲ್ಲಪ್ಪ ಭರಣಿ, ವಿಜಯನಗರ, ಬಸವನ ನಗರ ಹತ್ತಿರ, ಗುಲ್ಬರ್ಗಾ	ಪರಿಶಿಷ್ಟ ಜಾತಿ
4	ಶ್ರೀ ಶರಣಬಸಪ್ಪ ಬಿನ್ ಶಿವಶರಣಪ್ಪ ಜಡದಾರ, ಶರಣಸಿರಸಗಿ, ಗುಲ್ಬರ್ಗಾ ಜಿಲ್ಲೆ	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 351

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಮುಸರ 2009 ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಪದ್ಮನಾಭನಗರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 86 ಮುಸರ 2011; ಬೆಂಗಳೂರು, ದಿನಾಂಕ: 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಅಶೋಕ್‌ದಾಸ್, ನಂ.1, ಕೆ.ಆರ್. ರಸ್ತೆ, ಓಬಳಪ್ಪ ಗಾರ್ಡನ್, ಬೆಂಗಳೂರು-82	ಸಾಮಾನ್ಯ
2	ಶ್ರೀಮತಿ ವಿ. ಎಸ್. ರತ್ನಮ್ಮ, ನಂ.759(201), 1ನೇ ಮುಖ್ಯರಸ್ತೆ, ಪ್ರಗತಿಪುರ, ಸಪ್ತಗಿರಿ ದೇವಾಲಯ ಹತ್ತಿರ, ಬನಶಂಕರಿ 1ನೇ ಹಂತ, ಬೆಂಗಳೂರು-82	ಮಹಿಳೆ
3	ಶ್ರೀ ಜಿ. ಮುನಿರಾಜು, ನಂ. 15, ಸುಭಾಷ್‌ಚಂದ್ರ ಬೋಸ್ ರಸ್ತೆ, ಬೇಂದ್ರೆ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು -70	ಪರಿಶಿಷ್ಟ ಜಾತಿ
4	ಶ್ರೀ ಶಿವಕುಮಾರ್, ನಂ. 71, 6ನೇ ಅಡ್ಡರಸ್ತೆ, ಭವಾನಿನಗರ, ಬನಶಂಕರಿ 2ನೇ ಹಂತ, ಬೆಂಗಳೂರು -70	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ಥಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 352

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ಪುಲಿಕೇಶಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 33 ಮುಸರ 2009, ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 64 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಟಿ. ಕೃಷ್ಣ, ನಂ. 9, 2ನೇ ಅಡ್ಡರಸ್ತೆ, ಎಸ್.ಕೆ. ಗಾರ್ಡನ್, ಬೆನ್ಸನ್ ಟೌನ್ ಅಂಚೆ, ಬೆಂಗಳೂರು-46	ಸಾಮಾನ್ಯ
2	ಶ್ರೀಮತಿ ಪದ್ಮಿನಿ, ನಂ. 11, ಅಹ್ಮದ್ ಸ್ಟ್ರೀಟ್ ರಸ್ತೆ, ಫ್ರೇಜರ್‌ಟೌನ್, ಬೆಂಗಳೂರು – 05	ಮಹಿಳೆ
3	ಶ್ರೀ ವಿ. ರವಿ, ನಂ. 47, ಮೊರ್ ರಸ್ತೆ, ನಂ. 5 'ಸಿ' ಬ್ಲಾಕ್, ಅಣ್ಣಸ್ವಾಮಿ ಕಾಂಪೌಂಡ್, ಫ್ರೇಜರ್ ಟೌನ್, ಬೆಂಗಳೂರು –05	ಪರಿಶಿಷ್ಟ ಜಾತಿ
4	ಶ್ರೀ ಕಣ್ಣಯ್ಯ ಕುಮಾರ್ (ಬಾಬು) ನಂ. 48, 3ನೇ ಅಡ್ಡರಸ್ತೆ, ಮುನೇಶ್ವರನಗರ, ಶಾಂಪುರ ಮುಖ್ಯರಸ್ತೆ, ಬೆಂಗಳೂರು –45	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ಥಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 353

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ವಿಜಯನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 38 ಮುಸರ 2009, ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ವಿಜಯನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ವಿಜಯನಗರ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 69 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ವಿಜಯನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಬಿ.ಜಿ. ಭಟ್, ನಂ. 1359, 9ನೇ ಮುಖ್ಯರಸ್ತೆ, 5ನೇ ಕ್ರಾಸ್, ವಿಜಯನಗರ, ಬೆಂಗಳೂರು -40	ಸಾಮಾನ್ಯ
2	ಶ್ರೀಮತಿ ವೇದಾ ರಮೇಶ್, ನಂ.9, 4ನೇ ಕ್ರಾಸ್, 2ನೇ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು -26	ಮಹಿಳೆ
3	ಶ್ರೀ ವೈ. ಲಕ್ಷ್ಮೀನಾರಾಯಣ, ನಂ. 22, ಕೆ.ಎಸ್.ಬಿ ಕ್ವಾಟ್ರಸ್, 16ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು -40	ಪರಿಶಿಷ್ಟ ಜಾತಿ
4	ಶ್ರೀ ಎನ್.ಕೆ. ಚಿಕ್ಕಯ್ಯ, ನಂ.17, 2ನೇ 'ಬಿ' ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಹಾಲಕ್ಷ್ಮೀಪುರ ಅಂಚೆ, ಬೆಂಗಳೂರು -86	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ

ಪಿ.ಆರ್. 354

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 85 ಮುಸರ 2009, ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 40 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ದತ್ತಾತ್ರೇಯ, ನಂ. 137/32, 2ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು-18	ಸಾಮಾನ್ಯ
2	ಶ್ರೀಮತಿ ರೋಹಿಣಿ, ನಂ. 192, 2ನೇ ಅಡ್ಡರಸ್ತೆ, ಎ.ಆರ್. ಕಾಂಪೌಂಡ್, ಮೈಸೂರು ರಸ್ತೆ, ಬೆಂಗಳೂರು -18	ಮಹಿಳೆ
3	ಶ್ರೀ ನಾಗಲಿಂಗಂ, ನಂ. 192/1, ಪೊಲೀಸ್ ರಸ್ತೆ, 12ನೇ ಅಡ್ಡರಸ್ತೆ, ರಾಣಾಸಿಂಗ್ ಪೇಟೆ, ಬೆಂಗಳೂರು -53	ಪರಿಶಿಷ್ಟ ಜಾತಿ
4	ಶ್ರೀ ಆರ್. ಕುಮಾರ್, ನಂ. 137/7-1, 2ನೇ ಮುಖ್ಯರಸ್ತೆ, 3ನೇ ಹಂತ, ತ್ಯಾಗರಾಜನಗರ, ಬೆಂಗಳೂರು -68	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಉಮಾಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 355

ಕಂದಾಯ ಸಚಿವಾಲಯ

ವಿಷಯ: ಬೆಂಗಳೂರು ನಗರ ಜಿಲ್ಲೆಯ ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 37 ಮುಸರ 2009, ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಬೆಂಗಳೂರು ನಗರ ಜಿಲ್ಲೆಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ.	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಂಬಂಧಿಸಿದ ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಸಂಬಂಧಿಸಿದ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 53 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಬೆಂಗಳೂರು ನಗರ ಜಿಲ್ಲೆಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ಎನ್.ಕೆ ಕುಮಾರ್, ನಂ. 283, 12ನೇ 'ಎ' ಮುಖ್ಯರಸ್ತೆ 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು -10	ಸಾಮಾನ್ಯ
2	ಶ್ರೀಮತಿ ಸುಜಾತ ರೆಡ್ಡಿ, ನಂ. 35, ವೆಂಕಟೇಶ್ವರ ನಿಲಯ, ಕಾರ್ಪೋರೇಷನ್ ಆಸ್ಪತ್ರೆ ಹಿಂಭಾಗ, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು -39	ಮಹಿಳೆ
3	ಶ್ರೀ ಕೆ. ರಾಮಯ್ಯ, ನಂ.959, 2ನೇ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು -40	ಪರಿಶಿಷ್ಟ ಜಾತಿ
4	ಶ್ರೀ ಬಿ.ಕೆ. ಬಸವರಾಜಯ್ಯ, ನಂ. 959, 2ನೇ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು-40	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ

ಪಿ.ಆರ್. 356

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

ಕಂದಾಯ ಸಚಿವಾಲಯ

ವಿಷಯ: ಹಾಸನ ಜಿಲ್ಲೆಯ ಅರಕಲಗೂಡು ವಿಧಾನ ಸಭಾ ಕ್ಷೇತ್ರಕ್ಕೆ ಆರಾಧನಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಕಂಇ 103 ಮುಸರ 2008(ಭಾ), ದಿನಾಂಕ: 25-02-2009

ಪ್ರಸ್ತಾವನೆ :

ಮೇಲೆ ಓದಲಾದ ಆದೇಶದಲ್ಲಿ ಹಾಸನ ಜಿಲ್ಲೆಯ ಅರಕಲಗೂಡು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಯನ್ನು ಈ ಕೆಳಕಂಡವರೊಂದಿಗೆ ರಚಿಸಿ ಆದೇಶಿಸಲಾಗಿತ್ತು.

1	ಮಾನ್ಯ ವಿಧಾನಸಭಾ ಸದಸ್ಯರು, ಅರಕಲಗೂಡು ವಿಧಾನಸಭಾ ಕ್ಷೇತ್ರ	ಅಧ್ಯಕ್ಷರು
2	ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಜಿಲ್ಲೆ.	ಸದಸ್ಯರು
3	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಅರಕಲಗೂಡು ತಾಲ್ಲೂಕು	ಸದಸ್ಯರು
4	ತಹಶೀಲ್ದಾರ್, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಮುಂದುವರೆದು, ನಾಲ್ಕು ಅಧಿಕಾರೇತರ ಸದಸ್ಯರನ್ನು ನಂತರ ನಾಮ ನಿರ್ದೇಶನ ಮಾಡಲಾಗುವುದೆಂದು ನಮೂದಿಸಲಾಗಿತ್ತು.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 22 ಮುಸರ 2011; ಬೆಂಗಳೂರು, ದಿನಾಂಕ : 04ನೇ ಜನವರಿ, 2012

ಹಾಸನ ಜಿಲ್ಲೆಯ ಅರಕಲಗೂಡು ವಿಧಾನಸಭಾ ಕ್ಷೇತ್ರದ ಆರಾಧನಾ ಸಮಿತಿಗೆ ಈ ಕೆಳಕಂಡಂತೆ ಅಧಿಕಾರೇತರ ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಲಾಗಿದೆ.

ಕ್ರಮ ಸಂ.	ಹೆಸರು / ವಿಳಾಸ	ಪ್ರವರ್ಗ
1	ಶ್ರೀ ರಾಮಸ್ವಾಮಿ ಬಿನ್ ಲೇ॥ ಶ್ರೀಕಂಠಯ್ಯ, ದೊಡ್ಡಮನೆ ಕೋಟೆ, ಅರಕಲಗೂಡು ತಾಲ್ಲೂಕು, ಹಾಸನಜಿಲ್ಲೆ	ಸಾಮಾನ್ಯ
2	ಶ್ರೀಮತಿ ಲತಾ ಕೋಂ ಶಿವಸ್ವಾಮಿ, ಕ್ಯಾತನಹಳ್ಳಿ, ಕಸಬಾ ಹೋಬಳಿ	ಮಹಿಳೆ
3	ಶ್ರೀ ಒಂಬಾಳಯ್ಯ ಬಿನ್ ಲೇ॥ ಸಣ್ಣದೇವಯ್ಯ, ಹೊಳಗೋಡು, ಎ.ಬಿ.ಎಂ. ಹಳ್ಳಿ ಅಂಚೆ, ಮಲ್ಲಿಪಟ್ಟಣ ಹೋಬಳಿ	ಪರಿಶಿಷ್ಟ ಜಾತಿ
4	ಶ್ರೀ ವೆಂಕಟೇಶ್ ಬಿನ್ ವೆಂಕಟಯ್ಯ, ಬಿಟ್ಟಗೂಡನಹಳ್ಳಿ, ಮೂಡ್ಲೆಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ	ಪರಿಶಿಷ್ಟ ಪಂಗಡ

ಸದರಿ ಸಮಿತಿಯ ಅಧಿಕಾರೇತರ ಸದಸ್ಯರು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 2000, ದಿನಾಂಕ: 03-02-2001ರ ಪ್ರಕಾರ ಸಂಬಂಧಪಟ್ಟ ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಸಮಿತಿಯು ಐದು ವರ್ಷ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ; ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ

ಪಿ.ಆರ್. 357

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಮುಜರಾಯಿ)

FOREST, ECOLOGY & ENVIRONMENT SECRETARIAT

Sub : Release of 25 acres (10ha.) of forest land in Sy. No. 50p of Gottipura Minor Forest in favour of Director, Institute of Wood, Science and Technology (IWST), Bangalore for Research purpose.

Read : 1. Letter dated 6.10.2010 of the Director. IWST, Bangalore addressed to ACS, FEE Department.

2. Letter No. A5(4)MIS.CR.23/2010-11 dated 2.6.2011 of PCCF addressed to Government.

Preamble:

The Director, Institute of Wood Science and Technology (IWST), Bangalore, vide their letter read at (1) above, requested the Government to release 25 acres (10 ha.) of forest land in Sy.No. 50p of Gottipura minor forest in their favour for research purpose. Vide letter read at (2) above, the Principal Chief Conservator of forests (Head of Forest Force), Bangalore, informed that the Deputy Conservator of Forests, Rural Division, Bangalore has demarcated 10 ha. of forest land out of 237.12 acres in Sy. No. 50P of Gottipura Minor Forest for allotting to IWST by conducting joint survey duly involving research wing of the Karnataka Forest Department and the IWST Officials. He also informed that the proposed area is adjoining to the forest land already released to IWST for research purpose and recommended to accord approval for release of the said land in favour of the Director, IWST, Bangalore.

The Proposal of the Director, IWST, Bangalore, and the recommendation of the PCCF (Head of Forest Force), has been examined in detail at Government level and the following orders are issued.

Government Order No. FEE 135 FAF 2010, Bangalore Dated: 23-12-2011.

After careful consideration of the proposal and on the recommendation of the PCCF (Head of Forest Force), Bangalore, sanction is accorded to release 10 ha (25 acres) of forest land in Sy. No. 50P of Gottipura Minor Forest in favour of the Director, institute of wood sciences and Technology, Bangalore subject to the following conditions.

1. The land should be utilized only for the purpose for which it is sanctioned.
2. The legal status of forest land shall remain unchanged.
3. In case the land is not used for the stipulated purpose or when it no longer needed for the stipulated purpose the area should automatically revert back to the Forest Department.

By Order and in the name of the Governor of Karnataka,
T.R. Anantha Ramu
Under Secretary to Government
Forest, Ecology & Environment Department

PR. 358

FOREST, ECOLOGY & ENVIRONMENT SECRETARIAT

Sub : Diversion of 1.90 ha. of forest land in Gunda RF, Hospet Taluk of Bellary District for widening of road 4/6 lane from Km 298.500 to Km 299.200 in NH 13 (Bijapur-Hospet Section) in favour of the DGM (Tech) and Project Director, National Highways Authority of India, Dharwad.

Read :

1. Letter No. A5(4)GFL.CR.49/08-09, dated:23.10.2010 of the Principal Chief Conservator of Forest, Bangalore.
2. State Government letter No. FEE 97 FLL 2010, dated: 20.01.2011.
3. Letter No. 4 KRB765/2010-BAN/8622, dated: 11th February 2011 of Government of India, Ministry of Environment and Forests, Regional Office, Bangalore.
4. Letter No. A5(4)GFL.GR.49/08-09, dated: 05.12.2011 of the Principal Chief Conservator of Forest, Bangalore.
5. State Government letter No. FEE 97 FLL 2010, dated: 19.12.2011.
6. Letter No. 4-KRB765/2011-BAN/338, dated: 26th December, 2011 of Government of India, Ministry of Environment and Forests, Regional Office, Bangalore.

Preamble:

The Principal Chief Conservator of Forests, Bangalore vide letter dated 23.10.2010 read at (1) above had submitted a proposal to obtain the approval of Government of India under Section 2 of the Forest (Conservation) Act, 1980 for diversion of 1.90 ha. of forest land in Gunda RF, Hospet Taluk of Bellary District for widening of road 4/6 lane from Km 298.500 to Km 299.200 in NH 13 (Bijapur-Hospet Section) in favour of the DGM(Tech) and Project Director, National Highways Authority of India, Dharwad subject to certain conditions.

2. Accordingly, the proposal was recommended to Government of India for approval vide State Government letter dated 20.01.2011 read at (2) above.

3. The Government of India Ministry of Environment and Forests, Bangalore agreed to the proposal in principle (Stage-I) under Section 2 of the Forest (Conservation) Act, 1980 vide their letter dated: 11th February 2011 read at (3) above, subject to fulfillment of certain conditions.

4. The Principal Chief Conservator of Forests submitted the compliance report vide his letter dated 05.12.2011 read at (4) above and the same has been sent to Government of India vide State Government letter dated: 19.12.2011 read at (5) above.

5. The Government of India, Ministry of Environment and Forests, Bangalore vide their letter dated 26th December 2011 read at (6) above has conveyed their approval (Stage-II) under Section 2 of the Forest (Conservation) Act, 1980 for diversion of 1.90

ha. of forest land in Gunda RF, Hospet Taluk of Bellary District for widening of road 4/6 lane from Km 298.500 to Km 299.200 in NH 13 (Bijapur-Hospet Section) in favour of the DGM (Tech) and Project Director. National Highways Authority of india, Dharwad subject to certain conditions.

The proposal has been examined in detail and hence the order.

Government Order No. FEE 97 FLL 2010, Bangalore Dated:07/01/2012.

In the circumstances explained above in the preamble, the Government is pleased to accord sanction under Section 2 of the Forest (Conservation) Act, 1980 for diversion of 1.90 ha. of forest land in Gunda RF, Hospet Taluk of Bellary District for widening of road 4/6 lane from Km 298.500 to Km 299.200 in NH 13 (Bijapur-Hospet Section) in favour of the DGM (Tech) and Project Director, National Highways Authority of India, Dharwad, subject to the following conditions:

1. The legal status of the forest land shall remain unchanged.
2. Demarcation of the proposed forest area shall be carried out by erecting permanent RCC boundary pillars duly numbered at an interval of 20 mts. At the cost of user agency.
3. The compensatory afforestation shall be raised over double the extent of degraded forest land (3.80 ha.) at the cost of user agency.
4. Avenue plantation shall be raised on either side of the road at the cost of user agency.
5. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the State Government from the user agency and the same shall be transferred to either in SB A/c No. SB01025213-CAF Karnataka, Corporation Bank, CGO Complex. Lodhi Road, New Delhi-110003 (RTGS/IFSC No. CORP0000371) or in SB A/c No. 344902010105421-KARNATAKA CAMPA, Union Bank of India, Sundar Nagar, New Delhi-110003 (RTGS/IFSC No. UBIN0534498).
6. The total forest area utilized for the project shall not exceed 1.90 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
7. The lessee shall pay lease rent as fixed by the Government; from time to time.
8. The lease tenure is for a period of 20 years.
9. The leased out area should be used for the purpose for which it is granted. In case the land is not used for the stipulated purpose within one year or when it is no longer needed for the stipulated purpose, the area should be resumed to the Forest Department under Section 82 of Karnataka Forest Act, 1963. The concerned Deputy Conservator of Forests is authorized to take necessary action in this regard. No residential building shall be permitted in the proposed area.

9. Karnataka Forest Act 1963 and Rules 1969 and other relevant Acts & Rules will be applicable for any violation.
10. Only minimum number trees shall be cut out of the enumerated list base on actual requirement of the project.
11. The user agency shall pay the extraction and transportation charges for trees as estimated by the Deputy Conservator of Forests from proposed forest land.
12. Compensatory afforestation shall be raised at the cost of User Agency over degraded forest area twice the extent of forest area being diverted at the rate prevailing at the time of approval (at present it is Rs. 1,05,000/- per ha.) Or any extent as approved by the Ministry of Environment and Forests.
13. The User Agency shall pay the Net Present Value (NPV) as per Orders dated 28-3-2008 and 9-5-2008 of the Hon'ble Supreme Court of India.
14. The User Agency shall ensure that there should be no damage to the available fauna and other flora.
15. No crushing/breaking of stone shall be allowed inside forest area, Readymade material shall be used for up-gradation of such roads.
16. Road side plantation shall be taken up along the road at the project cost immediately. The plantation shall be maintained at the project cost.
17. No labour camp shall be established on the forest lands.
18. No work shall be allowed after sunset.
19. Any damage to forest area due to such up-gradation works shall be compensated by the User Agency. The extent of damage shall be assessed by the concerned Deputy Conservator of Forests.
20. The User agency shall not sub-lease, mortgage and hypothecate the forest area.
21. The User Agency shall abide by all the conditions imposed upon by the Government of India, the Government of Karnataka and the Principal Chief Conservator of Forests (HOFF).
22. Any other conditions that the Additional principal Chief Conservator of Forests (Central) Regional Office, Bangalore may impose from time to time for protection, improvement of flora and fauna in the forest area and public convenience, shall also be applicable.

By Order and in the name of the Governor of Karnataka,

G.H. Anasuyamma

Under Secretary to Government

Forest, Ecology & Environment Department

PR. 359

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ ಮಡಿಕೇರಿ, ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ ಮಡಿಕೇರಿ ಮತ್ತು ಶ್ರೀ ನರಸಿಂಹಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್ ಇವರುಗಳು ಎಸಗಿದ ಕರ್ತವ್ಯ ಲೋಪದ ಕುರಿತು ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ: ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ರವರ ಪತ್ರ ಸಂಖ್ಯೆ: ಸಿ2/ಡಬ್ಲ್ಯೂಎಲ್/ಸಿಆರ್-54/2011-12, ದಿನಾಂಕ: 23-12-2011.

ಪ್ರಸ್ತಾವನೆ :

ಮೇಲ್ಕಂಡ ಕ್ರಮ ಸಂಖ್ಯೆ ಓದಲಾದ ದಿನಾಂಕ: 23-12-2011ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ರವರು ಮಡಿಕೇರಿಯ ಉಪ ಅರಣ್ಯ ಸಂರಕ್ಷಣಾಧಿಕಾರಿರವರೊಂದಿಗೆ ಮಡಿಕೇರಿ ವಿಭಾಗದ ನಂ. 24, ಬ್ರಹ್ಮಗಿರಿ ಪಕ್ಷಿಧಾಮ ಮತ್ತು ಮಾಕುಟ್ ವನ್ಯಜೀವಿ ವಿಭಾಗವನ್ನು ಖುದ್ದು ತನಿಖೆ ಮಾಡಲಾಗಿ ಸದರಿ ವಿಭಾಗಕ್ಕೆ ಹೊಂದಿಕೊಂಡ ಹಸಿರು ಕಾಡಿನಲ್ಲಿ ಗಾಂಜಾ ಬೆಳೆಯನ್ನು ಬೆಳೆಯುತ್ತಿದ್ದು, ಈ ರೀತಿ ಅಕ್ರಮವಾಗಿ ಗಾಂಜಾ ಬೆಳೆಯನ್ನು ಬೆಳೆಯುವಲ್ಲಿ ಸದರಿ ವಿಭಾಗದ ಅರಣ್ಯ ಇಲಾಖೆಯ ಕಳ್ಳಬೇಟೆ ತಡೆಯುವ ಕ್ಯಾಂಪ್‌ನವರು ಗಾಂಜಾ ಬೆಳೆಯಲು ಕಾಫಿ ಎಸ್ಟೇಟ್ ಮಾಲೀಕರೊಂದಿಗೆ ಶಾಮೀಲಾಗಿ ಅರಣ್ಯ ವಿಭಾಗ 3 ಎಕರೆ ಪ್ರದೇಶದಲ್ಲಿ ಬೆಳೆದಿದ್ದಂತಹ ಮರಗಳನ್ನು, ಸಸಿಗಳನ್ನು ನಾಶ ಮಾಡಿರುವುದು ಕಂಡು ಬಂದಿರುತ್ತದೆ. ಈ ರೀತಿ ನಾಶ ಮಾಡಿದ ಬ್ರಹ್ಮಗಿರಿ ಪಕ್ಷಿಧಾಮದ ನಿತ್ಯ ಹರಿದ್ವರ್ಣದ ಕಾಡಾಗಿದ್ದು, ಇದು ತಡಸಾಲ್, ನಂದಿ, ತಾರೆ, ಕಿರಲ್‌ಬೋಗಿ, ಮಾವು, ನೇರಲು ಮತ್ತು ಇತ್ಯಾದಿ ಅತ್ಯಂತ ಬೆಲೆಬಾಳುವ ಜಾತಿಯ ಮರಗಳಾಗಿರುತ್ತವೆ. ಈ ರೀತಿ ನಾಶಪಡಿಸಿದ ಕಡಿತದಂತಹ ಮರಗಳು 80 ಸೆಂಟರ್ ಅಳತೆಯುಳ್ಳ ಮರಗಳಾಗಿರುತ್ತವೆ. ಇದಲ್ಲದೆ, ಆ ಪ್ರದೇಶದಲ್ಲಿ ಕೆಲವೊಂದು ವಿಶೇಷ ಜಾತಿಯ ಗಿಡ ಮರಗಳನ್ನು ನಾಶಪಡಿಸಿರುವುದಾಗಿದೆ. ಹಾಗೇ ನಾಶಪಡಿಸಿದಂತಹ ಸದರಿ ಪ್ರದೇಶದಲ್ಲಿ ಗಾಂಜಾ ಸಸಿಗಳನ್ನು ಬೆಳೆಯಲಾಗಿದೆ. ಈ ಕೃತ್ಯದ ಬಗ್ಗೆ ಮಡಿಕೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಯವರು ದಿನಾಂಕ: 21-11-2011 ರಂದು ತಪಾಸಣೆ ಮಾಡಿರುತ್ತಾರೆ. ಈ ಬಗ್ಗೆ ಗೋಣಿಕುಪ್ಪ, ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿತ್ತು. ಇಬ್ಬರು ಅರಣ್ಯ ವೀಕ್ಷಕರನ್ನು ಅಭಿರಕ್ಷೆಗೆ ತೆಗೆದುಕೊಳ್ಳಲಾಗಿದೆ. ಈ ರೀತಿ ನಿತ್ಯ ಹರಿದ್ವರ್ಣದ ಜೀವಿ ವೈವಿಧ್ಯದ ಕಾಡನ್ನು ನಾಶಪಡಿಸಿ ಅದರಲ್ಲಿ ಗಾಂಜಾ ಬೆಳೆಯನ್ನು ಬಹುಶಃ ಮುಂಗಾರು ಸಮಯದಲ್ಲಿ ಬೆಳೆಯುತ್ತಾರೆ. ಈ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮಡಿಕೇರಿರವರ ಕಛೇರಿಯ ದಾಖಲೆಗಳಲ್ಲಿ ಕುಟ್ಟಂದಿ ಗ್ರಾಮಸ್ಥರು ದೂರನ್ನು ನೀಡಿದ್ದು ಮತ್ತು ಈ ದೂರಿನ ಪ್ರತಿಯನ್ನು ವಲಯ ಅರಣ್ಯಾಧಿಕಾರಿ (ವನ್ಯಜೀವಿ), ಮಾಕುಟ್ ಹಾಗೂ ಮಡಿಕೇರಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ಕಳುಹಿಸಿರುತ್ತಾರೆ. ಸದರಿ ದೂರಿನ ಪ್ರತಿಯನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಮಡಿಕೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೂ ಹಾಗೂ ಆ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ತನಿಖೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಕಳುಹಿಸಿರುತ್ತಾರೆ. ಆದರೆ, ಸದರಿ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಳ್ಳದೆ ತಟಸ್ಥರಾಗಿ ಉಳಿದಿರುತ್ತಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ ಇಡೀ ವ್ಯವಸ್ಥೆಯು ಕುಸಿತವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ವಲಯ ಅರಣ್ಯಾಧಿಕಾರಿ ಮತ್ತು ವನಪಾಲಕ ಇವರುಗಳು ನಿಯತವಾಗಿ ಅರಣ್ಯ ಪ್ರದೇಶವನ್ನು ಉಸ್ತುವಾರಿ ಮಾಡಿ ಮತ್ತು ಸಕಾಲಿಕವಾಗಿ ಗಸ್ತು ವ್ಯವಸ್ಥೆಯನ್ನು ಕೈಗೊಂಡಿದ್ದರೆ, ಈ ಅಕೃತ್ಯವು ನಡೆಯುತ್ತಿರಲಿಲ್ಲ. ಆದ್ದರಿಂದ, ಸದರಿ ಪ್ರದೇಶದ ಅರಣ್ಯವು ನಾಶವಾಗಲು ಈ ಕೆಳಕಂಡ ಅಧಿಕಾರಿಗಳು ಕಾರಣರಾಗಿರುವುದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರುರವರ ಸ್ಥಳ ತನಿಖೆಯಿಂದ ಕಂಡು ಬಂದಿರುತ್ತದೆ.

1. ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ
2. ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ.
3. ಶ್ರೀ ನರಸಿಂಹ ಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್,
4. ಶ್ರೀ ರಾಕೇಶ್ ಸೊಲಾಪುರ್, ವನಪಾಲಕ, ಸೊಳ್ಳೆಕೊಳ್ಳಿ, ವಿಭಾಗ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಯವರ ವರದಿಯು ವಾಸ್ತವಾಂಶಗಳಿಂದ ಕೂಡಿದ್ದು, ಸತ್ಯಯುತವಾಗಿರುತ್ತದೆ. ಇದರಿಂದ, ಈ ಮೇಲೆ ಹೇಳಿದ ಅಧಿಕಾರಿ/ನೌಕರರುಗಳು ತಮ್ಮ ಕರ್ತವ್ಯ ಪಾಲನೆಯಲ್ಲಿ ಅತೀವ ಕರ್ತವ್ಯ ನಿರ್ಲಕ್ಷತೆ ತೋರಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುವುದರಿಂದ, ಅವರುಗಳು ಎಸಗಿದ ಕರ್ತವ್ಯ ನಿರ್ಲಕ್ಷ್ಯತೆಗಾಗಿ ಅವರುಗಳನ್ನು ಅಮಾನತ್ತಿನಲ್ಲಿಡಲು ಸರ್ಕಾರವು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 122 ಅಇವ 2011, ಬೆಂಗಳೂರು, ದಿನಾಂಕ: 24-12-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ರಾಕೇಶ್ ಸೊಲಾಪುರ್, ವನಪಾಲಕ, ಸೊಳ್ಳೆಕೊಳ್ಳಿ, ವಿಭಾಗ ಇವರನ್ನು ಈಗಾಗಲೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ ಇವರು ಅಮಾನತ್ತುಗೊಳಿಸಿರುವುದರಿಂದ, ಈ ಕೆಳಗೆ ಹೇಳಲಾಗಿರುವ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸದೇ ಅರಣ್ಯ ಸಂಪತ್ತನ್ನು ನಾಶವಾಗಲು ಕಾರಣವಾಗಿರುವುದು ಸ್ಪಷ್ಟವಾಗಿ ಕಂಡು ಬರುವುದರಿಂದ ಮತ್ತು ಆ ಸಂಬಂಧ ಎಸಗಿದ ತೀವ್ರ ದುರ್ನಡತೆ ಮತ್ತು ಕರ್ತವ್ಯ ಲೋಪಗಳಿಗಾಗಿ ಅವರುಗಳನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(d)ರನ್ವಯ ಪ್ರದತ್ತವಾದ ಅಧಿಕಾರವನ್ನು ಸರ್ಕಾರವು ಚಲಾಯಿಸಿ, ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಈ ಕೆಳಕಂಡ 3 ಜನ ಅಧಿಕಾರಿಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

1. ಶ್ರೀ ಮೋಟಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ
2. ಶ್ರೀ ಚಂದ್ರಶೇಖರಯ್ಯ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಮಡಿಕೇರಿ.
3. ಶ್ರೀ ನರಸಿಂಹ ಶೆಟ್ಟಿ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮಾಕುಟ್

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಗಳು ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಟ್ಟು ತೆರಳಕೂಡದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಎಸ್. ಗುರುಸಿದ್ದಯ್ಯ

ಸರ್ಕಾರದ ಉಪ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್. 360

ಸಹಕಾರ ಸಚಿವಾಲಯ

ವಿಷಯ : ಬಣಜಾರ ಬಾಲಕರ ವಿದ್ಯಾರ್ಥಿನಿಲಯ ಸಂಸ್ಥೆ (ರಿ) ಚಿತ್ರದುರ್ಗ ಈ ಸಂಸ್ಥೆಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಬಗ್ಗೆ

ಓದಲಾಗಿದೆ: 1) ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ ಎಡಿಎಂ/168/ಎಸ್‌ಒಆರ್–1/2009–10 ದಿನಾಂಕ 31/5/2011

2) ಕಾರಣ ಕೇಳುವ ನೋಟಿಸು ಸಂಖ್ಯೆ:ಸಇ 68 ಸಸಂನೋ 2011, ದಿನಾಂಕ 24/06/2011

3) ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ ಎಡಿಎಂ/168/ಎಸ್‌ಒಆರ್–1/2008–09 ದಿನಾಂಕ 09/11/2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 31/05/2011 ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರು ಬಣಜಾರ ಬಾಲಕರ ವಿದ್ಯಾರ್ಥಿನಿಲಯ ಸಂಸ್ಥೆ (ರಿ) ಚಿತ್ರದುರ್ಗ ಇದರ ಕಾರ್ಯದರ್ಶಿಗೆ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸಲು ನೋಟೀಸ್ ನೀಡಿದರು ಗೈರು ಹಾಜರಾಗಿ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕಳೆದ ಏಳು ವರ್ಷಗಳಿಂದಲೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 11ರನ್ವಯ ಪ್ರತಿ ವರ್ಷ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಜರುಗಿಸಿರುವುದಿಲ್ಲ ಹಾಗೂ ಕಲಂ 13 ರನ್ವಯ ಪ್ರತಿ ವರ್ಷ ಲೆಕ್ಕ ಪತ್ರಗಳನ್ನು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಸಲ್ಲಿಸಲು ವಿಫಲರಾಗಿರುತ್ತಾರೆ.

ಸಂಘದ ಬೈಲಾ ಕ್ರಮ ಸಂಖ್ಯೆ:8(1) ರನ್ವಯ ಪ್ರತಿ 3 ವರ್ಷಕ್ಕೊಮ್ಮೆ ಚುನಾವಣೆ ನಡೆಸಿ ಸಂಘದ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಬೇಕಾಗಿದ್ದು, ಕಳೆದ 7 ವರ್ಷಗಳಿಂದಲೂ ಚುನಾವಣೆ ನಡೆಸಿರುವುದಿಲ್ಲ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತಿ ವರ್ಷ ಅನುದಾನ ಪಡೆದು ಲೆಕ್ಕಪತ್ರ ಸರಿಯಾಗಿ ನಿರ್ವಹಿಸಿರುವುದಿಲ್ಲ. ಸಂಘದಲ್ಲಿ ಅವಶ್ಯಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲವೆಂದು ದೂರುಗಳು ಬಂದಿರುತ್ತವೆ. ಆದರಿಂದ ಸಂಘದ ಹಿತದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ)(1) ರನ್ವಯ ಆಡಳಿತಾಧಿಕಾರಿಯನ್ನಾಗಿ ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್, ಚಿತ್ರದುರ್ಗ ಅಥವಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ ಇವರನ್ನು ನೇಮಕ ಮಾಡುವುದು ಸೂಕ್ತವೆಂದು ಸಹಕಾರ ಸಂಘಗಳ ಉಪ ನಿಬಂಧಕರು ಚಿತ್ರದುರ್ಗ ರವರು ಶಿಫಾರಸ್ಸು ಮಾಡಿದ್ದು ಅದನ್ನು ಪರಿಗಣಿಸಿ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ದಿನಾಂಕ: 24/06/2011 ರ ಕಾರಣ ಕೇಳುವ ನೋಟಿಸಿನಲ್ಲಿ ಸಂಘದವರು ಸಂಘದಲ್ಲಿ ಮಾಡಿರುವ ಬೈಲಾ ಉಲ್ಲಂಘನೆ ಹಾಗೂ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 11 ಹಾಗೂ 13 ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು ಸಂಘದ ಸದಸ್ಯರ ಹಿತದೃಷ್ಟಿಯಿಂದ ಹಾಗೂ ಸ್ವೀಕೃತವಾದ ದೂರಿನ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ)(1) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದು ಎಂಬ ಬಗ್ಗೆ ನಿಮ್ಮ ಲಿಖಿತ/ಮೌಖಿಕ ಹೇಳಿಕೆಯನ್ನು ಪತ್ರ ತಲುಪಿದ 15 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವುದು ತಪ್ಪಿದಲ್ಲಿ ನೀವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ ಸದರಿ ನೋಟಿಸಿಗೆ ಸಂಘದ ಅಧ್ಯಕ್ಷರು ದಿನಾಂಕ 16/08/2011 ರಂದು ಹೇಳಿಕೆಯನ್ನು ನೀಡಿ ಆಡಳಿತ ಮಂಡಳಿಯಲ್ಲಿ ವಿವಾದಗಳು ಇರುವುದರಿಂದ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ ಸದರಿ ಹೇಳಿಕೆಯನ್ನು ಲಗತ್ತಿಸಿ, ನಿಯಮಾನುಸಾರ ಪರಿಶೀಲಿಸಿ, ನಿಮ್ಮ ಅಭಿಪ್ರಾಯವನ್ನು ತಿಳಿಸುವಂತೆ ದಿನಾಂಕ 2/9/2011 ರಂದು ಸಹಕಾರ ಸಂಘಗಳ ನಿಬಂಧಕರಿಗೆ ಪತ್ರವನ್ನು ಬರೆಯಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ದಿನಾಂಕ 9/11/2011ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಬೆಂಗಳೂರು ಇವರು ಕರ್ನಾಟಕ ಸಂಘಗಳ ಉಪ ನಿಬಂಧಕರು ಚಿತ್ರದುರ್ಗ ಇವರು ದಿನಾಂಕ 7/5/2011 ರಲ್ಲಿ ಸಲ್ಲಿಸಿರುವ ವರದಿಯನ್ವಯ ಬಣಜಾರ ಬಾಲಕರ ವಿದ್ಯಾರ್ಥಿ ನಿಲಯ ಸಂಸ್ಥೆ (ರಿ) ಚಿತ್ರದುರ್ಗ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ)(1) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 68 ಸಸಂನೋ 2011, ಬೆಂಗಳೂರು, ದಿನಾಂಕ: 09–01–2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಬಣಜಾರ ಬಾಲಕರ ವಿದ್ಯಾರ್ಥಿ ನಿಲಯ ಸಂಸ್ಥೆ (ರಿ) ಚಿತ್ರದುರ್ಗ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ)(1) ರನ್ವಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ನೋಂದಣಾಧಿಕಾರಿ ಚಿತ್ರದುರ್ಗ ಇವರನ್ನು ಆಡಳಿತಾಧಿಕಾರಿಯಾಗಿ ಆರು (6) ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘಕ್ಕೆ ಚುನಾವಣೆಯನ್ನು ನಡೆಸಿ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಹಾಗೂ ಸರ್ಕಾರಕ್ಕೆ ವರದಿ ಮಾಡುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 362

ಎ.ಎಸ್. ವಿಶ್ವೇಶ್ವರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ–2

ಸಹಕಾರ ಇಲಾಖೆ

HOME SECRETARIAT

Sub : Constitution of Tender Scrutinizing Committee and prescription of various Authorities in Home Department for procurement of goods and services under the KTPP Act, 1999 and the Rules framed there under and other related matters.

Ref :
1) G.O. No. HD 14 PFS 2010 dated: 03-02-2011.
2) Letter No. Stores-2[2]58/2001-02 dated: 19-11-2011 from the Director General & Inspector General of Police, Bangalore.
3) GO No. HD 171 EFS 2010 dated: 03-01-2012.

Preamble:

In the Government Order read at (1) above, Government has issued orders constituting Tender Inviting Authority, Tender Scrutinizing Committee & Tender Accepting Authority and prespcription of various Authorities in Home Department for procurement of goods and services under the KTPP Act, 1999 and Rules framed there under and other related matters.

The Director General & Inspector General of Police, Bangalore in his letter read (2) above, has requested to reconsider the order issued vide GO No. HD 14 PFS 2010 dated: 03-02-2011 so as to avoid procedural delays in sanction and consequent lapse of grants.

In Government Order read at [3] above, Government has issued special Financial Powers to the Director General and Inspector General of Police, Commissioner of Police and other Head of Department & District Level Officers of Police Department.

The proposal of the Director General & Inspector General of Police, Bangalore has been examined in the light of the Government Order read at [3] above regarding delegation of special financial powers to the Director General and Inspector General of Police, Bangalore & other level officers of Police Department and also the present system of procuring items through Karnataka State Police Housing Corporation Limited. It was noted that although sanction for procurement was given by the Government, the Police Department in most of the cases did not procure the items within the relevant financial year sanctioned and also in most cases the provision contained in KTPP Act 1999 and rules framed there under were not followed. It was further noticed that the practice of authorizing Chairman and Managing Director, Karnataka State Police Housing Corporation to call tender, to approve and to procure the goods excluding construction of building is improper and not authorised under the KTPP Act and rules framed there under or under the Karnatka Financial Code, where funds are earmarked to Director General of Police/Heads of Departments coming under the control of Home Department. In several cases prior exemption from Government under KTPP Act. 1999 were not sought and proposals were submittted for post facto approval. Therefore in order to ensure that all purchases under Central & States Schemes are made as per KTPP Act & Rules in respect of the Police Department and other Departments coming under the control of Home Department, the following order are issued to further streamline the procurements of goods & services.

Government Order No. HD 146 EFS 2010, Bangalore Dated: 13-01-2012.

In the detailed circumstances explained in the preamble portion of this order and in modification of Government Order read at [1] above, the Tender Inviting Authority, Tender Scrutinizing Authority & Tender Accepting Authority for procurement of goods and services under KTPP Act, 1999 and Rules framed there under, where the value of procurement is less than Rs. 1.00 crore and Rs. 1.00 Crore and above in respect of Police Department and other departments coming under the administrative control of Home Department shall be as follows, subject to conditions mentioned below:-

Sl.No.	Value of the Procurement	Tender Inviting Authority	Tender Scrutinizing Authority	Tender Accepting Authority
1	Less than Rs. 1 crores	Head of the Department other than Police Depart- ment	Head of the Department other than Police Depart- ment	Head of the Department other than Police Depart ment
2	*Upto 5 crores *Note: as per the delegation of powers issued from time to time and also as per special final powers delegated vide GO No. HD 171 EFS 2010 dated: 03-01-2012	DG &IGP	DG & IGP	DG & IGP
3	Rs. 1 crore and less than Rs. 5 crores	Head of the Department other than Police Depart- ment	Head of the Department other than Police Depart- ment	Principal Secretary/Secr etary [PCAS] to Government, Home Department

4	above Rs. 5 crores	DG & IGP or concerned Head of the Department coming under the Control of Home Department	Committee constituted under the Chairmanship of Principal Secretary/Secretary [PCAS] to Government in terms of this GO	Government in Home Department

Conditions

1. All purchases should be made strictly in accordance with the procedure prescribed under the KTPP Act, 1999 and the Rules framed there under.
2. The Director General and Inspector General of Police/Concerned Head of Department coming under the control of Home Department shall exercise financial powers within the limits delegated to him by the Government from time to time.
3. In respect of items of expenditure exceeding five crores in respect of Director General and Inspector General of Police and exceeding one crore in respect of Heads of Departments coming under the control of Home Department shall be sent to the Government for approval.
4. Details of tender & the specific proposal with the final vendor on the basis of the KTPP Act, 1999 and the Rules framed under beyond the financial powers delegated shall be sent to Government for approval with the recommendation of the Director General & Inspector General of Police/Heads of Department coming under the control of Home Department. Only thereafter shall final order be placed with the vendor for supply.
5. The power delegated under this order shall not be delegated further by the Director General & Inspector General of Police/Heads of Departments coming under the control of Home Department to the sub-ordinate officers.
6. The practice of authorizing Chairman and Managing Director of the Karnataka State Police Housing Corporation to call tender, to approve and to procure **the goods** excluding construction of building is improper and not authorized under the KTPP Act and the rules framed there under or under the Karnataka Financial Code **where funds are earmarked to Director General of Police/Heads of Departments coming under the control of Home Department**. That being so placing budget allocated funds to procure equipments to any authority outside the Government such as a Corporation owned by the Government is improper and such delegation, if any done in the past, shall stand withdrawn with immediate effect.
7. The calling of tenders for procurement of goods and incurring the expenditure thereon **under no circumstances whatsoever shall exceed the budgetary allocation** under the given head for the said approved items and shall not spill over to the succeeding year. Any deviation in this regard shall render the Authority issuing such order liable for refund of the funds to the Government.
8. The Tender Calling Authority, Scrutiny Authority and Tender Accepting Authority shall process these tenders subject to the limits of financial powers delegated to them from time to time & special powers delegated vide Government order No. HD 171 EFS 2010 dated: 03-01-2012 in respect of Director General and Inspector General of Police and other financial orders issued by Finance Department from time to time in respect of Heads of Department Coming under the control of Home Department.
9. No procurement shall be done without following the procedure laid down under the KTPP Act 1999 and the rules framed there under. Exemption in emergency cases or cases of single manufacturer of special goods, etc., if necessary **shall be obtained before placing supply orders or before procuring any goods or services.** Requests for exemption under the KTPP Act 1999 & the rules framed there under after procuring or placing orders shall be summarily rejected and the officers issuing such order without prior permission of Government shall be held personally responsible.
10. All procurements included in and approved in the Annual Budget Programme shall be completed before the closure of the relevant financial year. The procured goods shall be taken to stock and payment shall be made before 31st March of the relevant financial year.
11. These instructions will come into effect immediately in respect of all cases including the cases on hand.
12. These orders will not apply to CCTNS Project. However the provision of KTPP Act, 1999 and the rules framed there under shall apply to the CCTNS Project.

Further the Tender Scrutinizing Committee for expenditure on items above Rs. 5.00 crores in respect of Police Department is reconstituted under the Chairmanship of Principal Secretary to Government, Home Department as below:-

1)	The Principal Secretary to Government, Home Department	-	Chairman
2)	The Director General & Inspector General of Police, Bangalore	-	Member
3)	JCF, DG & IGP Office, Bangalore	-	Member
4)	Internal Financial Advisor, Home Department	-	Member
5)	Co-opt any officer as member of the above committee	-	Member
6)	Additional Director General of Police (Administration) or concerned Additional Director General of Police (He shall place the concerned file along with a detailed note before the committee)	-	Convener

In respect of Heads of Departments other than the Police Department coming under the administrative control of the Home Department namely, Fire & Emergency Services, Prison, Sainik Welfare & Resettlement, Home Guards & Civil Defense, Department of Prosecution for items of expenditure amounting to Rs. 5 crores and above the Tender scrutinizing Committee is reconstituted under the Chairmanship of Principal Secretary/Secretary [PCAS] to Government, Home Department as below:-

1)	The Principal Secretary to Government /Secretary to Government [PCAS], Home Department	-	Chairman
2)	Head of Department concerned	-	Member
3)	Internal Financial Advisor, Home Department	-	Member
4)	Co-opt any officer as member of the above committee	-	Member
5)	Concerned Director/Joint Director of HOD	-	Convener

This order is issued as per delegation of powers delegated to Secretaries of Administrative Departments issued vide GO No. FD 1 TFP 2008 dated: 16-05-2008.

By Order and in the name of the Governor of Karnataka,

B. Rajamma

Under Secretary to Government

(Police Expenditure)

Home Department

PR. 363

ಕಾರ್ಮಿಕ ಸಚಿವಾಲಯ

ವಿಷಯ : ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವ ಕುರಿತು.

ಓದಲಾಗಿದೆ : ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂಖ್ಯೆ: ಉತನಿ/ತ/ಯೋ–2/ವಿವ–10/2006–07, ದಿನಾಂಕ: 25/05/2011.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು 2011–12ನೇ ಆಯವ್ಯಯ ಭಾಷಣದಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಿದ್ದು, ಪ್ರಾಯೋಗಿಕ ಹಂತವಾಗಿ ಸದರಿ ವೃತ್ತಿಯನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹುಬ್ಬಳ್ಳಿ ಮತ್ತು ಬೆಂಗಳೂರು–29ರ ಮಹಿಳಾ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಪ್ರಾರಂಭಿಸಲು ಯೋಜಿಸಿದ್ದು, ಸದರಿ ಸಂಸ್ಥೆಗಳಲ್ಲಿ ಮೇಲ್ಕಂಡ ವೃತ್ತಿ ಘಟಕವನ್ನು ಆರಂಭಿಸುವುದರಿಂದ ಒಟ್ಟು 84 ಹೆಚ್ಚುವರಿ ಅಭ್ಯರ್ಥಿಗಳಿಗೆ ತರಬೇತಿಯ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ ಎಂದು ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ ಸಾಮಾನ್ಯ ವೆಚ್ಚಗಳು 2230–03–101–0–01–051 ಕೈಗಾರಿಕಾ ತರಬೇತಿ ಸಂಸ್ಥೆ (ಯೋಜನೆ) ಅಡಿಯಲ್ಲಿ ಭರಿಸಲು ಉದ್ದೇಶಿಸಲಾಗಿದೆ ಎಂದು ಈ ಲೆಕ್ಕ ಶೀರ್ಷಿಕೆಯಲ್ಲಿ 2011–12 ನೇ ಸಾಲಿಗೆ ಒದಗಿಸಿರುವ ಅನುದಾನವು ಪ್ರಸ್ತುತ ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳಿಗೆ ಸಾಲದೇ ಬರುವುದರಿಂದ, ಸದರಿ ಪ್ರಸ್ತಾವನೆ ಕುರಿತಂತೆ ರೂ. 252.60 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರುತ್ತಾ, ಸದರಿ ಸಂಸ್ಥೆಗಳಲ್ಲಿ 2 ಘಟಕಗಳ ಅನುಷ್ಠಾನಕ್ಕೆ 12 ಸಿಬ್ಬಂದಿಯವರ ಹುದ್ದೆಗಳನ್ನು ಸೃಜಿಸಲು ಕೋರುತ್ತಾ, ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡುವಂತೆಯೂ ಸಹ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 107 ಇಟಐ 2011, ಬೆಂಗಳೂರು, ದಿನಾಂಕ 13–01–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ 2011–12ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮ), ಹೊಸೂರು ರಸ್ತೆ, ಬೆಂಗಳೂರು–29 ಇಲ್ಲಿ ಮೆಡಿಕಲ್ ಎಲೆಕ್ಟ್ರಾನಿಕ್ಸ್ ವೃತ್ತಿ ಘಟಕವನ್ನು ಪ್ರಾರಂಭಿಸುವುದಕ್ಕೆ ಹಾಗೂ ಅದಕ್ಕೆ ಅಗತ್ಯವಿರುವ 4 ಕಿರಿಯ ತರಬೇತಿ ಅಧಿಕಾರಿ ಮತ್ತು 2 ಕಾರ್ಯಾಗಾರ ಸಹಾಯಕರು ಸೇರಿ ಒಟ್ಟು 6 ಹುದ್ದೆಗಳನ್ನು ಸೃಜಿಸುವುದಕ್ಕೆ ಹಾಗೂ ಅವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಒಟ್ಟು ರೂ. 221.236 ಲಕ್ಷ (ಎರಡು ಕೋಟಿ ಇಪ್ಪತ್ತೊಂದು ಲಕ್ಷದ ಇಪ್ಪತ್ತೂರು ಸಾವಿರದ ಆರು ನೂರು ರೂಪಾಯಿಗಳು ಮಾತ್ರ)ಗಳ ಹೆಚ್ಚುವರಿ ಅನುದಾನವನ್ನು ಒದಗಿಸುವುದಕ್ಕೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಯೋಜನಾ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಪಿಡಿ 39 ಎಂ&ಇ 2011 ದಿನಾಂಕ: 18/06/2011ರ ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 670 ವೆಚ್ಚ–9/11 ದಿನಾಂಕ: 05/01/2012ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಪಿ.ಆರ್. 364

HORTICULTURE SECRETARIAT

Sub : Implementaion of Coconut Palm Insurance Scheme during 2011-12-reg.

Read : Govt., Order No. HCD 152 HPP 2009, dated : 19-03-2010.

2. CDB letter No. 1539/2011-Stat dated : 09-12-2011.

3. Letter of Director of Horticulture No. ತೋಇ/ತೋಬೆ/ಸತೋಅ–2/8–11–12 dated : 22-12-2011.

Preamble:

Coconut Development Board has informed that Government of India has extended " Coconut Palm Insurance Scheme (CPIS)" for implementation for one more year, during 2011-12 on the same terms and conditions as in the previous years. In this connection, the administrative approval and financial sanction has been sought from Department of Horticulture, Government of Karnataka. During the current year i.e., 2011-12 total outlay for Karnataka under Coconut Palm Insurance Scheme is Rs. 10.00

lakhs out of which Rs. 5.00 lakhs (50%) will be Board's contribution and Rs. 2.50 lakhs (25%) will be the State Government's share of Premium. The rest will be borne by the beneficiary farmers themselves vide CDB's letter read at (2) above.

2. The Director of Horticulture has informed that a balance amount of Rs. 11,19,258.58/- (State share Rs. 3,73,086.19 + CDB share 7,46,172.39) of the year 2010-11 has been available with Agriculture Insurance Company (AIC) vide letter read at (3) above and the same can be utilized for the year 2011-12.

3. The proposal of the Director of Horticulture has been examined and hence this Order.

Government Order No. HCD 72 HPP 2011 Bangalore, dated 12-01-2012

Government is pleased to accord State Level Administrative Approval for implementing the scheme namely, " Coconut Palm Insurance Scheme" during 2011-12 as per details given below;

(Rs. in lakhs)

Phy. Target (No. of palms in lakh)	Phy. Target (in Ha)	CDB share (50 %)	State share (25%)	Farmer's share (25%)	Total outlay
1.82	1399	5.00	2.50	2.50	10.00

2. The Operational Modalities for implementation of this scheme will be as per the Government Order read at (1) above.
3. The Agriculture Insurance Company shall utilized the Coconut Development Board share and State share already available with them and hence funds will not be released for this purpose during 2011-12.
4. Further, details of operational guidelines if require will be issued by Director of Horticulture.
5. This Order is issues with the concurrence of Internal Financial Advisor vide Note No. ತೋಇ 2 ಅಂಆಸ 2012 dated : 09-01-2012.

By Order and in the name of the Governor of Karnataka

B.C. Prakash

Under Secretary to Government

Horticulture Department

P.R. 365

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ರಾಮನಗರ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1) ಅಧ್ಯಕ್ಷರು, ವಕೀಲರ ಸಂಘ, ರಾಮನಗರ ಇವರ ಪತ್ರ ದಿನಾಂಕ: 29-06-2010.

2) ಸರ್ಕಾರದ ಪತ್ರ ಸಂಖ್ಯೆ: ಲಾ 226 ಎಲ್‌ಸಿಎಲ್ 2010 ದಿನಾಂಕ: 10-12-2010, 02-09-2011 ಮತ್ತು 17-11-2011.

3) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ ಇವರ ಪತ್ರ ಸಂಖ್ಯೆ: ಆಡಳಿತ ಶಾಖೆ/10/2010 ದಿನಾಂಕ: 13-09-2011.

ಪ್ರಸ್ತಾವನೆ :

ಅಧ್ಯಕ್ಷರು, ವಕೀಲರ ಸಂಘ, ರಾಮನಗರ ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 29-06-2010ರ ಪತ್ರದಲ್ಲಿ ರಾಮನಗರ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿಗಳನ್ನು ನೇಮಕ ಮಾಡುವಂತೆ ಕೋರಿದ್ದಾರೆ. ಆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಮೇಲೆ (2)ರಲ್ಲಿ ಓದಲಾದ ದಿನಾಂಕ: 10-12-2010. ಹಾಗೂ ತದನಂತರದ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾಧಿಕಾರಿ, ರಾಮನಗರ ಇವರುಗಳನ್ನು ಕೋರಲಾಗಿತ್ತು.

ಅದರಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ ಇವರು ಮೇಲೆ (3) ರಲ್ಲಿ ಓದಲಾದ ದಿನಾಂಕ: 13-09-2011ರ ಪತ್ರದಲ್ಲಿ ರಾಮನಗರ ಕಂದಾಯ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದಿಂದ ಯಾವುದೇ ನೋಟರಿಗಳು. ನೇಮಕ ಹೊಂದಿರುವುದಿಲ್ಲ. ರಾಜ್ಯ ಸರ್ಕಾರದಿಂದ ನೇಮಕಗೊಂಡ ಇಬ್ಬರು ನೋಟರಿಗಳಿದ್ದು, ಇವರು ವರ್ಷಕ್ಕೆ ಸರಾಸರಿ 1500 ರಿಂದ 2000 ದಾಖಲಾತಿಗಳನ್ನು ನೋಟರೈಜ್ ಮಾಡಿರುತ್ತಾರೆ. 2010ರ ಅಂಕಿ ಅಂಶಗಳನ್ನು ತೆಗೆದುಕೊಂಡಲ್ಲಿ ಒಟ್ಟು 1272 ನೋಟರಿ ದಾಖಲಾತಿಗಳನ್ನು ದೃಢೀಕರಿಸಿರುತ್ತಾರೆ. ರಾಮನಗರವು ಹೊಸ ಜಿಲ್ಲೆಯಾದುದರಿಂದ ಮತ್ತು ಜಿಲ್ಲಾ ಕೇಂದ್ರದಲ್ಲಿ ಈಗಾಗಲೇ ಇರುವ 6 ನ್ಯಾಯಾಲಯಗಳ ಜೊತೆಗೆ ಹಲವಾರು ನ್ಯಾಯಾಲಯಗಳು ಸ್ಥಾಪನೆಯಾಗಿರವುದರಿಂದಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಕಚೇರಿಗಳು ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿತವಾಗುತ್ತಿರುವುದರಿಂದ ಹಾಗೂ ಜಿಲ್ಲಾ ಕೇಂದ್ರದ ಜನ ಸಾಂದ್ರತೆ ಹೆಚ್ಚುವ ಸಾಧ್ಯತೆಗಳಿರುವುದರಿಂದ ಜಿಲ್ಲಾ ಕೇಂದ್ರವಾದ ರಾಮನಗರ ಕಂದಾಯ ತಾಲ್ಲೂಕಿಗೆ 5 ಹೆಚ್ಚುವರಿ ನೋಟರಿ ಹುದ್ದೆಗಳ ಅವಶ್ಯಕತೆ ಕಂಡುಬರುತ್ತದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಅದರಂತೆ ಈ ಆದೇಶ.

ಸರ್ಕಾರದ ಆದೇಶ ಲಾ 226 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ 10-01-2012

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ರಾಮನಗರ ಕಂದಾಯ ತಾಲ್ಲೂಕಿಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ 5 ನೋಟರಿ ಹುದ್ದೆಗಳನ್ನು ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಕೆ. ಲಕ್ಷ್ಮೀನರಸಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2) (ಪ್ರಭಾರ)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 366

INFROMATION TECHNOLOGY, BIOTECHNOLOGY AND SCIENCE TECHNOLOGY SECRETARIAT

Sub: Approval of the Project proposal of M/s Cornerstone Property Pvt. LTD, No. 540, 3rd Floor, CMH Road, Indira Nagar, Bangalore-560 038, To Setup An "INFO-Tech park, Hardware Park with Residential Condominiums & Common Facilities." At Different Sy Nos. of Varthur & Gunjur Villages, Varthur Hobli, Bangalore East Taluk.

Read : 1.Govt., Order No. ITD 08 MDA 2008 (17) Dated: 27-05-2008.

2. Managing Director, Karnataka Udyog Mitra's Letter No. KUM/SHLCC/DD-2/ (682-2007-08) 2011-12 Dated: 30-12-2011.

3. Proceedings of the 25th the SHLCC Meeting held on 14th July 2011.

Preamble:

Managing Director, Karnataka Udyog Mitra vide letter read at (2) above has clarified that Names of the villages for location of the project have been verified with the original application submitted by the Company to the 13th SHLCC meeting, where the project is proposed to be established is mentioned as Varthur & Gunjur and not "Thubarahalli & Siddapura villages". In the 25th SHLCC Meeting read at (3) above, it was approved to amend the Government Order read at (1) above to incorporate village names as Varthur & Gunjur in the place of Thubarahalli & Siddapur Villages. Hence Managing Director, Karnataka Udyoga Mitra, has requested to issue an amendment to the Government Order read at (1) above. Hence the following order.

Government Order No. ITD 08 MDA 2008 (17, Bangalore Dated : 16-01-2012

In para (3) of preamble and in the operative portion of the Government Order No. ITD 08 MDA 2008(17), dated 27-05-2008 on the above mentioned subject, the words "Thubarahalli & Siddapura Villages" shall be replaced by the read as " Varthur & Gunjur Villages".

By Order and in the name of the Governor of Karnataka
E. Ramakrishnappa
Under Secretary to Government
Department of Information Technology,
Biotechnology and Science Technology

P.R. 367

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಸನ ಗ್ರಾಮಾಂತರ ಜಿಲ್ಲೆ ಅರಸೀಕೆರೆ ತಾಲ್ಲೂಕು, ಅರಕಲಗೊಡು ಚನ್ನರಾಯಪಟ್ಟಣ ಹೊಳೆನರಸೀಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಯೋಇ 309 ಪಿಟಿಪಿ 94, ದಿನಾಂಕ: 07–08–1995.
2) ರಾಜ್ಯ ಅಧ್ಯಕ್ಷರು ರವರ ಪತ್ರ ಸಂಖ್ಯೆ: ರಾಕಾ/ನಾನಿ/818/2011, ದಿ: 3–12–2011.
3) ರಾಜ್ಯ ಅಧ್ಯಕ್ಷರು ರವರ ಪತ್ರ ಸಂಖ್ಯೆ: ರಾಕಾ/ನಾನಿ/952/2011, ದಿ: 14–11–2011.
4) ರಾಜ್ಯ ಅಧ್ಯಕ್ಷರು ರವರ ಪತ್ರ ಸಂಖ್ಯೆ: ರಾಕಾ/ನಾನಿ/691/2011, ದಿ: 26–10–2011.
5) ರಾಜ್ಯ ಅಧ್ಯಕ್ಷರು ರವರ ಪತ್ರ ಸಂಖ್ಯೆ: ರಾಕಾ/ನಾನಿ/806/2011, ದಿ: 25–10–2011.
6) ರಾಜ್ಯ ಅಧ್ಯಕ್ಷರು ರವರ ಪತ್ರ ಸಂಖ್ಯೆ: ರಾಕಾ/ನಾನಿ/755/2011, ದಿ: 25–10–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ: 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ / ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಹಾಸನ ಗ್ರಾಮಾಂತರ ಜಿಲ್ಲೆ ಅರಸೀಕೆರೆ ತಾಲ್ಲೂಕು, ಅರಕಲಗೂಡು ತಾಲ್ಲೂಕು ಮತ್ತು ಚನ್ನರಾಯಪಟ್ಟಣ ಹೊಳೆನರಸೀಪುರ ತಾಲ್ಲೂಕಿನ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಅದ್ದರಿಂದ ಸರ್ಕಾರ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಯೋಇ 67 ಯೋವಿವಿ 2009, ಬೆಂಗಳೂರು, ದಿನಾಂಕ 06–01–2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಬಂಧದಲ್ಲಿ ಸೂಚಿಸಿರುವಂತೆ ಸದಸ್ಯರುಗಳನ್ನು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಭೀಮಾಶಂಕರ ರಾಸೂರ್
ಸರ್ಕಾರದ ಅಧೀನ ಕಾರ್ಯದರ್ಶಿ 1& 2 (ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಹಾಸನ ಜಿಲ್ಲೆ:

ಹೊಳೆನರಸೀಪುರ ತಾ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀಮತಿ ಕಮಲ ಕೋಂ ಕುಮಾರ, ಕೋಡಿಹಳ್ಳಿ, ದೊಡ್ಡಕುಂಚೆ ಅಂಚೆ, ಹಳೇಕೋಟೆ ಹೋಬಳಿ	ಮಹಿಳೆ
2	ಶ್ರೀ ತೀರ್ಥೇಶ್ ಬಿನ್ ಬಸವರಾಜಪ್ಪ, ಹಿರೇಬೆಳಗುಲಿ ಅಂಚೆ, ಹಳೇಕೋಟೆ ಹೋಬಳಿ	ಸಾಮಾನ್ಯ
3	ಶ್ರೀ ಜಿ.ಎಸ್. ಲೋಕೇಶ್ ಬಾಬು, ಬಿನ್ ಜಿ. ಸಿದ್ದೇಗೌಡ, ಗುಲಗಂಜಹಳ್ಳಿ, ಶ್ರವಣೂರು ಅಂಚೆ, ಹಳ್ಳಿಮೈಸೂರು ಹೋಬಳಿ	ಬಿ.ಸಿ.ಎಂ
4	ಶ್ರೀ ಟಿ.ಆರ್. ವಿಜಯಕುಮಾರ್ ಬಿನ್ ರುದ್ರಯ್ಯ, ತೆರಣ್ಯ, ಹಳೇಕೋಟೆ ಹೋಬಳಿ	ಎಸ್.ಸಿ
5	ಶ್ರೀ ಬಿ.ಕೆ. ರಾಮಚಂದ್ರ ಮಾ: ಗ್ರಾ: ಪಂ: ಅದ್ಯಕ್ಷರು ಬಿದರಕ್ಕ, ಹಳ್ಳಿಮೈಸೂರು ಹೋಬಳಿ	ಸಾಮಾನ್ಯ
6	ಶ್ರೀ ಅಹಮದ್ ಷರೀಫ್ ಬಿನ್ ಹೆಚ್.ಪಿ. ಮಹಮದ್ ಷರೀಫ್ ಬಸವನಗುಡಿ ಬೀದಿ, ಹೊಳೆನರಸೀಪುರ ತಾ: ಹಾಸನ ಜಿಲ್ಲೆ	ಅ.ಸಂ

ಹಾಸನ ಜಿಲ್ಲೆ:

ಚನ್ನರಾಯಪಟ್ಟಣ ತಾ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ನಿಂಗೇಗೌಡ ಬಿನ್ ಬೋರೇಗೌಡ, ಬೊಮ್ಮೇನಹಳ್ಳಿ, ಹಿರಿಸಾವೆ ಹೋಬಳಿ	ಸಾಮಾನ್ಯ
2	ಶ್ರೀ ಪಿ.ಎ. ನಾಗರಾಜು ಬಿನ್ ಅಮಾಸೇಗೌಡ, ಪೂಮಡಿಹಳ್ಳಿ, ಜುಟ್ಟನಹಳ್ಳಿ ಅಂಚೆ, ಶ್ರವಣಬೆಳಗೊಳ ಹೋಬಳಿ	ಸಾಮಾನ್ಯ
3	ಶ್ರೀಬಿ.ಡಿ. ಲಿಂಗದೇವರು ಬಿನ್ ಬಿ.ಎಲ್ ದೊಡ್ಡವೀರಪ್ಪ ಬಿದರೆ ಬಾಗೂರು ಹೋಬಳಿ	ಹಿಂ ವರ್ಗ
4	ಶ್ರೀಮತಿ ವಿಮಲ ಕೋಂ ಶಿವಣ್ಣ, ಕಾಂತರಾಜುಪುರ, ಶ್ರವಣಬೆಳಗೋಳ ಹೋಬಳಿ	ಮಹಿಳೆ
5	ಶ್ರೀ ಜಾನ್‌ರೋನಾಲ್ಡ್ ಬಿನ್ ಎಂ. ಮ್ಯರಿಯಪ್ಪ, ದಾಸಪುರ, ನುಗ್ಗೇಹಳ್ಳಿ ಹೋಬಳಿ	ಅ.ಸಂ.
6	ಶ್ರೀ ಎಂ.ಸಿ. ದೇವರಾಜು ಬಿನ್ ಚಿಕ್ಕಯ್ಯ ಮಸಕನಹಳ್ಳಿ ಹಿರಿಸಾವೆ ಹೋಬಳಿ	ಪ.ಜಾತಿ

ಹಾಸನ ಜಿಲ್ಲೆ:

ಹಾಸನ ಗ್ರಾಮಾಂತರ ಜಿಲ್ಲೆ, ಹಾಸನ ತಾಲ್ಲೂಕು ಕೆಡಿಪಿ ಸಮಿತಿ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀಮತಿ ಶಾಂತಮ್ಮ ಕೋ ಜನಾರ್ಧನ, ದೊಡ್ಡಬಸವನಹಳ್ಳಿ ಗ್ರಾಮ ಎಂ. ಹೊಸಕೊಪ್ಪಲು ಅಂಚೆ, ಕಸಬಾ ಹೋಬಳಿ	ಮಹಿಳೆ
2	ಶ್ರೀ ಗೋವಿಂದೇಗೌಡ ಬಿನ್ ದೊಡ್ಡೇಗೌಡ, ಮಾವಿನಹಳ್ಳಿ, ಗ್ರಾಮ, ತೇಜೂರು ಅಂಚೆ, ಕಸಬಾ ಹೋಬಳಿ	ಸಾಮಾನ್ಯ
3	ಶ್ರೀ ಬಿ.ಕೆ. ವಿಶ್ವನಾಥ ಗೌಡ ಬಿನ್ ಬಿ.ಆರ್. ಕೃಷ್ಣೇಗೌಡ, ಬಳ್ಳೀಕೆರೆ ಗ್ರಾಮ, ದುಂಡನಾಯಕನಹಳ್ಳಿ ಅಂಚೆ, ಕಟ್ಟಾಯ ಹೋಬಳಿ	ಸಾಮಾನ್ಯ
4	ಶ್ರೀ ಟಿ.ಟಿ. ರಂಗಸ್ವಾಮಿ ಬಿನ್ ತಿಮ್ಮಯ್ಯ, ತಟ್ಟೆಕೆರೆ ಗ್ರಾಮ ಮತ್ತು ಅಂಚೆ, ಕಸಬಾ ಹೋಬಳಿ	ಎಸ್.ಸಿ.
5	ಶ್ರೀ ನಯೀಮುಲ್ಲಾ ಷರೀಫ್ ಬಿನ್ ದಾವೂದ್ ಷರೀಪ್, ಶಂಖ ಗ್ರಾಮ ಮತ್ತು ಅಂಚೆ, ಸಾಲಗಾಮೆ ಹೋಬಳಿ	ಅ.ಸಂ.
6	ಶ್ರೀ ಪುಟ್ಟಸ್ವಾಮಿಗೌಡ ಬಿನ್ ಚಿಕ್ಕೇಗೌಡ, ದೊಡ್ಡಬಾಗನಹಳ್ಳಿ ಗ್ರಾಮ ಆಗಿಲೆ ಅಂಚೆ, ಕಸಬಾ ಹೋಬಳಿ	ಬಿ.ಸಿಎಂ.

ಹಾಸನ ಜಿಲ್ಲೆ:

ಅರಕಲಗೂಡು ತಾ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ಎಂ.ಎಂ. ಸುರೇಶ್ ಬಿನ್ ಲೇ: ಮಲ್ಲೇಶಪ್ಪ ಕೋಟೆ, ಅರಕಲಗೂಡು ಟೌನ್, ಹಾಸನ ಜಿಲ್ಲೆ	ಸಾಮಾನ್ಯ
2	ಶ್ರೀ ಮಹೇಶ್ ಬಿನ್ ದೊಡ್ಡಸ್ವಾಮಿಗೌಡ ಹಂಪಾಪುರ ಗ್ರಾಮ, ರಾಮನಾಥಪುರ ಹೋಬಳಿ	ಹಿಂ ವರ್ಗ
3	ಶ್ರೀಮತಿ ಗೀತಾ ಕೋಂ ಶೇಷಣ್ಣ, ದೇವರಹಳ್ಳಿ, ಹೊನ್ನವಳ್ಳಿ, ಅಂಚೆ,	ಮಹಿಳೆ
4	ಶ್ರೀ ಮೊಹಮ್ಮದ್ ರಫೀಕ್ ಬಿನ್ ಬಾಬು ಕೋಟೆ ಬೀದಿ, ಕೋಣನೂರು ಟೌನ್	ಅ.ಸಂ.
5	ಶ್ರೀ ಪ್ರದೇಪ್ ಬಿನ್ ನಿಂಗಪ್ಪ, ಕೆಸವತ್ತೂರು, ಹಂಡರಗಿ ಅಂಚೆ, ಕೊಣನೂರು ಹೋಬಳಿ	ಸಾಮಾನ್ಯ
6	ಶ್ರೀ ರತ್ನಕುಮಾರ್ ಬಿನ್ ಲೇ. ದೇವಯ್ಯ ಅಂಬೇಡ್ಕರ್ ನಗರ	ಎಸ್.ಸಿ.

ಹಾಸನ ಜಿಲ್ಲೆ:

ಅರಸೀಕೆರೆ ತಾ:

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1	ಶ್ರೀ ಪ್ರಭಾಕರ್ ಬಿನ್ ಕಲ್ಲುಮೇಳನೆಗೌಡ, ಜಾವಗಲ್	ಹಿಂ. ವರ್ಗ
2	ಶ್ರೀ. ಎನ್.ಎಂ. ರವೀದ್ರನಾಥ್ ಬಿನ್ ಲೇ: ನಂಜಪ್ಪ, ನರಸೀಪುರ, ಕಣಕಟ್ಟೆ ಹೋಬಳಿ ಕಲ್ಲುಸಾದರಹಳ್ಳಿ ಅಂಚೆ.	ಸಾಮಾನ್ಯ
3	ಶ್ರೀಮತಿ ಕಮಲಮ್ಮ ಕೋಂ ಕಂಬಯ್ಯ ಕೆ.ಪಾಳ್ಯ ಕಿತ್ತನಕೆರೆ ಕಣಕಟ್ಟೆ ಹೋಬಳಿ	ಮಹಿಳೆ
4	ಶ್ರೀ ರಾಜೇಶ್ ಬಿನ್ ಶಾಂತಪ್ಪ.] ಮೈಲನಹಳ್ಳಿ, ಬೋವಿ ಕಾಲೋನಿ, ಬೆಳಗುಂಬ ಅಂಚೆ	ಎಸ್.ಸಿ
5	ಶ್ರೀ ಬಿ.ಎಲ್. ರವಿಕುಮಾರ್ ಬಿನ್ ಲಕ್ಷ್ಮಯ್ಯ ಬೋರನಕೊಪ್ಪಲು, ಅಣ್ಣನಾಯ್ಕನಹಳ್ಳಿ	ಸಾಮಾನ್ಯ
6	ಶ್ರೀ. ಬಿ.ಹೆಚ್. ಸೋಹನ್‌ಲಾಲ್ ಬಿನ್ ಹೀರಾಚಂದ್, ಪಾಂಡುರಂಗ ದೇವಸ್ಥಾನ ರಸ್ತೆ, ಬಾಣಾವರ	ಅ.ಸಂ.

ಭೀಮಾಶಂಕರ ರಾಸೂರ್
ಸರ್ಕಾರದ ಅಧೀನ ಕಾರ್ಯದರ್ಶಿ 1& 2 (ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 368

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 2011-12ನೇ ಸಾಲಿನಲ್ಲಿ ಮೂರನೇ ಕಂತಾಗಿ ರೂ. 850.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.-

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಯೋಇ 15 ಮಪ್ರಮಂ 2011, ದಿನಾಂಕ 03-10-2011

2) ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಇವರ ಪತ್ರ ಸಂಖ್ಯೆ: ಮಪ್ರಮಂ/ನಗದು/ಅನುದಾನ 2011-12/183, ದಿನಾಂಕ 05-12-2011.

ಪ್ರಸ್ತಾವನೆ :

2011-12ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಲೆಕ್ಕಶೀರ್ಷಿಕೆ "2515-00-800-0-05-(ಯೋಜನೆ)" ಅಡಿಯಲ್ಲಿ ರೂ. [illegible]00 ಲಕ್ಷಗಳನ್ನು ಹಾಗೂ "4515-00-800-0-03" ಅಡಿಯಲ್ಲಿ ರೂ. 3300.00 ಲಕ್ಷಗಳನ್ನು ಒದಗಿಸಲಾಗಿದೆ. ಮಂಡಳಿಗೆ ಮೊದಲನೆಯ ಹಾಗೂ ಎರಡನೆಯ ಕಂತಾಗಿ ರೂ. 17.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (1)ರ ಆದೇಶದಲ್ಲಿ ಮಂಡಳಿಗೆ ಮೊದಲನೆಯ ಹಾಗೂ ಎರಡನೆಯ ಕಂತಾಗಿ ರೂ. 17.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಕಾರ್ಯದರ್ಶಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಕೋರಿರುವ ಹಿನ್ನೆಲೆಯಲ್ಲಿ ಮಂಡಳಿಗೆ ಮೂರನೆಯ ಕಂತಾಗಿ ರೂ. 850.00 ಲಕ್ಷಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಯೋಇ 15 ಮಪ್ರಮಂ 2011, ಬೆಂಗಳೂರು, ದಿನಾಂಕ 16–01–2012

2011–12ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಆಡಳಿತ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "2515–00–800–0–05–101 (ಸಹಾಯಾನುದಾನ)"ಅಡಿಯಲ್ಲಿ ರೂ. 35.00 ಲಕ್ಷಗಳನ್ನು (ಮುವತ್ತೈದು ಲಕ್ಷಗಳು ಮಾತ್ರ) ಬಂಡವಾಳ ವೆಚ್ಚಗಳಿಗಾಗಿ ಲೆಕ್ಕಶೀರ್ಷಿಕೆ "4515–00–800–0–03–132" ಅಡಿಯಲ್ಲಿ ರೂ. 640.00 ಲಕ್ಷಗಳನ್ನು (ಆರುನೂರಾ ನಲವತ್ತು ಲಕ್ಷ ರೂಪಾಯಿಗಳು ಮಾತ್ರ) ವಿಶೇಷ ಘಟಕ ಯೋಜನೆಯಡಿ ಲೆಕ್ಕಶೀರ್ಷಿಕೆ "4515–00–800–0–03–422" ಅಡಿಯಲ್ಲಿ ರೂ. 125.00 ಲಕ್ಷಗಳನ್ನು (ನೂರಾ ಇಪ್ಪತ್ತೈದು ಲಕ್ಷಗಳು ಮಾತ್ರ) ಹಾಗೂ ಗಿರಿಜನ ಉಪಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಲೆಕ್ಕಶೀರ್ಷಿಕೆ "4515–00–800–0–03–423" ಅಡಿಯಲ್ಲಿ ರೂ. 50.00 ಲಕ್ಷಗಳನ್ನು (ಐವತ್ತು ಲಕ್ಷಗಳು ಮಾತ್ರ) ಒಟ್ಟು ರೂ. 850.00 ಲಕ್ಷಗಳನ್ನು (ಎಂಟುನೂರ ಐವತ್ತು ಲಕ್ಷಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯಾದ ಮೊತ್ತವನ್ನು ಮಂಡಳಿಯ ವೈಯಕ್ತಿಕ ಖಾತೆಯಲ್ಲಿ ಮೊದಲು ಇಟ್ಟು ನಂತರ ಕಾರ್ಯಕ್ರಮದ ಅನುಗುಣವಾಗಿ ವೆಚ್ಚ ಮಾಡತಕ್ಕದ್ದು, ನಿಯಮಾನುಸಾರ ಹಣ ಬಳಕೆ ದೃಢೀಕರಣ ಪತ್ರವನ್ನು 2011–12ರ ಸಾಲಿನಲ್ಲಿ ಮಂಡಳಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಓಂಬರಪ ಸಂಖ್ಯೆ: ಆಇ 215 ವೆಚ್ಚ–6/2011 ದಿನಾಂಕ 07–01–2012ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಭೀಮಾಶಂಕರ ರಾಸೂರ್
ಸರ್ಕಾರದ ಅಧೀನ ಕಾರ್ಯದರ್ಶಿ– 1 ಮತ್ತು 2 (ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 369

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗುಲ್ಬರ್ಗಾ ಜಿಲ್ಲೆ ಜಿಲ್ಲಾಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಯೋಇ 309 ಪಿಟಿಪಿ 94, ದಿನಾಂಕ 07–08–1995

2) ಭಾರತೀಯ ಜನತಾ ಪಾರ್ಟಿಯ ರಾಜಾಧ್ಯಕ್ಷರ ಪತ್ರ ಸಂ. ರಾಕಾ/ನಾನಿ/448 2011, ದಿನಾಂಕ 22–09–2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ದಿನಾಂಕ 07–08–1995ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮಾನ್ಯ ಯೋಜನಾ ಸಚಿವರ ಶಿಫಾರಸ್ಸು ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಗುಲ್ಬರ್ಗಾ ಜಿಲ್ಲೆ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯೋಇ 70 ಯೋವಿವಿ 2009, ಬೆಂಗಳೂರು, ದಿನಾಂಕ 16–01–2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು–ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಐದು ಜನರನ್ನು ಗುಲ್ಬರ್ಗಾ ಜಿಲ್ಲೆ ಜಿಲ್ಲಾಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆ:

ಕ್ರ.ಸಂ.	ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ	ವರ್ಗ
1	ಶ್ರೀ ಸಿದ್ದರಾಮಪ್ಪ, ಮುಕ್ಕಾಂ ಪೋಸ್ಟ್, ಸಣ್ಣೂರು ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ	ಹಿಂ.ವ.
2	ಶ್ರೀ ಭೀಮರಾವ್, ಮುಕ್ಕಾಂ ಪೋಸ್ಟ್ ಯಾತನೂರ್, ತಾಲ್ಲೂಕು ಜೇವರ್ಗಿ, ಜಿಲ್ಲೆ ಗುಲ್ಬರ್ಗಾ	ಎಸ್.ಸಿ.
3	ಶ್ರೀ ನಾಗೇಂದ್ರಪ್ಪ ಸಾಹುಕಾರ್, ಮುಕ್ಕಾಂ ದುಗನೂರ್, ತಾಲ್ಲೂಕು ಸೇಡಂ, ಜಿಲ್ಲಾ ಗುಲ್ಬರ್ಗಾ	ಸಾಮಾನ್ಯ
4	ಶ್ರೀಮತಿ ಶಕುಂತಲ ಆಚಾರ್ಯ ಕೋಂ ಕೃಷ್ಣಮಚಾರ್ಯ, ಹೌ.ನಂ.–1–949/23/46/ಎ, ಗಾಬರೇ ಲೇಔಟ್, ಹಳೇ ಜೇವರ್ಗಿ ರೋಡ್, ಜಿಲ್ಲೆ ಗುಲ್ಬರ್ಗಾ	ಮಹಿಳೆ
5	ಖಾಜ ಹುಸೇನ್, ಮುಕ್ಕಾಂ ಅತನೂರ್, ತಾಲ್ಲೂಕು ಅಫಜಲ್‌ಪುರ, ಜಿಲ್ಲೆ ಗುಲ್ಬರ್ಗಾ	ಅ.ಸಂ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಭೀಮಾಶಂಕರ ರಾಸೂರ್
ಸರ್ಕಾರದ ಅಧೀನ ಕಾರ್ಯದರ್ಶಿ– 1 ಮತ್ತು 2 (ಪ್ರ)
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 370

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿಗಳು ಹಾಗೂ ಪ್ರಭಾರಿ ಆಯುಕ್ತರು, ನಗರಭಿವೃದ್ಧಿ ಪ್ರಾಧಿಕಾರ ರಾಯಚೂರು ಶ್ರೀ ಎಂ. ಮುನಿರುದ್ದೀನ್, ಡ್ರಾಫ್ಟ್ಸ್‌ಮನ್, ಶ್ರೀ ನರಸಿಂಹಲು, ದ್ವಿದ.ಸ. ಇವರುಗಳ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣದ ಇಲಾಖಾ ವಿಚಾರಣೆ ಮಂಜೂರಾತಿ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ನಅಇ 23, ಗುಅಪ್ರಾ 2010, ದಿನಾಂಕ 05-04-2010
2) ಸರ್ಕಾರದ ಆದೇಶ ಸಂಖ್ಯೆ: ನಅಇ 23, ಗುಅಪ್ರಾ 2010, ದಿನಾಂಕ 30-09-2010
3) ಸರ್ಕಾರದ ಆದೇಶ ಸಂಖ್ಯೆ: ನಅಇ 23, ಗುಅಪ್ರಾ 2010, ದಿನಾಂಕ 28-04-2011
4) ಸರ್ಕಾರದ ಆದೇಶ ಸಂಖ್ಯೆ: ನಅಇ 23, ಗುಅಪ್ರಾ 2010, ದಿನಾಂಕ 21-05-2011
5) ಸರ್ಕಾರದ ತಿದ್ದುಪಡಿ ಅದೇಶ ಸಂಖ್ಯೆ: ನಅಇ 23 ಗುಅಪ್ರಾ 2010, ದಿನಾಂಕ 20-09-2011.
6) ಉಪ ಪೊಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ-195/2011/ಎಆರ್‌ಇ-6, ದಿನಾಂಕ 04-11-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಬೆಂಗಳೂರುರವರು, ಶ್ರೀ ಮೊಹಮದ್ ನಯೀಮ್ ಅಶರಫ್ ಬಿನ್ ಅಬ್ದುಲ್ ಶುಕೂರ್‌ಸಾಬ್, ರಾಯಚೂರು ಇವರು ಯಕ್ಲಾಸ್ಪುರ ಗ್ರಾಮದಲ್ಲಿ ಖರೀದಿಸಿದ ಜಮೀನಿನಲ್ಲಿ ವಸತಿ ಉದ್ದೇಶಕ್ಕಾಗಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದವರಿಂದ ಶೇ. 40% ರಷ್ಟು ನಿವೇಶನಗಳ ಅಂತಿಮ ಅನುಮೋದನೆ ಆದೇಶ ಪಡೆಯಲು ಪ್ರಸ್ತಾಪಿತ ಪ್ರಾಧಿಕಾರದ ಆಯುಕ್ತರಾದ ಶ್ರೀ ಸುಂಕಪ್ಪ, ಶ್ರೀ ಎಂ. ಮುನೀರುದ್ದಿನ್, ಡ್ರಾಫ್ಟ್ಸ್‌ಮೆನ್ ಹಾಗೂ ಶ್ರೀ ನರಸಿಂಹಲು, ದ್ವಿದ.ಸ., ಇವರುಗಳು ಲಂಚಕ್ಕಾಗಿ ಒತ್ತಾಯಿಸಿರುವುದಾಗಿ ತಿಳಿಸಿ, ಲೋಕಾಯುಕ್ತ ಕಛೇರಿಗೆ ನೀಡಿದ ದೂರಿನ ಮೇರೆಗೆ, ಲೋಕಾಯುಕ್ತ, ಪೊಲೀಸರು ದಿನಾಂಕ 21-1-2010ರಂದು ಬೀಸಿದ ಬಲೆಗೆ ಸಿಕ್ಕಿಬಿದ್ದ ಪ್ರಯುಕ್ತ ಕರ್ನಾಟಕ ಸಿವಿಲ್ ಸೇವೆಗಳು (ಸಿ.ಸಿ.ಎ) ನಿಯಮಾವಳಿ 1957 ನಿಯಮ 10 (ಎ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಕ್ಷಣದಿಂದ ಜಾರಿ ಬರುವಂತೆ ಹಾಗೂ ಮುಂದಿನ ಆದೇಶದವರಿವಿಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿತ್ತು.

ಸದರಿ ನೌಕರರ ಪೈಕಿ ಶ್ರೀ ಬಿ. ಸುಂಕಪ್ಪ ಮತ್ತು ಶ್ರೀ ಮುನ್ನೀರುದ್ದೀನ್ ರವರುಗಳು ಕೆ.ಎ.ಟಿ. ಅರ್ಜಿ ಸಂಖ್ಯೆ: 2492 ಮತ್ತು 2493ರ ಆದೇಶದಲ್ಲಿ ದಿನಾಂಕ 5-4-2010ರ ಅಮಾನತ್ತು ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಿ.ಸಿ.ಎ) ನಿಯಮಾವಳಿ 1957 ನಿಯಮ 10(5)(ಸಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇವರನ್ನು ಸೇವೆಗೆ ಪುನಃ ಸ್ಥಾಪಿಸಿ ಕ್ರಮವಾಗಿ ಕೊಪ್ಪಳ ಮತ್ತು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಪುನಸ್ಥಿತಿಗೊಳಿಸಿ ಮೇಲೆ ಓದಲಾದ ಕ್ರಮಾಂಕ (2)ರ ಆದೇಶದಲ್ಲಿ ಆದೇಶಿಸಲಾಯಿತು. ನಂತರ ಮೇಲೆ ಓದಲಾದ ಕ್ರಮಾಂಕ(3)ರ ಆದೇಶದಲ್ಲಿ ಶ್ರೀ ನರಸಿಂಹಲು, ದ್ವಿದ.ಸ. ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ನಗರ ಯೋಜನಾ ಪ್ರಾಧಿಕಾರ ಮಾನ್ವಿ ಇಲ್ಲಿ ಖಾಲಿ ಇರುವ ಹುದ್ದೆಗೆ ಪುನಃಸ್ಥಿತಿಗೊಳಿಸಿ ಆದೇಶಿಸಲಾಯಿತು.

ಉಪ ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕೋರಿಕೆ ಮೇರೆಗೆ ಮೇಲೆ ಓದಲಾದ ಕ್ರಮಾಂಕ (4)ರ ಆದೇಶದಲ್ಲಿ ಶ್ರೀ ಬಿ. ಸುಂಕಪ್ಪ ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಸದರಿ ಕಾಯ್ದೆಯ ಕಲಂ 19(1)(ಬಿ) ರನ್ವಯ ಇವರನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಲಾಗಿದೆ (ಮೇಲೆ ಓದಲಾದ ಕ್ರಮಾಂಕ (5)ರಲ್ಲಿನ ತಿದ್ದುಪಡಿ ಆದೇಶದಲ್ಲಿ "ಹುದ್ದೆಯಿಂದ ತೆಗೆದುಹಾಕುವ (ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ" ಎಂದು ತಿದ್ದುಪಡಿ ಆದೇಶ ಹೊರಡಿಸಿದೆ)

ಪ್ರಸ್ತುತ ಮೇಲೆ ಓದಲಾದ ಕ್ರಮಾಂಕ (6)ರ ಪತ್ರದಲ್ಲಿ ಅಪರ ನಿಬಂಧಕರು ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3)ರಡಿಯಲಿ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ರವರು ಶ್ರೀ ಬಿ. ಸುಂಕಪ್ಪ, ಈ ಹಿಂದಿನ ಪ್ರಭಾರಿ ಆಯುಕ್ತರು, ಶ್ರೀ ಎಂ. ಮುನಿರುದ್ದೀನ್, ಡ್ರಾಫ್ಟ್ಸ್‌ಮನ್ ಮತ್ತು ಶ್ರೀ ನರಸಿಂಹಲು, ದ್ವಿದ.ಸ. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ಇವರುಗಳ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಕಾರಣ ಕೇಳಿ ನೋಟೀಸ್ ಜಾರಿಮಾಡಿದ್ದು, ಸದರಿ ನೋಟೀಸಿಗೆ ಪ್ರತಿವಾದಿಗಳು ಸಲ್ಲಿಸಿರುವ ಉತ್ತರಗಳು ಸಮಂಜಸವಾಗಿಲ್ಲವೆಂದು ಹಾಗೂ ಮೇಲಿನ 3 ಜನ ಅಪರಾಧಿಗಳು ಕೆ.ಸಿ.ಎಸ್. (ನಡತೆ) ನಿಯಮ 1966ರ ನಿಯಮ 3(1)ರಂತೆ ತಪ್ಪು ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆಂದು ದಾಖಲೆಗಳು ಮತ್ತು ಸಾಕ್ಷಿ ಪುರಾವೆಗಳು ರುಜುವಾತು ಪಡಿಸುತ್ತಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3)ರನ್ವಯ ಮೇಲೆ ತಿಳಿಸಿದ 3 ಜನ ಅಪರಾಧಿಗಳ ಮೇಲೆ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿ (ಸಿಸಿಎ) ನಿಯಮ 1957 ನಿಯಮ 14(ಎ)ರಂತೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಲೋಕಾಯುಕ್ತಕ್ಕೆ ವಹಿಸಬೇಕೆಂದು ಕೋರಿರುತ್ತಾರೆ.

ಅದರಂತೆ ಸರ್ಕಾರವು ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿ, ಈ ಹಿಂದಿನ ಪ್ರಭಾರ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ಪ್ರಸ್ತುತ ಆಯುಕ್ತರು. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಮುನಿರುದ್ದೀನ್, ಡ್ರಾಫ್ಟ್ಸ್‌ಮೆನ್, ಪ್ರಸ್ತುತ ಬೆಳಗಾಂ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಶ್ರೀ ನರಸಿಂಹಲು, ದ್ವಿದ.ಸ. ಪ್ರಸ್ತುತ ಮಾನ್ವಿ ನಗರ ಯೋಜನಾ ಪ್ರಾಧಿಕಾರ ಇವರುಗಳು ಮೇಲೆ ಇಲಾಖಾ ವಿಚಾರಣೆಯನ್ನು ಮಾನ್ಯ ಉಪ-ಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿ (ಸಿಸಿಎ) ನಿಯಮ 1957 ನಿಯಮ 14(ಎ)ರಂತೆ ವಹಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 23 ಗುಅಪ್ರಾ 2010, ಬೆಂಗಳೂರು, ದಿನಾಂಕ 12-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಕೆಳಕಂಡ ಅಧಿಕಾರಿಗಳು/ನೌಕರರಾದ:-

1) ಶ್ರೀ ಬಿ. ಸುಂಕಪ್ಪ, ಕಾರ್ಯದರ್ಶಿಗಳು ಹಾಗೂ ಈ ಹಿಂದಿನ ಪ್ರಭಾರಿ ಆಯುಕ್ತರು, ಪ್ರಸ್ತುತ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ.

2) ಶ್ರೀ ಮುನಿರುದ್ದೀನ್, ಡ್ರಾಫ್ಟ್ಸ್‌ಮೆನ್, ಪ್ರಸ್ತುತ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

3) ಶ್ರೀ ನರಸಿಂಹಲು, ದ್ವಿ.ದ.ಸ. ಪ್ರಸ್ತುತ ಮಾನ್ವಿ ನಗರ ಯೋಜನಾ ಪ್ರಾಧಿಕಾರ, ಮಾನ್ವಿ

ಇವರುಗಳ ವಿರುದ್ಧದ ಆರೋಪಗಳ ಬಗ್ಗೆ ಗುರುತರ ದಂಡನೆ (Major Penalty) ವಿಧಿಸುವ ಕ್ರಮವನ್ನು ಅನುಸರಿಸಿ ಇಲಾಖಾ ವಿಚಾರಣೆ ನಡೆಸಲು 1957ರ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 372

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಅರಸೀಕೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ. 8000.00 ಲಕ್ಷಗಳಿಗೆ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.-

ಓದಲಾಗಿದೆ : ವ್ಯ.ನಿ., ಕನನೀಸಒಚಮಂಡಳಿರವರ ಪತ್ರ ಸಂಖ್ಯೆ: ಕಜಮಂ/ತಾಂತ್ರಿಕ/ಅರಸೀಕೆರೆ-ಒ.ಚ.ಯೋ/1894/2011-12, ದಿನಾಂಕ 17-09-2011.

ಪ್ರಸ್ತಾವನೆ :

ಅರಸೀಕೆರೆ ಪಟ್ಟಣವು ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿಯಂತೆ ಪಟ್ಟಣದ ಜನಸಂಖ್ಯೆಯು 45,166 ಇದ್ದು ಪ್ರಸ್ತುತ ಜನಸಂಖ್ಯೆ 50,000 ಇರುತ್ತದೆ. ಈ ಪಟ್ಟಣಕ್ಕೆ 1998ರಲ್ಲಿ ಚಾಲನೆಗೊಂಡ ತಿಪಟೂರು ಮತ್ತು ಅರಿಸೀಕೆರೆ ಸಂಯೋಜಿತ ನೀರು ಸರಬರಾಜು ಯೋಜನೆ ಮಾಡಲಾಗುತ್ತಿದ್ದು 2021ನೇ ಸಾಲಿನಲ್ಲಿ ಅಂದಾಜಿಸಲಾದ 55,000 ಜನಸಂಖ್ಯೆಗೆ ತಲಾ ದಿನಂಪ್ರತಿ 135 ಲೀಟರ್ ನಂತೆ ನೀರು ಸರಬರಾಜುಮಾಡಲು ವಿನ್ಯಾಸಿಸಿ, ಚಾಲ್ತಿಗೊಳಿಸಲಾಗಿತ್ತು. ಹಾಲಿ ಇಚನೂರು ಕೆರೆ ಸಾಮರ್ಥ್ಯವು 2 ಪಟ್ಟಣಗಳಿಗೆ ಬೇಕಾಗುವ ನೀರು ಪೂರೈಸಲು ಸಾಧ್ಯವಾಗುತ್ತಿಲ್ಲದ ಕಾರಣ ಶೇ. 40 ರಷ್ಟು ಜನಸಂಖ್ಯೆಯು ಕೊಳವೆ ಬಾವಿಗಳನ್ನು ಅವಲಂಬಿಸಿರುತ್ತಾರೆ. ಕೊಳವೆ ಬಾವಿಗಳಲ್ಲಿ ಪ್ಲೋರೈಡ್ ಅಂಶ ಹೆಚ್ಚಿದ್ದು, ಈ ಕೊರತೆಯನ್ನು ನೀಗಿಸಲು ಹೇಮಾವತಿ ನದಿಯಿಂದ ಶಾಶ್ವತ ನೀರು ಸರಬರಾಜು ಮಾಡಲು ರೂ. 12,185.00 ಲಕ್ಷಗಳ ವೆಚ್ಚದಲ್ಲಿ ಯೋಜನೆಯನ್ನು ರೂಪಿಸಿ ಸದರಿ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಪಟ್ಟಣಕ್ಕೆ 1980ನೇ ಸಾಲಿನಲ್ಲಿ ಒಳಚರಂಡಿ ವ್ಯವಸ್ಥೆ ಒದಗಿಸಿದ್ದು, ಈ ಯೋಜನೆಯಲ್ಲಿನ ಗ್ರಾಮಸಾರ ಕೊಳವೆ ಮಾರ್ಗ ಜಾಲವು ಬಹಳ ಹಳೆಯದಾಗಿದ್ದು, ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಆದ್ದರಿಂದ, ಹೊಸ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು ಅವಶ್ಯವಾಗಿರುತ್ತದೆ. ಅದರಂತೆ, ಯೋಜನೆಯನ್ನು 2012ನೇ ಸಾಲಿನಲ್ಲಿ ಅಂದಾಜಿಸಲಾದ 50,000 ಜನಸಂಖ್ಯೆಗೆ ಪರಿಗಣಿಸಿ, 2027ರ ಮಧ್ಯಂತರ ಅವಧಿಗೆ 80,000 ಹಾಗೂ ಅಂತಿಮ ಅವಧಿಯಾದ 2042ರಲ್ಲಿ ಅಂದಾಜಿಸಲಾದ 1,06,050 ಜನಸಂಖ್ಯೆಯನ್ನು ಪರಿಗಣಿಸಿ ವಿನ್ಯಾಸಿಸಲಾಗಿದೆ.

ಪ್ರಸ್ತುತ ಸರ್ಕಾರವು ಹಾಲಿ ಜಾರಿಯಲ್ಲಿರುವ ಒಳಚರಂಡಿ ಯೋಜನೆಗಳ ಆರ್ಥಿಕ ಮಾದರಿಯು ಸರ್ಕಾರದ ಸಾಲದಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಹಾಗೂ ಸ್ಥಳೀಯ ಸಂಸ್ಥೆಗಳ ವಂತಿಕೆಯಿಂದ ಯೋಜನೆಯ ಅಂದಾಜನ್ನು ಭರಿಸಲಾಗುತ್ತಿದ್ದು ಸದರಿ ಸ್ಥಳೀಯ ಸಂಸ್ಥೆಗಳಲ್ಲಿ ವಾಸಿಸುತ್ತಿರುವ ನಾಗರೀಕರ ಹಿತದೃಷ್ಟಿಯಿಂದ, ಪರಿಸರ ಸಂರಕ್ಷಣೆ ಹಿತದಲ್ಲಿ ಮತ್ತು ಮಲೀನ ನೀರು ನದಿಗಳನ್ನು/ಅಂತರ್ಜಲ ನೀರನ್ನು ಕುಲಷಿತಗೊಳಿಸದಿರುವ ದೃಷ್ಟಿಯಿಂದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ಯೋಜನೆಗಳನ್ನು ಕಲ್ಪಿಸುವ ದೃಷ್ಟಿಯಿಂದ ಮತ್ತು ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸಬಲವಲ್ಲದ ಕಾರಣ ಈ ಯೋಜನೆಗಳ ಪ್ರಯೋಜನವನ್ನು ಪಡೆಯುವುದರಿಂದ ವಂಚಿತರಾಗುವುದನ್ನು ತಡೆಯಲು ಸರ್ಕಾರವು, ಒಳಚರಂಡಿ ಯೋಜನೆಯ ಆರ್ಥಿಕ ಮಾದರಿಯನ್ನು ಸರ್ಕಾರದ ಅನುದಾನದಿಂದ ಭರಿಸುವ ಉದ್ದೇಶ ಹೊಂದಿ ಸದರಿ ಯೋಜನೆಗಳ ಆರ್ಥಿಕ ಮಾದರಿಯನ್ನು ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 2011, ದಿನಾಂಕ 20-07-2011 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿರುತ್ತದೆ. ಅದರಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಈ ಯೋಜನೆಯ ಆರ್ಥಿಕ ಮಾದರಿಯನ್ನು ಈ ಕೆಳಕಂಡಂತೆ ನಿಗದಿಗೊಳಿಸಿ ಪ್ರಸ್ತಾವನೆಯನ್ನು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ಸಲ್ಲಿಸಿರುತ್ತಾರೆ.

ಕರ್ನಾಟಕ ಸರ್ಕಾರದ ಅನುದಾನ (75%)	ರೂ. 6000.00 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (20%)	ರೂ. 1600.00 ಲಕ್ಷಗಳು
ಅರಸೀಕೆರೆ ಪುರಸಭೆ ವಂತಿಕೆ (05%)	ರೂ. 400.00 ಲಕ್ಷಗಳು
ಒಟ್ಟು	ರೂ. 8000.00 ಲಕ್ಷಗಳು

ಈ ಯೋಜನೆಯನ್ನು ಮಂಡಳಿಯ 2011-12ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ. 2667.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಸರ್ಕಾರವು ಯೋಜನೆಯ ಅಂದಾಜಿನಲ್ಲಿ ವಿಧಿಸಲಾಗುತ್ತಿರುವ ಇಟಿಪಿ, ದರಗಳನ್ನು ಶೇಕಡ 5ಕ್ಕೆ ಮಿತಿಗೊಳಿಸಲು ನಿರ್ಧರಿಸುವ ಹಿನ್ನೆಲೆಯಲ್ಲಿ ಹಾಗೂ ಯೋಜನೆಯಡಿ ಉದ್ಭವಿಸಬಹುದಾದ ಟೆಂಡರ್ ಪ್ರೀಮಿಯಮ್ ಮತ್ತು ಎಸ್ಕಲೇಶನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಬರಿಸಬೇಕಾಗಿರುವುದರಿಂದ ಸದರಿ ಮೊತ್ತಗಳನ್ನು ಅಂದಾಜು ಪಟ್ಟಿಯಿಂದ ಹೊರತು ಪಡಿಸಲು ತೀರ್ಮಾನಿಸಿದೆ. ಅದರಂತೆ ಯೋಜನೆಯ ಅಂದಾಜು ವೆಚ್ಚದಲ್ಲಿ ಮೂಲ ಅಂದಾಜು ಮೊತ್ತವಾದ ರೂ. 5999.65 ಲಕ್ಷಗಳಿಗೆ ಶೇಕಡ 5 ರಷ್ಟು ಇಟಿಪಿ ದರಗಳನ್ನು ಅಂದರೆ ರೂ. 299.98 ಲಕ್ಷಗಳು ಮತ್ತು ಇತರೆ ಠೇವಣಿ ರೂ. 115.00 ಲಕ್ಷಗಳನ್ನು ಹಾಗೂ ಇತರೆ ವೆಚ್ಚಗಳಾದ ರೂ. 0.37 ಲಕ್ಷಗಳನ್ನು ಸೇರಿಸಿ ಯೋಜನೆಯ ಅಂದಾಜು ಮೊತ್ತವನ್ನು ರೂ. 6415.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿದೆ.

ಸರ್ಕಾರವು ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 17 ಯುಡಿಎಸ್ 2011, ಬೆಂಗಳೂರು, ದಿನಾಂಕ 17-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅರಸೀಕೆರೆ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 6415.00 ಲಕ್ಷಗಳಲ್ಲಿ (ರೂ. ಆರು ಸಾವಿರದ ನಾಲ್ಕುನೂರ ಹದಿನೈದು ಲಕ್ಷಗಳು ಮಾತ್ರ) ಕಲ್ಪಿಸುವ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) ETP/Contingencies are limited to 5 % of the project cost
3) The board shall invite the tender immediately after the handing over of the land required under the scheme in order to avoid time and cost run over.
4) The consent of the ULB shall be obtained to meet the extra cost that might occur due to deviations, extra item works or variations in the scheme.
5) Adequate provision to be made by the Board in the following years for timely completion of the Project.
6) Water rates as proposed by KUWS & DB have to be implemented to meet O & M cost of UGD.
7) KTPP provisions, quality control and timely completion should be ensured
8) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ

ಈ ಅದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 555 Exp-9/2011, ದಿನಾಂಕ 02-11-2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ. ಎಂ. ವಾಸುದೇವರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 373

ನಗರಾಭಿವೃದ್ಧಿ ಸಚಿವಾಲಯ

ವಿಷಯ : ದೇವದುರ್ಗ ಪಟ್ಟಣಕ್ಕೆ ಕೃಷ್ಣಾ ನದಿ ಮೂಲದಿಂದ ಹೆಚ್ಚುವರಿ ನೀರು ಸರಬರಾಜು ಯೋಜನೆಯನ್ನು ಅಂದಾಜು ರೂ. 4650-00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.-

ಓದಲಾಗಿದೆ : ವ್ಯನಿ., ಕನನೀಸಒಚಮಂಡಳಿರವರ ಪತ್ರ ಸಂಖ್ಯೆ: ವ್ಯನಿ/ಉಮುಅ(ಎಂ)/ದೇವದುರ್ಗ/ 3619/2009-10, ದಿನಾಂಕ 18-03-2010.

ಪ್ರಸ್ತಾವನೆ :

ದೇವದುರ್ಗ ಪಟ್ಟಣವು ರಾಯಚೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾಗಿದ್ದು ಈ ಪಟ್ಟಣದ ಜನಸಂಖ್ಯೆಯು 2001ರ ಜನಗಣತಿಯ ಪ್ರಕಾರ 21994, ಇದ್ದು ಹಾಲಿ 40,000/- ಇರುತ್ತದೆ. ಈ ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯ್ನು 2003ರಲ್ಲಿ ರೂ. 289.50 ಲಕ್ಷಗಳ ಅಂದಾಜಿನಲ್ಲಿ 2030ರಲ್ಲಿ ನಿರೀಕ್ಷಿಸಿದ 30,000 ಜನಸಂಖ್ಯೆಗೆ ಸುಮಾರು 70 ಎಲ್‌ಪಿಸಿಡಿ ನೀರನ್ನು ಸರಬರಾಜು ಮಾಡಲು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸಲಾಯಿತು ದೇವದುರ್ಗ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ರೂ. 720.00 ಲಕ್ಷಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಪಟ್ಟಣದ ಒಳಚರಂಡಿ ಯೋಜನೆಯನ್ನು ತಲಾ ದಿನಂಪ್ರತಿ 135 ಎಲ್‌ಪಿಸಿಡಿ ನೀರು ಸರಬರಾಜು ಪರಿಗಣಿಸಿ, ವಿನ್ಯಾಸಗೊಳಿಸಲಾಗಿರುತ್ತದೆ.

ಇತ್ತೀಚಿನ ವರ್ಷಗಳಲ್ಲಿ ದೇವದುರ್ಗ ಪಟ್ಟಣವು ತೀವ್ರ ಬೆಳವಣಿಗೆ ಹೊಂದುತ್ತಿದ್ದು, ಹಾಲಿ ಜನಸಂಖ್ಯೆಗೆ ಬೇಸಿಗೆ ತಿಂಗಳಲ್ಲಿ ನೀರು ಸರಬರಾಜು ಮಾಡಲು ವ್ಯತ್ಯಯ ಉಂಟಾಗುತ್ತಿದೆ. ಸದರಿ ಪಟ್ಟಣದ ವ್ಯಾಪ್ತಿಗೆ ಬರುವ ಸುತ್ತಮುತ್ತಲಿನ ಹಳ್ಳಿಗಳಿಗೆ ಮತ್ತು ತಾಂಡಗಳಿಗೆ ನೀರು ಸರಬರಾಜು ಒದಗಿಸಲು ಹಾಲಿ ಯೋಜನೆಯಿಂದ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಪಟ್ಟಣಕ್ಕೆ ಹೆಚ್ಚುವರಿ ನೀರು ಸರಬರಾಜು ಯೋಜನೆಯನ್ನು ರೂಪಿಸುವ ಅವಶ್ಯಕತೆ ಇರುತ್ತದೆ.

ಈ ಸಮಸ್ಯೆಯನ್ನು ಪರಿಹರಿಸಲು ಕೃಷ್ಣಾನದಿ ಮೂಲದಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ಕೃಷ್ಣಾನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಗೂಗಲ್ ಬ್ಯಾರೇಜ್ ಹಿನ್ನೀರನ್ನು ಮೂಲವಾಗಿಟ್ಟುಕೊಂಡು ನೀರು ಸರಬರಾಜು ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಡಿ 2027ಕ್ಕೆ ಅಂದಾಜಿಸಲಾದ 61,985 ಹಾಗೂ 2042ರಲ್ಲಿ ಅಂದಾಜಿಸಲಾದ 91,370 ಜನಸಂಖ್ಯೆಗೆ ತಲಾ ದಿನಂಪ್ರತಿ 135 ಲೀಟರ್‌ನಂತೆ ನೀರು ಸರಬರಾಜು ಮಾಡಲು ವಿನ್ಯಾಸಗೊಳಿಸಲಾಗಿದೆ.

ಈ ಯೋಜನೆಯನ್ನು ಮಂಡಳಿಯ 2009-10ನೇ ಸಾಲಿನ ಮಂಡಳಿಯ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಗಳನ್ವಯ ಮತ್ತು ಮಂಡಳಿಯ ಆರ್.ಸಿ./ಮಾರುಕಟ್ಟೆ ದರಗಳನ್ನು ಆಧರಿಸಿ ತಯಾರಿಸಲಾಗಿದ್ದು. ಈ ಯೋಜನೆಯನ್ನು 2011-12ನೇ ಸಾಲಿನ ಕ್ರಿಯಾಯೋಜನೆಯಲ್ಲಿ ಪ್ರವರ್ಗ-ಡಿ ಅಡಿಯಲ್ಲಿ ಸೇರಿಸಿ ಕೊಳವೆ ನೀರು ಸರಬರಾಜು ಯೋಜನೆಯಡಿ ಪ್ರಸ್ತುತ ಸಾಲಿನಲ್ಲಿ ರೂ. 1550.00 ಲಕ್ಷಗಳ ಮೊತ್ತವನ್ನು ಅನುವು ಮಾಡಲಾಗಿದೆ.

ಮಂಡಳಿಯು ಈ ಯೋಜನೆಯನ್ನು ಕೊಳವೆ ನೀರು ಸರಬರಾಜು ಯೋಜನೆಯಡಿ ಕೈಗೆತ್ತಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದ್ದು, ಅದರಂತೆ ಸದರಿ ಯೋಜನೆಯ ಅಂದಾಜನ್ನು ಸಂಪೂರ್ಣವಾಗಿ ಸರ್ಕಾರದ ಅನುದಾನದಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ, ಪ್ರಸ್ತುತ ಸರ್ಕಾರವು ಹಾಲಿ

ಜಾರಿಯಲ್ಲಿರುವ ನೀರು ಸರಬರಾಜು ಯೋಜನೆಗಳ ಆರ್ಥಿಕ ಮಾದರಿಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 07 ಯುಡಬ್ಲ್ಯೂಎಸ್ 2011, ದಿನಾಂಕ 20-7-2011 ಪರಿಷ್ಕರಿಸಿದ್ದು, ಅದರಂತೆ ಈ ಯೋಜನೆಯ ಅಂದಾಜನ್ನು ಸರ್ಕಾರದ ಅನುದಾನದಿಂದ ಹಣಕಾಸು ಸಂಸ್ಥೆಗಳಿಂದ ಸಾಲ ಹಾಗೂ ಸ್ಥಳೀಯ ಸಂಸ್ಥೆಗಳ ವಂತಿಕೆಯಿಂದ ಯೋಜನೆಯ ಅಂದಾಜನ್ನು ಭರಿಸಬೇಕಾಗಿರುತ್ತದೆ. ಸದರಿ ಆದೇಶದನ್ವಯ ಈ ಯೋಜನೆಯ ಆರ್ಥಿಕ ಮಾದರಿಯನ್ನು ಈ ಕೆಳಕಂಡಂತೆ ನಿಗದಿಗೊಳಿಸಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಅನುದಾನ (75%)	ರೂ. 3487.50 ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (20%)	ರೂ. 930.00 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಕೆ (05%)	ರೂ. 232.50 ಲಕ್ಷಗಳು
ಒಟ್ಟು	**ರೂ. 4650.00 ಲಕ್ಷಗಳು**

ಸರ್ಕಾರವು ಯೋಜನೆಯ ಅಂದಾಜಿನಲ್ಲಿ ವಿಧಿಸಲಾಗುತ್ತಿರುವ ಇಟಿಪಿ, ದರಗಳನ್ನು ಶೇಕಡ 5ಕ್ಕೆ ಮಿತಿಗೊಳಿಸಲು ನಿರ್ಧರಿಸುವ ಹಿನ್ನೆಲೆಯಲ್ಲಿ ಹಾಗೂ ಯೋಜನೆಯಡಿ ಉದ್ಭವಿಸಬಹುದಾದ ಟೆಂಡರ್ ಪ್ರೀಮಿಯಮ್ ಮತ್ತು ಎಸ್ಕಲೇಶನ್ ದರಗಳನ್ನು ಸ್ಥಳೀಯ ಸಂಸ್ಥೆಯೇ ಬರಿಸಬೇಕಾಗಿರುವುದರಿಂದ ಸದರಿ ಮೊತ್ತಗಳನ್ನು ಅಂದಾಜು ಪಟ್ಟಿಯಿಂದ ಹೊರತು ಪಡಿಸಲು ತೀರ್ಮಾನಿಸಿದೆ. ಅದರಂತೆ ಯೋಜನೆಯ ಅಂದಾಜು ವೆಚ್ಚದಲ್ಲಿ ಮೂಲ ಅಂದಾಜು ಮೊತ್ತವಾದ ರೂ. 3646.98 ಲಕ್ಷಗಳಿಗೆ ಶೇಕಡ 5 ರಷ್ಟು ಇಟಿಪಿ ದರಗಳನ್ನು ಮತ್ತು ಇತರೆ ಠೇವಣಿ ರೂ. 4.50 ಲಕ್ಷಗಳನ್ನು ಹಾಗೂ ಇತರೆ ವೆಚ್ಚಗಳಾದ ರೂ. 0.17 ಲಕ್ಷಗಳನ್ನು ಸೇರಿಸಿ ಯೋಜನೆಯ ಅಂದಾಜು ಮೊತ್ತವನ್ನು ರೂ. 3834.00 ಲಕ್ಷಗಳಿಗೆ ಮಿತಿಗೊಳಿಸಬೇಕಾಗಿದೆ.

ಸರ್ಕಾರವು ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 13 ಯುಡಬ್ಲ್ಯೂಎಸ್ 2010, ಬೆಂಗಳೂರು, ದಿನಾಂಕ 17-01-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದೇವದುರ್ಗ ಪಟ್ಟಣಕ್ಕೆ ಕೃಷ್ಣಾ ನದಿ ಮೂಲದಿಂದ ಹೆಚ್ಚುವರಿ ನೀರು ಸರಬರಾಜು ಯೋಜನೆಯನ್ನು ಅಂದಾಜು ರೂ. 3834.00 ಲಕ್ಷಗಳಲ್ಲಿ (ರೂ. ಮೂರು ಸಾವಿರದ ಎಂಟುನೂರ ಮೂವತ್ತನಾಲ್ಕು ಲಕ್ಷಗಳು ಮಾತ್ರ) ನೀರು ಸರಬರಾಜು ಕಲ್ಪಿಸುವ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) The Escalation charges should not form part of the estimate. It should be borne by the concerned ULB. The estimate is reduced to such extent.
2) The board shall invite the tender immediately after the handing over of the land required under the scheme in order to avoid time and cost run over.
3) The consent of the ULB shall be obtained for the extra cost that might occur due to deviations, extra item works or variations in the scheme.
4) Adequate provision to be made by the Board in the following years for timely completion of the Project.
5) Water rates as proposed by KUWS & DB have to be implemented to meet O & M cost of WS.
6) KTPP provisions, quality control and timely completion should be ensured
7) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.
8) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ನ್ನು ಪಾಲಿಸುವುದು.
9) ಇದಲ್ಲದೆ ಮಂಡಳಿಯು ಹೊಸ ಆರ್ಥಿಕ ಮಾದರಿಯಂತೆ ಸ್ಥಳೀಯ ಸಂಸ್ಥೆಯ ವಂತಿಯನ್ನು ಪಡೆಯಲು ಸೂಕ್ತ ಠರಾವನ್ನು ಪಡೆದು ನಂತರ ಯೋಜನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.
10) ಗೂಗಲ್ ಬ್ಯಾರೇಜಿನ ಸಮೀಪ ಸದರಿ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದ ಕಟ್ಟಡಗಳ ವಿನ್ಯಾಸ ನಕ್ಷೆಗಳನ್ನು ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತಗೆ ಸಲ್ಲಿಸಿ ಅನುಮೋದನೆ ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
11) ಗೂಗಲ್ ಬ್ಯಾರೇಜಿನಲ್ಲಿ ಏಪ್ರಿಲ್‌ನಿಂದ ಜೂನ್/ಜುಲೈ ಕೊನೆಯವರೆಗೆ ನೀರಿನ ಸಂಗ್ರಹಣೆ ಕಡಿಮೆ ಇದ್ದು, ನೀರಾವರಿ ಹಾಗೂ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಬೇಕಾಗಿರುತ್ತದೆ. ಈ ಅವಧಿಯಲ್ಲಿ ಬ್ಯಾರೇಜಿನಲ್ಲೂ ನೀರಿನ ಸಂಗ್ರಹಣೆ ಕಡಿಮೆ ಇರುವ ಸಾಧ್ಯತೆ ಇರುವುದರಿಂದ, ಸದರಿ ಅವಧಿಯಲ್ಲಿನ ಬೇಡಿಕೆಯನ್ನು ಬ್ಯಾರೇಜಿನ ಡೆಡ್ ಸ್ಟೋರೇಜ್‌ನಿಂದ ಒದಗಿಸಬೇಕಾಗಿರುವುದರಿಂದ ಈ ಬೇಡಿಕೆಯನ್ನು ಮುಂಚಿತವಾಗಿಯೇ ಅಂದರೆ ಜನವರಿ ತಿಂಗಳಲ್ಲೇ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದು.
12) ಕಾಮಗಾರಿಯನ್ನು ಪೂರ್ಣಗೊಳಿಸಿ ನೀರನ್ನು ಬಳಸುವ ಮುನ್ನ ನಿಗಮದ ಒಪ್ಪಿಗೆಯನ್ನು ಪಡೆದು ನೀರನ್ನು ಬಳಸಬಹುದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 561 Exp-9/2010, ದಿನಾಂಕ 27-08-2010 ಮತ್ತು ಟಿಪ್ಪಣಿ ಸಂಖ್ಯೆ: FD 554 Exp-9/2011, ದಿನಾಂಕ 31-10-2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ. ಎಂ. ವಾಸುದೇವರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಪಿ.ಆರ್. 374

ಶಿಕ್ಷಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಇಡಿ 90 ಎಂಸಿಡಿ 2010 (ಭಾಗ) ಬೆಂಗಳೂರು, ದಿನಾಂಕ 06-01-2012

ವಿಷಯ : ರಾಜ್ಯದಲ್ಲಿ ಪ್ರಾರಂಭಿಸಿರುವ 74 ಆದರ್ಶ ವಿದ್ಯಾಲಯಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡುವ ಕುರಿತು.-

ಉಲ್ಲೇಖ : 1)ಸರ್ಕಾರದ ಆದೇಶ ಸಂಖ್ಯೆ: ಇಡಿ 90 ಎಂಸಿಡಿ 2010 (ಭಾಗ), ದಿನಾಂಕ 30-11-2011

2) ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರವರ ಪತ್ರ ಸಂಖ್ಯೆ: ಆರ್.ಎಂ.ಎಸ್.ಎ./ಅವಿ/ಶಿನೇ/ಸಿ&ಆರ್) 47/2011-12, ದಿನಾಂಕ 26-12-2011.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಆದೇಶದ ಭಾಗದಲ್ಲಿ 148 ಗ್ರೂಪ್ "ಡಿ" ಸಿಬ್ಬಂದಿ ಸೇರಿದಂತೆ ಒಟ್ಟು 962 ಮಂದಿಯನ್ನು ನೇರ ನೇಮಕಾತಿ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಆದೇಶ ನೀಡಲಾಗಿತ್ತು. ಉಲ್ಲೇಖ (2)ರಲ್ಲಿ ನಿರ್ದೇಶಕರು, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರವರು 148 ಗ್ರೂಪ್ "ಡಿ" ನೌಕರರ ಹುದ್ದೆಗಳಿಗೆ 74 ಕಛೇರಿ ಸಹಾಯಕರು (ಪ್ರಥಮ ದರ್ಜೆ ಸಹಾಯಕರು) ಮತ್ತು 74 ಗ್ರೂಪ್ "ಡಿ" ಎಂದು ತಿದ್ದುಪಡಿ ಆದೇಶ ಕೋರಿದ್ದು.

ಅದರಂತೆ ಉಲ್ಲೇಖ (1)ರ ಸರ್ಕಾರದ ಆದೇಶದ ಭಾಗದ ಒಟ್ಟು 222 ಶಿಕ್ಷಕರು ಹಾಗೂ ನಂತರದ 148 ಗ್ರೂಪ್ "ಡಿ" ಪದಗಳ ಬದಲಾಗಿ 74 ಕಛೇರಿ ಸಹಾಯಕರು (ಪ್ರಥಮ ದರ್ಜೆ ಸಹಾಯಕರು) ಮತ್ತು 74 ಗ್ರೂಪ್ "ಡಿ" ಪದಗಳನ್ನು ಸೇರಿಸಿ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಉಳಿದ ಅಂಶಗಳು ಯಥಾವತ್ತಾಗಿ ಮುಂದುವರಿಯುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಐ. ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 375 ಶಿಕ್ಷಣ ಇಲಾಖೆ (ಯೋಜನೆ)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಹೆಚ್. ರಾಮಕೃಷ್ಣೇಗೌಡ, ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ನಿಯೋಜನೆಯ ಮೇರೆಗೆ ವಿಶೇಷಾಧಿಕಾರಿ ಎಂ.ಎಸ್.ಐ.ಎಲ್.ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.-

ಓದಲಾಗಿದೆ :

1) ಎಂ.ಡಿ., ಎಂ.ಎಸ್.ಐ.ಎಲ್. ಬೆಂಗಳೂರು ರವರ ಪತ್ರ ಸಂಖ್ಯೆ: ಎಂ.ಡಿ. 004/2011-12, ದಿನಾಂಕ 03-05-2011.
2) ಕಾರಣ ಕೇಳುವ ನೋಟೀಸ್ ಪತ್ರದ ಸಂಖ್ಯೆ: 61 ಕೈಸೇವಿ 2011, ದಿನಾಂಕ 25-07-2011
3) ಶ್ರೀ ಹೆಚ್. ರಾಮಕೃಷ್ಣೇಗೌಡ, ಜಂಟಿ ನಿರ್ದೇಶಕರು, ಇವರ ರಕ್ಷಣಾ ಹೇಳಿಕೆ ದಿನಾಂಕ 02-09-2011.
4) ಸರ್ಕಾರದ ಪತ್ರದ ಸಂಖ್ಯೆ: ವಾಕೈ 61 ಕೈಸೇವಿ 2011, ದಿನಾಂಕ 18-10-2011
5) ವ್ಯವಸ್ಥಾಪಕ ನಿರ್ದೇಶಕರು, ಎಂ.ಎಸ್.ಐ.ಎಲ್. ಬೆಂಗಳೂರು ರವರ ಪತ್ರ ಸಂಖ್ಯೆ: ಎಂ.ಡಿ. 161/2011-12, ದಿನಾಂಕ 18-11-2011.
6) ಕಾರಣ ಕೇಳುವ ನೋಟೀಸ್ ಪತ್ರದ ಸಂಖ್ಯೆ: 61 ಕೈಸೇವಿ 2011, ದಿನಾಂಕ 21-11-2011.
7) ಅಧಿಕಾರಿಯ ರಕ್ಷಣಾ ಹೇಳಿಕೆ ದಿನಾಂಕ 07-12-2011

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ರವರು ಕಬ್ಬಿಣ ಅದಿರಿನ ರಫ್ತು ಹಗರಣಕ್ಕೆ ಸಂಬಂಧಿಸಿದಂತೆ ಶ್ರೀ ಕುಕ್ಕಜೆ ರಾಮಕೃಷ್ಣ ಭಟ್ ನಿವೃತ್ತ ಜಿಲ್ಲಾ ನ್ಯಾಯಾಧೀಶ ರವರು ಸಲ್ಲಿಸಿದ ಪೂರ್ಣ ಪ್ರಮಾಣದ ಪ್ರಾಥಮಿಕ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಕಾರಣ ಕೇಳುವ ನೋಟೀಸಿನಲ್ಲಿ ಪ್ರಾಥಮಿಕ ತನಿಖಾ ವರದಿಯ ಆಧಾರದ ಮೇಲೆ ಮೇಲ್ನೋಟಕ್ಕೆ ಆರೋಪಗಳು ಕಂಡು ಬಂದಿರುವುದರಿಂದ ಆರೋಪಗಳ ಬಗ್ಗೆ ಹೇಳಿಕೆಯನ್ನು ಸಲ್ಲಿಸುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಡಿ ಶಿಸ್ತುಕ್ರಮ ಪ್ರಾರಂಭಿಸಲಾಗುವುದು ಎಂದು ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಶ್ರೀ ಹೆಚ್. ರಾಮಕೃಷ್ಣೇಗೌಡ, ಜಂಟಿ ನಿರ್ದೇಶಕರು ವಿವರಣೆಯನ್ನು ಸಲ್ಲಿಸಿ, ಯಾವುದೇ ಆರೋಪ ಮಾಡಿರುವುದಿಲ್ಲ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಸೂಚನೆಯ ಮೇರೆಗೆ ಕಾರ್ಯನಿರ್ವಹಿಸಿರುತ್ತೇನೆ. ಸಂಸ್ಥೆಗೆ ನಷ್ಟವಾಗುವಂತಹ ಯಾವುದೇ ನಿರ್ಧಾರ ತೆಗೆದುಕೊಂಡಿರುವುದಿಲ್ಲ ಎಂಬುದಾಗಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸುತ್ತಾ ಅವರ ಮೇಲಿನ ಪ್ರಸ್ತಾವನೆಯನ್ನು ಕೈಬಿಡಲು ಕೋರಿರುತ್ತಾರೆ.

ಕ್ರ. ಸಂ.	ಯೋಜನೆಯ ಹೆಸರು	ಉದ್ದೇಶ	ವಿದ್ಯುತ್ ಮಾರ್ಗವು ಹಾದುಹೋಗುವ ಹಳ್ಳಿಗಳು	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
5	66 ಕೆ.ವಿ. ಕೂಡ್ಲಿಗಿ ವಿತರಣಾ ಕೇಂದ್ರಕ್ಕೆ ಉದ್ದೇಶಿತ 220 ಕೆ.ವಿ. ಕೂಡ್ಲಿಗಿ ವಿತರಣಾ ಕೇಂದ್ರದಿಂದ 66 ಕೆ.ವಿ. ಮಲ್ಟಿಸರ್ಕ್ಯುಟ್ ವಿದ್ಯುತ್ ಮಾರ್ಗ ನಿರ್ಮಾಣ	ಪ್ರಸ್ತಾಪಿತ 220 ಕೆ.ವಿ. ಕೂಡ್ಲಿಗಿ ಸ್ವೀಕರಣಾ ಕೇಂದ್ರದಿಂದ ಸುತ್ತಮುತ್ತಲ ಪ್ರದೇಶದ 66 ಕೆ.ವಿ. ಕೂಡ್ಲಿಗಿ, ಬಣವಿಕಲ್ ಮತ್ತು ಚೋರನೂರು ವಿತರಣಾ ಕೇಂದ್ರಗಳಿಗೆ 66 ಕೆ.ವಿ. ಒಂಟಿ ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡಿ ಸದರಿ ವಿತರಣಾ ಕೇಂದ್ರಗಳಿಗೆ ವೋಲ್ಟೇಜ್ ಗುಣ ಮಟ್ಟವನ್ನು ಉತ್ತಮ ಪಡಿಸಲು	ಬಡೆಲಡಕು ಗ್ರಾಮ, ಕೂಡ್ಲಿಗಿ ಪಟ್ಟಣ ಸರಹದ್ದು	100.00 ಲಕ್ಷ ರೂ.ಗಳು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಮೇಲೆ ತಿಳಿಸಿದ ಯೋಜನೆಗಳನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಭಾಗ-III (ಕೇಂದ್ರೀಯ ಕಾಯ್ದೆ 1885ರ 13 ಅನ್ವಯ) ಅಧಿನಿಯಮ ಟೆಲಿಗ್ರಾಫ್ ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ ಎರಡು ತಿಂಗಳ ಒಳಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ., ಬಳ್ಳಾರಿ ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕಾಗಿ ವಿನಂತಿ ಹಾಗೂ ತದನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಕಾರ್ಯನಿರ್ವಾಹಕ ಅಭಿಯಂತರರು (ವಿ)
ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ.,
ಬಳ್ಳಾರಿ

ಪಿ.ಡಿ. 128

ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿಯಮ 441)ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ

ವ್ಯಾಜ್ಯ ಸಂಖ್ಯೆ: ಜೆ.ಆರ್.ಡಿ./ಯು.ಬಿ.ಎಫ್./622/2011-12

ವಾದಿ:
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ದಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿ.,
ನಂ.1 ಉತ್ತುಂಗ ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು-18

ಪ್ರತಿವಾದಿ:
ಶ್ರೀ ಜಿ.ಎ. ಮಲ್ಲಿನಾಥ್
ನಿವೃತ್ತ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿ.,
ನಂ. 288, 8ನೇ ಮುಖ್ಯರಸ್ತೆ, 2ನೇ ಕ್ರಾಸ್
ವಿಜಯನಗರ, ಬೆಂಗಳೂರು-40

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಮಾಡಿದ ಆದೇಶದ ಸ್ಥಿರೀಕರಣ

1. ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಮೇಲ್ಕಂಡ ದಾವೆಯನ್ನು ದಾಖಲಿಸಿದ್ದು ತಮ್ಮ ಪರವಾಗಿ ಪ್ರಕರಣದಲ್ಲಿ ಹಾಜರಾಗಲು ವಾದಿ ಬ್ಯಾಂಕಿನಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ವೈ.ಎಸ್. ಶೆಟ್ಟರವರಿಗೆ ಅಧಿಕಾರ ನೀಡಿರುತ್ತಾರೆ. ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960ರ ನಿಯಮ 55ರಡಿಯಲ್ಲಿ ಅವರ ಪರ ವಾದಿಸಲು ಶ್ರೀ ಪಿ. ಆನಂದ್ ರವರು ವಕಾಲತ್ತು ಸಲ್ಲಿಸಿದ್ದನ್ನು ಪರಿಗಣಿಸಲಾಯಿತು. ಪ್ರತಿವಾದಿಯು ಮೂಲ ಸಾಲಗಾರರಾಗಿರುತ್ತಾರೆ.

2. ಪ್ರತಿವಾದಿಯು ವಾದಿ ಬ್ಯಾಂಕಿನ ಅಶೋಕ ಪಿಲ್ಲರ್ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವಾಗ ಮಂಜೂರು ಮಾಡಿದ ಗೃಹ ಅಡಮಾನ ಸಾಲ ರೂ. 10,00,000/- ಗಳನ್ನು ದಿನಾಂಕ: 19.9.2008ರಂದು ಶ್ರೀ ವಿಷ್ಣು ಎಂಬುವರಿಗೆ ನೀಡಿದ್ದು, ಸದರಿ ಸಾಲಕ್ಕೆ ಸರಿಯಾದ ದಾಖಲಾತಿಗಳನ್ನು ಪಡೆದುಕೊಳ್ಳದೇ ಕರ್ತವ್ಯ ನಿರ್ಲಕ್ಷತೆ ಮಾಡಿರುವುದರಿಂದ ಸದರಿ ಸಾಲ ಸಮಯಕ್ಕೆ ಸರಿಯಾಗಿ ವಸೂಲಾಗದೆ ಇದ್ದು, ದಿನಾಂಕ: 31.5.2011ಕ್ಕೆ ಅಸಲು ರೂ. 10,30,699/-, ಮತ್ತು ಬಡ್ಡಿ ರೂ. 4,10,054/- ಒಟ್ಟು ರೂ. 14,40,753/- ಗಳು ಮತ್ತು ಈ ದಿನಾಂಕದಿಂದ ಶೇ. 18ರಂತೆ ಮುಂದಿನ ಬಡ್ಡಿಯನ್ನು ಸೇರಿಸಿ ಬಾಕಿ ಬರಬೇಕಾಗಿದ್ದು ಸದರಿ ಮೊತ್ತವನ್ನು ವಾದಿಯಿಂದ ವಸೂಲು ಮಾಡಿಕೊಡಬೇಕೆಂದು ಹಾಗೂ ಈ ಬಗ್ಗೆ ವಾದಿಯ ಸ್ಥಿರ ಸ್ವತ್ತನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶವನ್ನು ನೀಡಲು ತಮ್ಮ ದಾವಾ ಅರ್ಜಿಯಲ್ಲಿ ಕೋರಿರುತ್ತಾರೆ.

3. ವಾದಿಯು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ 103 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಪ್ರತಿವಾದಿ ಸೇವೆಯಿಂದ ನಿವೃತ್ತರಾಗಿರುವ ಕಾರಣ ಅವರ ಹೆಸರಿನಲ್ಲಿರುವ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ಥಿರಾಸ್ತಿಯನ್ನು ತೀರ್ಪು ಪೂರ್ವ ಜಪ್ತಿ ಆದೇಶವನ್ನು ಮಾಡಲು ಆದೇಶಿಸುವಂತೆ ಕೋರಿರುತ್ತಾರೆ. ವಾದಿಯ ಮನವಿ ಸಮಂಜಸವಾಗಿದೆಯೆಂದು ಈ ನ್ಯಾಯಾಲಯದ ಅವಾರ್ಡು/ಡಿಕ್ರಿ/ಆದೇಶ ನಿಷ್ಕ್ರಿಯ ಅಥವಾ ವಿಫಲಗೊಳ್ಳಬಾರದೆಂಬುದನ್ನು ಮನಗಂಡು ವಾದಿಯ ಅರ್ಜಿಯನ್ನು ಪುರಸ್ಕರಿಸಿ ತೀರ್ಪು ಪೂರ್ವ ಜಪ್ತಿ ಆದೇಶವನ್ನು ನೀಡುವುದು ಅವಶ್ಯವೆಂದು ಕೆಳಕಂಡ ಜಪ್ತಿ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲೆ ವಿವರಿಸಿರುವ ಅಂಶಗಳನ್ನು ಆಧರಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀ ಭೀಮಸೇನ ಬಂಕದ, ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿಯಮ 441), ದಾವಾ ಪಂಚಾಯತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ಆದ ನಾನು ಈ ಕೆಳಕಂಡ ಸ್ಥಿರಾಸ್ತಿಯನ್ನು ತೀರ್ಪು ಪೂರ್ವ ಜಪ್ತಿಗೆ ಆದೇಶಿಸಿರುತ್ತೇನೆ.

ಸ್ಥಿರಾಸ್ತಿ ವಿವರ

ಸರ್ವೆ ನಂ.1/5–ಎ ರ ಸೈಟ್ ನಂ. 1 ಕೋಣನಕುಂಟೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ಸೌತ್ ತಾಲ್ಲೂಕು, ಬೆಂಗಳೂರು. ವಿಸ್ತೀರ್ಣ: ಪೂರ್ವ–ಪಶ್ಚಿಮಕ್ಕೆ 40 ಅಡಿ, ಉತ್ತರ–ದಕ್ಷಿಣ: 30 ಅಡಿ, ಒಟ್ಟು 1200 ಚದರ ಅಡಿ ವಿಸ್ತೀರ್ಣ ಹೊಂದಿದ್ದು, ಚೆಕ್ಕುಬಂದಿ ಈ ಕೆಳಗಿನಂತಿರುತ್ತದೆ.

ಚಕ್ಕುಬಂದಿ

ಪೂರ್ವಕ್ಕೆ	:	ರಸ್ತೆ
ಪಶ್ಚಿಮಕ್ಕೆ	:	ಖಾಸಗಿ ಸ್ವತ್ತು
ಉತ್ತರಕ್ಕೆ	:	ಸೈಟ್ ನಂ.2
ದಕ್ಷಿಣಕ್ಕೆ	:	ಖಾಸಗಿ ಸ್ವತ್ತು

ಈ ಆದೇಶವನ್ನು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 28.7.2011ರಂದು ನೀಡಲಾಗಿದೆ.

ಭೀಮಸೇನ ಬಂಕದ
ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ 441)
ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು

ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿಯಮ–441) ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ

ವ್ಯಾಜ್ಯ ಸಂಖ್ಯೆ: ಜೆ.ಆರ್.ಡಿ./ಯು.ಬಿ.ಎಫ್./623/2011–12

ವಾದಿ:

ದಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಕೆಂಗೇರಿ ಸೆಟ್‌ಲೈಟ್ ಶಾಖೆ, ನಂ. 16, 1ನೇ 'ಡಿ' ಮೇನ್ 80 ಫೀಟ್ ರಸ್ತೆ, ಕೆಎಸ್‌ಟಿ, ಬೆಂಗಳೂರು–60 ಇದರ ಶಾಖಾ ವ್ಯವಸ್ಥಾಪಕರು.

ಪ್ರತಿವಾದಿಗಳು:

1. ಆರ್.ಪಿ. ರವೀಂದ್ರ ಬಿನ್ ಲೇಟ್ ಪಾಂಡುರಂಗರಾವ್ ನಂ.103, 4ನೇ ಕ್ರಾಸ್, ಎಸ್.ಬಿ.ಎಂ. ಕಾಲೋನಿ, ಬಿಎಸ್‌ಕೆ 1ನೇ ಹಂತ, ಬೆಂಗಳೂರು–50
2. ಪೌಲ್ ಜಾನ್ ಕೆನ್ನಡಿ, ಬಿನ್ ಪಾಲ್ ರಾಜ್, ನಂ. 88, 2ನೇ ಕ್ರಾಸ್, ಕೆಇಬಿ ಬಡಾವಣೆ, ಅಶ್ವಥನಗರ, ಸಂಜಯನಗರ, ಬೆಂಗಳೂರು–94

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಮಾಡಿದ ಆದೇಶದ ಸ್ಥಿರೀಕರಣ

1. ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಮೇಲ್ಕಂಡ ದಾವೆಯನ್ನು ದಾಖಲಿಸಿದ್ದು, ತಮ್ಮ ಪರವಾಗಿ ಪ್ರಕರಣದಲ್ಲಿ ಹಾಜರಾಗಲು ವಾದಿ ಬ್ಯಾಂಕಿನಲ್ಲಿ ಶಾಖಾ ವ್ಯವಸ್ಥಾಪಕರಾಗಿರುವ ಶ್ರೀ ಶಿವ ಮಲ್ಲಯ್ಯ ಬಿ. ರವರಿಗೆ ಅಧಿಕಾರ ನೀಡಿರುತ್ತಾರೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ 1960ರ ನಿಯಮ 55ರಡಿಯಲ್ಲಿ ಅವರ ಪರ ವಾದಿಸಲು ಶ್ರೀ ಪಿ. ಆನಂದ್‌ರವರು ವಕಾಲತ್ತು ಸಲ್ಲಿಸಿದ್ದನ್ನು ಪರಿಗಣಿಸಲಾಯಿತು. 1ನೇ ಪ್ರತಿವಾದಿಯು ಮೂಲ ಸಾಲಗಾರನಾಗಿದ್ದು, 2ನೇ ಪ್ರತಿವಾದಿಯು 1ನೇ ಪ್ರತಿವಾದಿಯು ಪಡೆದ ಸಾಲಕ್ಕೆ ಜಾಮೀನುದಾರರಾಗಿರುತ್ತಾರೆ.

1ನೇ ಪ್ರತಿವಾದಿಯು ವಾದಿ ಬ್ಯಾಂಕಿನಿಂದ ರೂ. 24,00,000/–ಗಳನ್ನು ದಿನಾಂಕ: 30.5.2010ರಂದು ಗೃಹ ಖರೀದಿ ಸಾಲವಾಗಿ ಪಡೆದಿದ್ದು, ಅದಕ್ಕೆ ಬಡ್ಡಿಯನ್ನು ಶೇ. 11 ಮತ್ತು ಸುಸ್ತಿ ಬಡ್ಡಿ ಶೇ. 2ರಂತೆ ಮರುಪಾವತಿ ಮಾಡಲು ಒಪ್ಪಿರುತ್ತಾರೆ. ಸದರಿ ಸಾಲಕ್ಕೆ 2ನೇ ಪ್ರತಿವಾದಿ ಜಾಮೀನುದಾರರಾಗಿದ್ದು, ತದನಂತರ 1ನೇ ಪ್ರತಿವಾದಿ ದಿನಾಂಕ: 30.6.2011ರಂದು ಸುಸ್ತಿದಾರರಾಗಿದ್ದು, ಅವರಿಂದ ವಾದಿ ಬ್ಯಾಂಕಿಗೆ ಅಸಲು ರೂ. 24,02,603/–, ಬಡ್ಡಿ ರೂ. 1,98,606/– ಮತ್ತು ಇತರೆ ರೂ. 5,000/– ಒಟ್ಟು ರೂ. 26,06,209/–ಗಳು ಬಾಕಿ ಬರಬೇಕಾಗಿದ್ದು, ಸದರಿ ಮೊತ್ತದ ಆದೇಶವನ್ನು ನೀಡಲು ತಮ್ಮ ದಾವಾ ಅರ್ಜಿಯಲ್ಲಿ ಕೋರಿರುತ್ತಾರೆ.

ವಾದಿಯು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ 103ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಪ್ರತಿವಾದಿ–1ರವರಿಗೆ ಸಂಬಂಧಿಸಿದ ಆಸ್ತಿಯ ಮೇಲೆ ತೀರ್ಪು ಪೂರ್ವ ಜಪ್ತಿ ಆದೇಶ ನೀಡಲು ಕೋರಿರುತ್ತಾರೆ. ವಾದಿಯ ಮನವಿ ಸಮಂಜಸವಾಗಿದೆಯೆಂದು ಈ ನ್ಯಾಯಾಲಯವು ಪರಿಗಣಿಸಿ, 1ನೇ ಮತ್ತು 2ನೇ ಪ್ರತಿವಾದಿಗಳ ವಿರುದ್ಧ ನೀಡಬಹುದಾದ ಅವಾರ್ಡು/ಡಿಕ್ರೀ/ಆದೇಶ ನಿಷ್ಕ್ರಿಯ ಅಥವಾ ವಿಫಲಗೊಳ್ಳಬಾರದೆಂಬುದಕ್ಕೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲೆ ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀ ಭೀಮಸೇನ ಬಂಕದ, ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿಯಮ 441), ದಾವಾ ನ್ಯಾಯಾಲಯ, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ, ಬೆಂಗಳೂರು ಆದ ನಾನು ಈ ಕೆಳಕಂಡ ಷೆಡ್ಯೂಲ್‌ನ ಆಸ್ತಿಯನ್ನು ತೀರ್ಪು ಪೂರ್ವ ಜಪ್ತಿಗೆ ಆದೇಶಿಸಿರುತ್ತೇನೆ.

1ನೇ ಮತ್ತು 2ನೇ ಪ್ರತಿವಾದಿಗಳ ನ್ಯಾಯಾಲಯದ ಅಂತಿಮ ತೀರ್ಪು ನೀಡುವವರೆಗೆ 1ನೇ ಮತ್ತು 2ನೇ ಪ್ರತಿವಾದಿಗಳ ಸದರಿ ಆಸ್ತಿಯನ್ನು ಯಾವುದೇ ರೀತಿ ವಿತರಿಸಬಾರದೆಂದು ಆದೇಶಿಸಿದೆ.

ಷೆಡ್ಯೂಲ್

ನಿವೇಶನ ಸಂಖ್ಯೆ: 82, ಬಿ.ಬಿ.ಎಂ.ಪಿ. ನಂ. 82, ಬಿಡಿಎ ಯಿಂದ ಮಂಜೂರಾದ ಭಾರತ್ ಹೌಸಿಂಗ್ ಕೋ–ಆಪ್ ಸೊಸೈಟಿ ನಿಯಮಿತ, ಪರಿವರ್ತನೆಯಾದ ಸರ್ವೆ ಸಂಖ್ಯೆ: 1/2, 1/3, 1/4, 1/5, 1/7, 1/9, 2/1, 2/2, 9/2, 10/1, 10/2, 11/1, 11/5, 11/6, 55/3 ಮತ್ತು 55/8 ತುರಹಳ್ಳಿ ಗ್ರಾಮದಲ್ಲಿರುವ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು. ಅಳತೆ: ಪೂರ್ವ ಮತ್ತು ಪಶ್ಚಿಮ: 40 ಅಡಿಗಳು, ಉತ್ತರ ಮತ್ತು ದಕ್ಷಿಣ: 30 ಅಡಿಗಳು, ಒಟ್ಟು 1200 ಚದರು ಅಡಿ ವಿಸ್ತೀರ್ಣವುಳ್ಳ ಹೊಂದಿದ್ದು ಚೆಕ್ಕುಬಂದಿ ಈ ಕೆಳಗಿನಂತಿರುತ್ತದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ಸೈಟ್ ನಂ. 65
ಪಶ್ಚಿಮಕ್ಕೆ	:	ರಸ್ತೆ
ಉತ್ತರಕ್ಕೆ	:	ಸೈಟ್ ನಂ. 83
ದಕ್ಷಿಣಕ್ಕೆ	:	ಸೈಟ್ ನಂ. 81

ಈ ಆದೇಶವನ್ನು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 28.7.2011ರಂದು ನೀಡಲಾಗಿದೆ.

ಭೀಮಸೇನ ಬಂಕದ
ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ 441)
ಕ.ರಾ.ಸ.ಪ. ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು

ಪಿ.ಡಿ. 134

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬೃಹತ್ ಕಾಮಗಾರಿ ವಿಭಾಗ, ತುಮಕೂರು

ಸಂಖ್ಯೆ: ಕಾನಿಇಂ/ಬೃಕಾವಿ/ಟಿಕೆಆರ್/11–12/1972–74, ದಿನಾಂಕ: 2ನೇ ಸೆಪ್ಟೆಂಬರ್ 2011

ಕ.ವಿ.ಪ್ರ.ನಿ.ನಿ. 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಪ್ರಕರಣ 67ರನ್ವಯ ಈ ಕೆಳಗೆ ತಿಳಿಸಿರುವ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ಯೋಜನೆಗಳನ್ನು ಲೈಸೆನ್ಸ್‌ದಾರರು ಮತ್ತು ಆಸಕ್ತರು ಯಾವುದೇ ಇತರ ವ್ಯಕ್ತಿಗಳ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಯೋಜನೆಗಳ ವಿವರ ಈ ಕೆಳಕಂಡಂತಿವೆ

ಕ್ರ. ಸಂ.	ಯೋಜನೆಯ ಹೆಸರು	ಯೋಜನೆಯ ಪ್ರಮುಖ ಲಕ್ಷಣಗಳು	ಯೋಜನೆಯ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	[illegible] ಪ್ರದೇಶ
1	ತುಮಕೂರು ತಾಲ್ಲೂಕು, ದೊಡ್ಡಸಾರಂಗಿ ಗ್ರಾಮದಲ್ಲಿ ಸರ್ವೆ ನಂ. 51/7 ಹೆತ್ತೇನಹಳ್ಳಿ ಗ್ರಾಮದಲ್ಲಿ) 1*8 ಎಂ.ವಿ.ಎ. ವಿದ್ಯುತ್ ಉಪ ಸ್ಥಾವರವನ್ನು ಸ್ಥಾಪಿಸುವುದು ಮತ್ತು ಉದ್ದೇಶಿಸಿರುವ 66/11 ಕೆ.ವಿ. ಉಪಸ್ಥಾವರಕ್ಕೆ ಹಾಲಿ ಇರುವ ಮೆಳೇಕೋಟೆ-ಹೆಬ್ಬೂರು 66 ಕೆ.ವಿ. ಪ್ರಸರಣಾ ಮಾರ್ಗದಿಂದ 0.25 ಕಿ.ಮೀ. ಉದ್ದದ 66 ಕೆ.ವಿ. ಲಿಲೋ ಪ್ರಸರಣ ಮಾರ್ಗವನ್ನು	1. ದೊಡ್ಡಸಾರಂಗಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವೋಲ್ಟೇಜ್ ಉತ್ತಮಪಡಿಸುವುದು. 2. ಮಾರ್ಗ ವ್ಯವಸ್ಥೆಯಲ್ಲಿ ನಷ್ಟವನ್ನು ಕಡಿಮೆಗೊಳಿಸುವುದು 3. ವಿದ್ಯುತ್ ಸರಬರಾಜಿನ ಗುಣಮಟ್ಟ ಉತ್ತಮ ಪಡಿಸುವುದು ಮತ್ತು ಸ್ಥಿರತೆ ಕಾಪಾಡುವುದು 4. ಮೆಳೇಕೋಟೆ ಉಪ ಸ್ಥಾವರದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು 5. ಮುಂಬರುವ ವಿದ್ಯುತ್ ಬೇಡಿಕೆಯನ್ನು ಕಲ್ಪಿಸುವುದು	347.03	ಹೆತ್ತೇನಹಳ್ಳಿ
2	ತುರುವೇಕೆರೆ ತಾಲ್ಲೂಕು, ತಾಳಕೆರೆ ಗ್ರಾಮದಲ್ಲಿ (ಸರ್ವೆ ನಂ. 25, ತಾಳಕೆರೆ ಗ್ರಾಮದಲ್ಲಿ) 1*10 ಎಂ.ವಿ.ಎ. ವಿದ್ಯುತ್ ಉಪ ಸ್ಥಾವರವನ್ನು ಸ್ಥಾಪಿಸುವುದು ಮತ್ತು ಉದ್ದೇಶಿಸಿರುವ 110/11 ಕೆ.ವಿ. ಉಪಸ್ಥಾವರಕ್ಕೆ ಹಾಲಿ ಇರುವ 110 ಕೆ.ವಿ. ತುರುವೇಕೆರೆ-ಮಾಯಸಂದ್ರ ಪ್ರಸರಣಾ ಮಾರ್ಗದಿಂದ 4.435 ಕಿ.ಮೀ. ಉದ್ದದ 110 ಕೆ.ವಿ. ಲಿಲೋ ಪ್ರಸರಣ ಮಾರ್ಗವನ್ನು ನಿರ್ಮಿಸುವುದು	1. ತಾಳಕೆರೆ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವೋಲ್ಟೇಜ್ ಉತ್ತಮಪಡಿಸುವುದು	672.93	ಕಾಚಿಹಳ್ಳಿ, ಮಂಗಿಕೊಪ್ಪೆ, ದ್ವಾರನಹಳ್ಳಿ, ತಾಳಕೆರೆ
		2. ಮಾರ್ಗ ವ್ಯವಸ್ಥೆಯಲ್ಲಿ ನಷ್ಟವನ್ನು ಕಡಿಮೆಗೊಳಿಸುವುದು		
		3. ವಿದ್ಯುತ್ ಸರಬರಾಜಿನ ಗುಣಮಟ್ಟ ಉತ್ತಮ ಪಡಿಸುವುದು ಮತ್ತು ಸ್ಥಿರತೆ ಕಾಪಾಡುವುದು		
		4. ತುರುವೇಕೆರೆ ಮತ್ತು ಮಾಯಸಂದ್ರ ಉಪ ಸ್ಥಾವರದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು		
		5. ಮುಂಬರುವ ವಿದ್ಯುತ್ ಬೇಡಿಕೆಯನ್ನು ಕಲ್ಪಿಸುವುದು		

ಕ.ವಿ.ಪ್ರ.ನಿ.ನಿ. ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ-IIIರ (ಕೇಂದ್ರ ಕಾಯ್ದೆ 1886ರ 13 ಅನ್ವಯ) ಅಧಿನಿಯಮ ಟೆಲಿಗ್ರಾಫ್ ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 60 ದಿನಗಳ ಒಳಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ) ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ. ಕೋತಿತೋಪು, ತುಮಕೂರು-02 ಇವರಿಗೆ ಕಳುಹಿಸುವುದು.

ಪಿ.ಡಿ. 138

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃಹತ್ ಕಾಮಗಾರಿ ವಿಭಾಗ, ತುಮಕೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಕಾವೂರು, ಮಂಗಳೂರು-15.

ಸಂಖ್ಯೆ: ಕಾನಿಇಂ/ಬೃಕಾವಿ/ಮಂ/ಸಕಾನಿಇಂ(ಕ)/3004-08, ದಿನಾಂಕ: 17-9-2011

ಪರಿಷ್ಕೃತ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಸೆಕ್ಷನ್ 67(2)(c)ರ ಅನ್ವಯ ಈ ಕೆಳಕಂಡ ಯೋಜನೆಯನ್ನು ರೂಪಿಸಿರುತ್ತದೆ ಮತ್ತು ಅದನ್ನು ಮೇಲ ತಿಳಿಸಿರುವ ಕಾಯ್ದೆಯ ಸೆಕ್ಷನ್ 67(2)ರ ಅನ್ವಯ ಸಂಬಂಧಪಟ್ಟ ವ್ಯಕ್ತಿಗಳ ಮಾಹಿತಿಗಾಗಿ ಈ ಮೊದಲೇ ದಿನಾಂಕ: 22.8.2007ರ ಹಾಗೂ 19.6.2009ರ ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಈ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾದ ಪ್ರಕಟಣೆಯಲ್ಲಿ ಪ್ರಸ್ತಾವಿತ ವರಾಹಿ-ಕೇಮಾರ್-ಕಾವೂರು ವಿದ್ಯುತ್ ಮಾರ್ಗವು ಹಾದುಹೋಗುವ ಕೆಲವು ಗ್ರಾಮಗಳ ಹೆಸರುಗಳು ಬಿಟ್ಟುಹೋಗಿರುವುದರಿಂದ ಅವುಗಳನ್ನು ಸೇರಿಸಿ ಮತ್ತೊಮ್ಮೆ ಪ್ರಕಟಿಸಲಾಗಿದೆ. ಸದರಿ ಯೋಜನೆ
ಯ ಹೆಸರಿನಲ್ಲಿ ಈ ಕೆಳಗಿನಂತೆ ಮಾರ್ಪಾಡುಗಳನ್ನು ಮಾಡಿ ಸಾರ್ವಜನಿಕ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

1.	ಯೋಜನೆಯ ಹೆಸರು	ವರಾಹಿಯಿಂದ ಕೇಮಾರ್, ಕೇಮಾರ್‌ನಿಂದ ಗಂಜೀಮಠದವರೆಗೆ ಹಾಲಿ ಇರುವ 110 ಕೆ.ವಿ. ಶಿವಮೊಗ್ಗ-ಕಾವೂರು ಏಕ ಪ್ರಸರಣಾ ವಿದ್ಯುತ್ ಮಾರ್ಗದಲ್ಲಿಯೇ ಮತ್ತು ಗುರುಪುರದಿಂದ ವಾಮಂಜೂರಿನವರೆಗೆ ಹಾಲಿ ಇರುವ 110 ಕೆ.ವಿ. ಶಿವಮೊಗ್ಗ-ಕಾವೂರು ಏಕ ಪ್ರಸರಣಾ ವಿದ್ಯುತ್ ಮಾರ್ಗದಲ್ಲಿಯೇ ಮತ್ತು ಹೊಸ ಪಥದಲ್ಲಿ ಹಾಗೂ ಗಂಜೀಮಠದಿಂದ ಗುರುಪುರದವರೆಗೆ ಹೊಸ ಪಥದಲ್ಲಿ 220 ಕೆ.ವಿ. ದ್ವಿಪ್ರಸರಣಾ ವಿದ್ಯುತ್ ಮಾರ್ಗದ ನಿರ್ಮಾಣ ಮತ್ತು ವಾಮಂಜೂರಿನಿಂದ ಕಾವೂರಿನವರೆಗೆ ಹಾಲಿ ಇರುವ 110 ಕೆ.ವಿ. ಶಿವಮೊಗ್ಗ-ಕಾವೂರು ಏಕ ಪ್ರಸರಣಾ ವಿದ್ಯುತ್ ಮಾರ್ಗದಲ್ಲಿಯೇ 220/110 ಕೆ.ವಿ. ಬಹುಮಂಡಲ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ.
2.	ಪ್ರಮುಖ ಲಕ್ಷಣಗಳು	ಸಾಂಪ್ರದಾಯಿಕವಾದ ಜಿ.ಐ. ಲ್ಯಾಟೀಸ್ ಮಾದರಿಯ ಗೋಪುರಗಳ ಮೇಲೆ ಮೂಸ್ ವಾಹಕವನ್ನು ಉಪಯೋಗಿಸಿ, ಸುಮಾರು 112 ಕಿ.ಮೀ. ಉದ್ದದ 220 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗದ ನಿರ್ಮಾಣ ಹಾಗೂ ಆ ನಂತರ ಸುಮಾರು 5.0 ಕಿ.ಮೀ. ಉದ್ದದ ಬಹುಮಂಡಲ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ.
3.	ಹಾದು ಹೋಗುವ ಪ್ರದೇಶಗಳು	ಉಡುಪಿ, ದ.ಕ. ಜಿಲ್ಲೆಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸರಬರಾಜಿನೊಂದಿಗೆ ಬೆಳೆಯುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸಲುವಾಗಿ ಕೈಗೊಳ್ಳಲಾದ ಈ ಪ್ರಸ್ತಾವಿತ ವಿದ್ಯುತ್ ಮಾರ್ಗವು 35 ಮೀಟರ್ ಕಾರಿಡಾರ್ ಅಗಲವನ್ನು ಹೊಂದಿದ್ದು, ಉಡುಪಿ ಹಾಗೂ ದ.ಕ. ಜಿಲ್ಲೆಯ ಈ ಕೆಳಗಿನ ಪ್ರದೇಶಗಳಲ್ಲಿ ಹಾದುಹೋಗುತ್ತದೆ. ಪ್ರಸ್ತಾವಿತ ವಿದ್ಯುತ್ ಪ್ರಸರಣಾ ಮಾರ್ಗವು ಹುಲಿಕಲ್, ಮುತ್ತಿಟ್ಟಿನಕಟ್ಟೆ, ಹೊಸಂಗಡಿ, ಕೆರಕಟ್ಟೆ, ಸಿದ್ದಾಪುರ, ಐರುಬೈಲು, ಉಳ್ಳೂರು, ಹೆಬ್ಬಾಡಿ, ಶಂಕರನಾರಾಯಣ, ಕೊಳಂಜೆ, ಹಾಲಾಡಿ, ಕಕ್ಕುಂಜೆ, ವಂಡಾರು, ಶಿರೂರು, ಕೊಟ್ಟಂಬೈಲು, ಕೊಕ್ಕರ್ಣೆ, ಗುಂಡಿಬೈಲು, ಕುಡುಂಗೋಡು, ಕರ್ಜೆ, ಬಲೆಬೈಲು, ಬುಕ್ಕಿಗುಡ್ಡೆ, ಹಿರಿಯಡ್ಕ, ಬೊಮ್ಮಾರ್‌ಬೆಟ್ಟು, ಗುಡ್ಡೆಅಂಗಡಿ, ಪಂಚನಬೆಟ್ಟು, ನೀರೆ, ಬೈಲೂರು ಜಾರ್ಕಳ, ಕಲ್ಯಂಬ, ಕುಕ್ಕೂಂದೂರು, ನಕ್ರೆ, ಕಾರ್ಕಳ, ಕಾಬೆಟ್ಟು ಅತ್ತೂರು, ಪರ್ಪಲೆಗುಡ್ಡೆ, ಕೇಮಾರ್, ಕುಂಟಲ್ಪಾಡಿ, ಸಾಣೂರು, ಕಾಂತಾವರ, ಬೆಳುವಾಯಿ, ಮೂಡಬಿದ್ರೆ, ನಡಿಗುಡ್ಡೆ, ಪುತ್ತಿಗೆ, ಸಂಪಿಗೆ, ಬಡಮಿಜಾರ್, ತೋರ್, ಮಿಜಾರ್, ಎಡಪದವು, ಗಂಜಿಮಠ, ನೂಯಿ, ಸೂರ್ಯಪಾಡಿ, ಅಡೂರು, ಮಳಲಿ, ಬಡಗುಉಳಿಪಾಡಿ, ಮಟ್ಟು, ತೆಂಕುಉಲಿಪಾಡಿ, ಮೂಳೂರು, ಮೂಡುಪೆರಾರ್, ಗುರುಕಂಬ್ಳಾ, ಕೈಕಂಬ, ಗುರುಪುರ, ತಿರುವೈಲು, ವಾಮಂಜೂರು, ಕೆರ್ಮಾ, ಶಿವನಗರ, ಜವರದಬೆಟ್ಟು, ಪಡುಶೆಡ್ಡೆ, ಮರಕಡ ಗ್ರಾಮಗಳ ಮಿತಿಯಲ್ಲಿ ಹಾದು ಕಾವೂರಿಗೆ ಬಂದು ಅಂತ್ಯಗೊಳ್ಳಲಿದೆ.
4	ವಿದ್ಯುತ್ ಪ್ರಸರಣ ಮಾರ್ಗದ ಅಂದಾಜು ಮೌಲ್ಯ	ಸಾಮಗ್ರಿ ಮತ್ತು ಲೇಬರ್ ವೆಚ್ಚ ಸೇರಿಸಿ ಅಂದಾಜು 9458.99 ಲಕ್ಷ ರೂಪಾಯಿಗಳು

ಮೇಲೆ ತಿಳಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಭಾರತೀಯ ಟೆಲಿಗ್ರಾಫಿಕ್ ಕಾಯಿದೆ 1885 ಅಧಿನಿಯಮ ಭಾಗ-IIIರ ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಮೇಲಿನ ಪ್ರಸ್ತಾವಿತ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಸಮರ್ಪಿಸಲು ಸಮಸ್ತ ನಾಗರೀಕರ ಅಗತ್ಯ ಸಹಕಾರವನ್ನು ವಿದ್ಯುತ್ ಪ್ರಸರಣ ನಿಗಮವು ಅಪೇಕ್ಷಿಸುತ್ತದೆ.

ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)
ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ
ಕಾವೂರು, ಮಂಗಳೂರು-15

ಪಿ.ಡಿ. 156

OFFICE OF THE COMMISSIONER BANGALORE DEVELOPMENT AUTHORITY, BANGALORE

ERRATUM NOTIFICATION

No. BDA/Commr/LAO/238/10-11, Dated: 19th March 2011

Whereas the Notification under Section 17(1) & (3) of Bangalore Development Authority Act 1976 has been issued by the Bangalore Development Authority vide Notification No. BDA/Commr/LAO/238/10-11, Bangalore, Dated: 24.8.2010, published in the Karnataka Gazette on 28.10.2010 at page No. 4311 for Acquisition of land is several Sy Nos. 57/6 of Sreegandadakaval Village Yeshwanthapura Hobli, Bangalore North Taluk. A correction has been noticed which has necessitated the issue of this ERRATUM to the said Notification.

For	Read as
In Para No. 1 "For the Formation of Link between further extension of Sir, M. Vishveshwaraiah and 80 Feet Road and Mallathahalli"	Para No.1 "To Provide free left turn from Mysore Road to Magadi Road Junction"

Commissioner
Bangalore Development Authority
Bangalore

P.D. 159

Karnataka Ayrvedic & Unani Practitioners Board, Dhanwantri Road, Bangalore – 560 009

No. Aub/Eln/19/2011-12, Dated: 26th September 2011

NOTIFICATION

Dr. Veerabhadrappa G. Musari, Returing Officer, appointed for this purpose hereby declare that Dr. Satyamoorthy Bhat S/o P. Ramakrishna Bhat, Sri Vidya Clinic, llawala, 571130, Mysore has been duly elected as president of The Karnataka Ayurvedic & Unani Practitioners Board as per Sub-Section (5) of Section 3 of the Karnataka Ayurvedic & Unani Practitioners Registration and Miscellaneious & Medical Practitioners Miscellenious Provisions Act, 1961.

DR. VEERABHADRAPPA G. MUSARI
Returning Officer
For Election Officer to the Karnataka Ayurvedic & Unani
Practitioners Board, Bangalore-09

P.D. 162

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಅಭಿಯಂತರರು (ವಿ) ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ., ಕೊಪ್ಪಳ

ಸಂಖ್ಯೆ: ಕಾನಿಇಂ(ವಿ)/ಬೃಕಾವಿ /ಕೊಪ್ಪಳ/11–12/231–233, ದಿನಾಂಕ: 1ನೇ ಅಕ್ಟೋಬರ್ 2011

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಸರಬರಾಜು ಕಾಯಿದೆ 2003ರ ಸೆಕ್ಷನ್ 67ರ ಅಡಿಯಲ್ಲಿ ಯೋಜನೆಗಳನ್ನು ರೂಪಿಸಿದೆ ಮತ್ತು ಇದೇ ಕಾಯಿದೆ ಸೆಕ್ಷನ್ 67(2)ರ ಅನ್ವಯ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಪ್ರಕಟಣೆ ನೀಡಿದೆ.

ಯೋಜನೆಯ ವಿವರಗಳು ಈ ಕೆಳಗಿನಂತಿವೆ:

1. **ಯೋಜನೆಯ ಹೆಸರು:** ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆಯ ಕೆರೆಹಳ್ಳಿ ಗ್ರಾಮದಲ್ಲಿ ಹಾಲಿ ಇರುವ 33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು 110/33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನಾಗಿ ಉನ್ನತೀಕರಣ ಮಾಡುವುದು ಹಾಗೂ ಕೇಂದ್ರಕ್ಕೆ ಸಂಬಂಧಪಟ್ಟ 6.40 ಕಿ.ಮೀ. ಉದ್ದದ 110 ಕೆ.ವಿ. ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2. ಪ್ರಸ್ತಾಪಿಸಿರುವ 110/33/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರ ಕೆರೆಹಳ್ಳಿಗೆ 6.40 ಕಿ.ಮೀ. ಉದ್ದದ 110 ಕೆ.ವಿ. ಏಕ ಪ್ರಸರಣ ಮಾರ್ಗವನ್ನು ಜೋಡಿ ಗೋಪುರಗಳ ಮೇಲೆ ಹಾಲಿ ಇರುವ 110 ಕೆ.ವಿ. ಮುನಿರಾಬಾದ್–ಸಿಂಧನೂರು ಮಾರ್ಗದಿಂದ ಟ್ಯಾಪ್ ಮೂಲಕ ನಿರ್ಮಿಸುವುದು ಹಾಗೂ ಈ ಪ್ರಸರಣ ಮಾರ್ಗವು ಈ ಕೆಳಕಂಡ ಹಳ್ಳಿಗಳ ಸರಹದ್ದಿನ ಮುಖಾಂತರ ಹಾದು ಹೋಗುತ್ತದೆ (1) ಶಿವಪುರ (2) ಅಗಳಕೇರಾ ಮತ್ತು (3) ಕೆರೆಹಳ್ಳಿ.
3. ಯೋಜನೆಯ ಉದ್ದೇಶ: ಈ ಯೋಜನೆಯಿಂದ ಯರಡೋಣ ಹಾಗೂ ಸುತ್ತಮುತ್ತಲಿನ ಸುಮಾರು 15 ಹಳ್ಳಿಗಳ ಸರಹದ್ದಿನಲ್ಲಿ ಬರುವ ನೀರಾವರಿ ಪಂಪುಸೆಟ್ಟುಗಳಿಗೆ ಮತ್ತು ಇತರೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುತ್ತದೆ.
4. **ಯೋಜನೆಯ ಅಂದಾಜು ವೆಚ್ಚ:** ರೂ. 958.53 ಲಕ್ಷಗಳು.

ಮೇಲಿನ ಯೋಜನೆಗಳನ್ನು ನಿರ್ವಹಿಸಲು 1885ರ ಭಾರತೀಯ ಟೆಲಿಗ್ರಾಫ್ ಕಾಯಿದೆ (1885ರ 13) ಭಾಗ-3ರ ಅನ್ವಯ ಟೆಲಿಗ್ರಾಫ್ ಪ್ರಾಧಿಕಾರವು ಪಡೆದುಕೊಂಡಿರುವ ಎಲ್ಲಾ ಅಧಿಕಾರವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹೊಂದಿರುವುದು ಮತ್ತು ಚಲಾಯಿಸುವ ಹಕ್ಕನ್ನು ಪಡೆದಿರುವುದು. ಈ ಯೋಜನೆಗಳ ಬಗ್ಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಅವುಗಳನ್ನು ಪರಿಗಣಿಸಲು ಕಾರ್ಯನಿರ್ವಾಹಕ ಇಂಜಿನಿಯರು(ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ಕೊಪ್ಪಳ ಇವರಿಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗೆ ತಲುಪುವಂತೆ ಕಳುಹಿಸಿಕೊಡಬೇಕು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ. ಕೊಪ್ಪಳ

ಪಿ.ಡಿ. 164

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ರವರ ಕಛೇರಿ ಬೃಹತ್ ಕಾಮಗಾರಿ ವಿಭಾಗ, ಮಂಗಳೂರು, ಕವಿಪ್ರನಿನಿ, ಕಾವೂರು, ಮಂಗಳೂರು.

ಸಂಖ್ಯೆ: ಕಾನಿಇಂ/ಬೃಕಾವಿ/ಮಂ/ಸಕಾನಿಇಂ(ಕ)/3956-60, ದಿನಾಂಕ: 3ನೇ ನವೆಂಬರ್ 2011

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಸೆಕ್ಷನ್ 67(2)(c)ರ ಅನ್ವಯ ಈ ಕೆಳಕಂಡ ಯೋಜನೆಯನ್ನು ರೂಪಿಸಿರುತ್ತದೆ ಮತ್ತು ಅದನ್ನು ಮೇಲೆ ತಿಳಿಸಿರುವ ಕಾಯ್ದೆಯ ಸೆಕ್ಷನ್ 67(2)ರ ಅನ್ವಯ ಸಂಬಂಧಪಟ್ಟ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

1.	ಯೋಜನೆಯ ಹೆಸರು	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ 220/110 ಕೆವಿ ಎಸ್.ಆರ್.ಎಸ್. ಕಾವೂರು ವಿದ್ಯುತ್ ಉಪಕೇಂದ್ರದಿಂದ ಹಾಲಿ ಇರುವ 110 ಕೆವಿ ಕಾವೂರು-ಬೈಕಂಪಾಡಿ ಏಕ ಪ್ರಸರಣಾ ವಿದ್ಯುತ್ ಮಾರ್ಗದ ಗೋಪುರ ಸಂಖ್ಯೆ 11 (ಎಂ.ಆರ್.ಪಿ.ಎಲ್. ಟ್ಯಾಪಿಂಗ್ ಪಾಯಿಂಟ್) ರಿಂದ ಜೋಕಟ್ಟೆಯಲ್ಲಿರುವ 110 ಕೆವಿ ಎಂ.ಆರ್.ಪಿ.ಎಲ್. ಮೀಟರಿಂಗ್ ಬೇ ವರೆಗೆ ಹಾಲಿ ಇರುವ 110 ಕೆವಿ ಏಕ ಪ್ರಸರಣಾ ವಿದ್ಯುತ್ ಮಾರ್ಗವನ್ನು 110 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗವಾಗಿ ಪರಿವರ್ತಿಸುವುದು.
2.	ಪ್ರಮುಖ ಲಕ್ಷಣಗಳು	ಸಾಂಪ್ರದಾಯಿಕವಾದ ಜಿ.ಐ. ಲ್ಯಾಟೀಸ್ ಮಾದರಿಯ ಗೋಪುರಗಳ ಮೇಲೆ ಲಿಂಕ್ಸ್ ಎ.ಸಿ.ಎಸ್.ಆರ್. ವಾಹಕವನ್ನು ಉಪಯೋಗಿಸಿ, ಸುಮಾರು 4.206 ಕಿ.ಮೀ. ಉದ್ದದ 110 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗದ ನಿರ್ಮಾಣ.
3.	ಹಾದು ಹೋಗುವ ಪ್ರದೇಶಗಳು	ಮಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸರಬರಾಜಿನೊಂದಿಗೆ ಬೆಳೆಯುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸಲುವಾಗಿ ಕೈಗೊಳ್ಳಲಾದ ಈ ಪ್ರಸ್ತಾವಿತ ವಿದ್ಯುತ್ ಮಾರ್ಗವು 22 ಮೀಟರ್ ಕಾರಿಡಾರ್ ಅಗಲವನ್ನು ಹೊಂದಿದ್ದು, ಮಂಗಳೂರು ತಾಲ್ಲೂಕಿನ ಈ ಗ್ರಾಮಗಳ ಮಿತಿಯಲ್ಲಿ ಹಾದುಹೋಗುತ್ತದೆ. ಪ್ರಸ್ತಾವಿತ ವಿದ್ಯುತ್ ಪ್ರಸರಣಾ ಮಾರ್ಗವು ಪಂಜಿಮೊಗರು, ಕುಂಜತ್ತಬೈಲು, ಅತ್ರಬೈಲು, ಕೆಂಜಾರು, ಜೋಕಟ್ಟೆ ಗ್ರಾಮಗಳ ಮಿತಿಯುಲ್ಲಿ ಹಾದು 110 ಕೆವಿ ಎಂ.ಆರ್.ಪಿ.ಎಲ್. ಮೀಟರಿಂಗ್ ಬೇಯ ಹತ್ತಿರ ಹಾಲಿ ಇರುವ 110 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗದ ಪಥವನ್ನು ಸೇರಿಕೊಳ್ಳುತ್ತದೆ.
4	ವಿದ್ಯುತ್ ಪ್ರಸರಣ ಮಾರ್ಗದ ಅಂದಾಜು ಮೌಲ್ಯ	ಸಾಮಗ್ರಿ, ಲೇಬರ್ ಹಾಗೂ ಸಿವಿಲ್ ವೆಚ್ಚ ಸೇರಿಸಿ ಅಂದಾಜು 214.48 ಲಕ್ಷ ರೂಪಾಯಿಗಳು

ಮೇಲೆ ತಿಳಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಭಾರತೀಯ ಟೆಲಿಗ್ರಾಫಿಕ್ ಕಾಯಿದೆ 1885 ಅಧಿನಿಯಮ ಭಾಗ-IIIರ ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಮೇಲಿನ ಪ್ರಸ್ತಾವಿತ ಯೋಜನೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ನಿಗಮದ ಪರಿಗಣನೆಗಾಗಿ/ಅವುಗಳ ನಿವಾರಣೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ ಹದಿನೈದು ದಿನಗಳೊಳಗಾಗಿ ಈ ಕೆಳಗಿನ ಕಛೇರಿಗೆ ಕಳುಹಿಸುವುದು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)
ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ
ಕಾವೂರು, ಮಂಗಳೂರು-15

ಪಿ.ಡಿ. 165

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ಪರಿಹಾರ ಆಯುಕ್ತರ ನ್ಯಾಯಾಲಯ

916-ಗಂಗೋತ್ರಿನಗರ, ಎಸ್.ಐ.ಟಿ. ಬ್ಯಾಕ್, ತುಮಕೂರು ಜಿಲ್ಲೆ, ತುಮಕೂರು

ಸಂಖ್ಯೆ: ಕಾಅತು:ಕಾಪಕಾ:ಸಿಆರ್:ಮಿಸ್-31/2011, ದಿನಾಂಕ: 29ನೇ ಆಗಸ್ಟ್ 2011

ಅರ್ಜಿದಾರರು

1 ಶ್ರೀಮತಿ ಜಯಮ್ಮ ಪತಿ ಲೇಟ್ ಚಿಕ್ಕಣ್ಣ ವಯಸ್ಸು: 40 ವರ್ಷ

2 ಚಿಕ್ಕಮ್ಮ ತಂದೆ: ಲೇಟ್ ಚಿಕ್ಕಣ್ಣ ವಯಸ್ಸು 21 ವರ್ಷ

3 ಮಂಜುನಾಥ ತಂದೆ: ಲೇಟ್ ಚಿಕ್ಕಣ್ಣ, ವಯಸ್ಸು: 19 ವರ್ಷ

ವಾಸ: ಮಂದಗಾನಹಳ್ಳಿ ವಿಲೇಜ್ ಕಡೂರು ಹೋಬಳಿ ಮಧುಗಿರಿ ತಾಲ್ಲೂಕು

ಈಗಿನ ವಿಳಾಸ:

ರಂಗಾಪುರ ವಿಲೇಜ್, ಊರುಕೆರೆ ಪೋಸ್ಟ್, ಕಸಬ ಹೋಬಳಿ, ತುಮಕೂರು ತಾಲ್ಲೂಕು

ಪ್ರತಿವಾದಿಗಳು

1. ಶ್ರೀ ಕೃಷ್ಣಪ್ಪ ಎಂ.ಜಿ. ತಂದೆ: ಗಂಗ ಗುಡ್ಡಯ್ಯ, ವಯಸ್ಸು ಸುಮಾರು 40 ವರ್ಷ, ವಾಸ: ನಂ. 4, ಶ್ರೀರಾಮನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು - 560 079

2 ದಿ ಮ್ಯಾನೇಜರ್, ಯೂನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ. ಲಿ., ಬ್ರ್ಯಾಂಚ್ ಆಫೀಸ್, ಜಯದೇವ ಕಾಂಪ್ಲೆಕ್ಸ್, 1ನೇ ಮಹಡಿ, ಪಿ.ಬಿ. ನಂ. 54, ಬಿ.ಹೆಚ್. ರಸ್ತೆ, ತುಮಕೂರು

ಪ್ರಕಟಣೆ

1ನೇ ಅರ್ಜಿದಾರರ ಪತಿ ಚಿಕ್ಕಣ್ಣ ಎಂಬುವವರು 1ನೇ ಪ್ರತಿವಾದಿಯ ಲಾರಿ ಸಂ: ಕೆಎ-52-1769 ಲಾರಿಯಲ್ಲಿ ಡ್ರೈವರಾಗಿ ಕರ್ತವ್ಯನಿರ್ವಹಿಸುತ್ತಿದ್ದಾಗ ಕರ್ತವ್ಯದ ವೇಳೆಯಲ್ಲಿ ದಿನಾಂಕ: 11.5.2011ರಂದು ಆದ ಅಪಘಾತದಲ್ಲಿ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಬಗ್ಗೆ ಏನಾದರೂ ತಮ್ಮ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೆ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಎ.ಪಿ. ಪುಂಡಲೀಕರಾವ್
ಆಯುಕ್ತರು
ಕಾರ್ಮಿಕ ಪರಿಹಾರ ನ್ಯಾಯಾಲಯ
ತುಮಕೂರು ಜಿಲ್ಲೆ, ತುಮಕೂರು

ಪಿ.ಆರ್. 959

DEPARTMENT OF COMMERCIAL TAXES

Office of the Commissioner of Commercial, Taxes "Vanijya Therige Karyalaya",

Kalidasa Road, Gandhi Nagara, Bangalore-560 009.

No. ADCOM(I&C)/JDN.KTEG.NFN:CR:23/11-12, Dated: 30th August 2011

NOTIFICATION

In exercise of the powers conferred by sub-Section (2) of Section 12 of the Karnataka Tax on Entry of Goods Act, 1979 (Karnataka Act 29 of 1979), I hereby authorise all the Additional Commissioners of Commercial Taxes, Joint Commissioners of Commercial Taxes, Deputy Commissioners of Commercial Taxes, Assistant Commissioners of Commercial Taxes and Commercial Tax Officers to exercise such powers and discharge such duties and to perform such functions under this Act in respect of such area and such dealer or such classes of dealers, or such cases or such classes of cases as my be assigned to them from time to time under corresponding provisions of the Karnataka Value Added Tax Act 2003 (Karnataka Act 32 of 2004) or the Karnataka Sales Tax Act, 1957 (Karnataka Act 25 of 1957).

P.R. 960

PRADEEP SINGH KHAROLA
Commissioner of Commercial Taxes (Karnataka) Bangalore

DEPARTMENT OF COMMERCIAL TAXES

Office of the Commissioner of Commercial, Taxes "Vanijya Therige Karyalaya",

Kalidasa Road, Gandhi Nagara, Bangalore-560 009.

No. ADCOM(I&C)/JDN.KTEG.NFN:CR:24/11-12, Dated: 30th August 2011

NOTIFICATION

In exercise of the powers conferred by sub-Section (3) of Section 6 of the Karnataka Special Tax on Entry of Certain Goods Act, 2004 (Karnataka Act 29 of 2004), I hereby authorise all the Additional Commissioners of Commercial Taxes, Joint Commissioners of Commercial Taxes, Deputy Commissioners of Commercial Taxes, Assistant Commissioners of Commercial Taxes and Commercial Tax Officers to exercise such powers and discharge such duties and to perform such functions under this Act in respect of such area and such dealer or such classes of dealers, or such cases or such classes of cases as may be assigned to them from time to time under corresponding provisions of the Karnataka Value Added Tax Act 2003 (Karnataka Act 32 of 2004) or the Karnataka Sales Tax Act, 1957 (Karnataka Act 25 of 1957).

PRADEEP SINGH KHAROLA

Commissioner of Commercial Taxes (Karnataka)

P.R. 961 Bangalore

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳವರ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ನಂ. ಬಿಸಿಎಂ5/ಕಾತಭ/ಮ.ಅ./ಸಿಆರ್-02/2011-12, ದಿನಾಂಕ: 27ನೇ ಆಗಸ್ಟ್ 2011

ಪ್ರಕಟಣೆ

ವಿಷಯ: 2011-12ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ನೀಡಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

2011-12ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಅಲ್ಪಸಂಖ್ಯಾತರ ಇಲಾಖೆಯ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ ಕೊಡಿಸಿ ಶಿಷ್ಯ ವೇತನ ಮಂಜೂರು ಮಾಡಲು ಮತೀಯ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು, ಸಿಖ್ ಜನಾಂಗಕ್ಕೆ ಸೇರಿದ ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ: 30.6.2011ರಲ್ಲಿ ಪ್ರಕಟಣೆ ಹೊರಡಿಸಿ, ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 30.7.2011ನ್ನು ಕೊನೆಯ ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ ಸಾಕಷ್ಟು ಅರ್ಜಿಗಳು ಬಾರದ ಪ್ರಯುಕ್ತ ಅರ್ಜಿ ಸಲ್ಲಿಸುವ ದಿನಾಂಕವನ್ನು 26.9.2011ರವರೆಗೆ ವಿಸ್ತರಿಸಲಾಗಿದೆ. ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದ ಅರ್ಹ ಕಾನೂನು ಪದವೀಧರರು ನಿಗದಿತ ನಮೂನೆಯಲ್ಲಿ ಪೂರ್ಣವಾಗಿ ಭರ್ತಿ ಮಾಡಿರುವ ಅರ್ಜಿಗಳನ್ನು ದಿನಾಂಕ: 26.9.2011ರ ಸಾಯಂಕಾಲ 5.30 ಗಂಟೆಯೊಳಗೆ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅರ್ಜಿ ಸಲ್ಲಿಸಬಹುದು.

ಅರ್ಹತೆ, ನಿಯಮಗಳು ಹಾಗೂ ತರಬೇತಿ ವಿವರಗಳು

1. ತರಬೇತಿಯನ್ನು ಮೈಸೂರು ಜಿಲ್ಲೆಯಲ್ಲಿಯೇ ನೀಡಲಾಗುವುದು.
2. ಮೈಸೂರು ಜಿಲ್ಲೆಯಿಂದ ಇಬ್ಬರು ಅಲ್ಪಸಂಖ್ಯಾತರ ಅಭ್ಯರ್ಥಿಗಳನ್ನು ಮಾತ್ರ ತರಬೇತಿಗೆ ಆಯ್ಕೆ ಮಾಡಲಾಗುವುದು.
3. ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ: ಸಕಇ 205 ಬಿಎಂಎಸ್ 1999, ದಿನಾಂಕ: 7.10.1999ರ ಪ್ರಕಾರ ಮತೀಯ ಅಲ್ಪಸಂಖ್ಯಾತರ ಸಮುದಾಯಗಳು ಅಂದರೆ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧರು ಮತ್ತು ಸಿಖ್ ಜಾತಿಗೆ ಸೇರಿರಬೇಕು.
4. ಮೈಸೂರು ಜಿಲ್ಲೆಯಲ್ಲಿ ವಾಸ ಮಾಡುತ್ತಿರುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಮಾತ್ರ ಅರ್ಜಿ ಹಾಕಿಕೊಳ್ಳಲು ಅರ್ಹರಾಗಿರುತ್ತಾರೆ.
5. ತರಬೇತಿ ಅವಧಿಯು 4 ವರ್ಷವಾಗಿದ್ದು, ತರಬೇತಿ ಅವಧಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ತಿಂಗಳು ರೂ. 1,000-00 (ರೂಪಾಯಿ ಒಂದು ಸಾವಿರ ಮಾತ್ರ)ಗಳ ತರಬೇತಿ ಭತ್ಯೆಯನ್ನು ಮಂಜೂರು ಮಾಡಲಾಗುವುದು.
6. ಅಭ್ಯರ್ಥಿಯು ಅರ್ಜಿ ಜೊತೆಗೆ ಜಾತಿ/ಆದಾಯ ದೃಢೀಕರಣ ಪತ್ರ, ವಯಸ್ಸನ್ನು ದೃಢೀಕರಿಸಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಕಾನೂನು ಪದವಿಯಲ್ಲಿ ಪಡೆದ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಬೇಕು.
7. ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಲಾಗುವುದು.

8. ಅಭ್ಯರ್ಥಿಯ ವಯಸ್ಸು 30 ವರ್ಷ ಮೀರಿರಬಾರದು ಹಾಗೂ ಕುಟುಂಬದ ವಾರ್ಷಿಕ ಆದಾಯ ರೂ. 15,000/–ಗಳನ್ನು ಮೀರಿರಬಾರದು.

9. ಆಯ್ಕೆ ಸಮಿತಿಯಲ್ಲಿ ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಚಾಲ್ತಿ ನಿಯಮದ ಪ್ರಕಾರ ಆಯ್ಕೆ ಮಾಡಲಾಗುವುದು.

10. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಸರ್ಕಾರಿ ವಕೀಲರು, ಜಿಲ್ಲಾ ಸರ್ಕಾರಿ ನ್ಯಾಯವಾದಿ (ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್) ಅಥವಾ ಆ ಕ್ಷೇತ್ರದಲ್ಲಿ 20 ವರ್ಷಗಳಿಗಿಂತ ಕಡಿಮೆ ಇಲ್ಲದ ಅನುಭವ ಇರುವ ಯಾವುದೇ ನ್ಯಾಯವಾದಿಗಳ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.

11. ತರಬೇತಿಗೆ ಅರ್ಜಿಗಳನ್ನು ಹಾಕಲಿಚ್ಛಿಸುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳು ದಿನಾಂಕ: 26.9.2011ಕ್ಕೆ ಒಂದೆ ಎರಡು ವರ್ಷಗಳ ಅವಧಿಯೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

12. ಬಾರ್ ಕೌನ್ಸಿಲ್‌ನಲ್ಲಿ ನೊಂದಣಿ ಮಾಡಿಸಿರಬೇಕು.

13. ತರಬೇತಿ ಅವಧಿ 4 ವರ್ಷಗಳಾಗಿದ್ದು, ತರಬೇತಿಯನ್ನು ಮಧ್ಯದಲ್ಲಿ ಬಿಡಬಾರದು. ತರಬೇತಿ ಅವಧಿಯಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸೇವೆಗೆ ಸೇರಿದ್ದಲ್ಲಿ ಶಿಷ್ಯವೇತನ ಮಂಜೂರಾತಿ ನಿಲ್ಲಿಸಲಾಗುವುದು.

14. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ಸಮಿತಿಯು ಸೂಚಿಸಿದ ಮಾಹಿತಿಗಳನ್ನು ಹಾಗೂ ಕಾಲಕಾಲಕ್ಕೆ ಸಲ್ಲಿಸಬೇಕಾದ ವಿವರಗಳನ್ನು ಹಾಗೂ ಇತರೆ ಅವಶ್ಯಕ ಮಾಹಿತಿಗಳನ್ನು ಒದಗಿಸಬೇಕು.

15. ಅಭ್ಯರ್ಥಿಗಳು ಸುಳ್ಳು ಮಾಹಿತಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದಲ್ಲದೆ ಅವರಿಗೆ ನೀಡಲಾದ ತರಬೇತಿ ಭತ್ಯೆಯನ್ನು ಶೇ. 10ರಷ್ಟು ಬಡ್ಡಿಯೊಂದಿಗೆ ವಸೂಲು ಮಾಡಲಾಗುವುದು. ಯಾವುದೇ ಹಣ ಬಾಕಿ ಉಳಿದಲ್ಲಿ ಭೂಕಂದಾಯ ಬಾಕಿ ವಸೂಲಿ ಮಾಡುವ ರೀತಿಯಲ್ಲಿ ಇಂತಹ ಹಣವನ್ನು ವಸೂಲಿ ಮಾಡಲಾಗುವುದು.

16. ಅರ್ಹ ಮತ್ತು ಆಸಕ್ತಿಯುಳ್ಳ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಅರ್ಜಿಯನ್ನು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ನಂ. 603, ಶ್ರೀ ಆದಿಶಕ್ತಿ ಕಾಂಪ್ಲೆಕ್ಸ್, ಪಿ ಅಂಡ್ ಟಿ ಬ್ಲಾಕ್, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರುರವರಿಂದ ಪಡೆದು 26.9.2011ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸತಕ್ಕದ್ದು, ಇತರ ವಿವರಗಳಿಗೆ ಮತ್ತು ಅರ್ಜಿ ನಮೂನೆಗಳಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳವರ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಲಾಗಿದೆ. ದೂರವಾಣಿ ಸಂಖ್ಯೆ: 2342917

ಜಿಲ್ಲಾ ಅಧಿಕಾರಿಗಳು

ಪಿ.ಆರ್. 966

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಮೈಸೂರು ಜಿಲ್ಲೆ, ಮೈಸೂರು

COMMERCIAL TAX DEPARTMENT

Proceedings of the Commissioner of Commercial Taxes, (Karnataka), Bangalore-Clarification under Section 59(4) of the Karnataka Value Added Tax, Act, 2003

Sub: KVAT Act, 2003-Clarification under Section 59(4) on deduction of tax at source for works contract-reg.

Ref: Application dated 13-7-2011 of Sri K.S. Nagarajaiah, Civil Engineer & Class I Contractor, Kodihalli-562 119, Kanakapura Taluk, Ramanagar District TIN-29880128635.

The registered dealer under the Act, Sri K.S. Nagarajaiah, Contractor, Kodihalli, Kanakapura Taluk, has sought clarification regarding the deduction of Karnataka Value Added Tax at source in the case of works contract.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act if he considers it necessary or expedient so to do for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No. CLR CR 90/11-12, Dated 10-10-2011

It is clarified that "VAT at the rate of 4% has to be ducted at source on the total consideration as per Notification No. FD 116 CSL 2006 (13) dated 31-3-2006, if the contractor is registered under the scheme of Composition of tax under Section 15 of the KVAT Act, 2003".

PRADEEP SINGH KHAROLA,
Commissioner of Commercial Taxes,
(Karnataka), Bangalore

P.R. 1153

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ತಿದ್ದುಪಡಿ ಆದೇಶ

ಸಂ: ಕೆಎಸ್ಎ:ಸಿಆರ್-112/10-11, ದಿನಾಂಕ 15-10-2011

ಸಂ. ಕೆಎಸ್ಎ:ಸಿಆರ್:112:10-11, ದಿನಾಂಕ 19-3-2011ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಈ ಅಂತಿಮ ಅಧಿಸೂಚನೆಯ ಷೆಡ್ಯೂಲ್‌ನ ಕಾಲಂ 3ರಲ್ಲಿ ಸರ್ವೆ ನಂ. 69 ಎಂದು ತಪ್ಪಾಗಿ ನಮೂದಾಗಿದ್ದು, ಸರ್ವೆ ನಂ. 69ಕ್ಕೆ ಬದಲಾಗಿ ಸರ್ವೆ ನಂ. 68 ಎಂದು ಓದಿಕೊಳ್ಳುವುದು.

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

ಪಿ.ಆರ್. 1160

ಕಂದಾಯ ಇಲಾಖೆ

ಸೇರ್ಪಡೆ ಅಧಿಸೂಚನೆ

ಸಂ: ಕಂಇ 362 ಬಿಎಂಎಂ 2011, ಬೆಂಗಳೂರು, ದಿನಾಂಕ 13-10-2011

ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 366 ಬಿಎಂಎಂ 2008, ದಿನಾಂಕ 14-7-2011ರಂದು ರಾಜ್ಯ ಮಟ್ಟದ ಶಿರಸ್ತೆದಾರ್/ಉಪತಹಸೀಲ್ದಾರ್ ಕ್ರೋಡೀಕೃತ ಜೇಷ್ಠತಾ ಪಟ್ಟಿಯಲ್ಲಿ ಈ ಕೆಳಕಂಡ ಶಿರಸ್ತೇದಾರ್/ಉಪತಹಸೀಲ್ದಾರ್ ಹೆಸರುಗಳು ಕಣ್ತಪ್ಪಿನಿಂದ ಬಿಟ್ಟು ಹೋಗಿರುವ ಬಗ್ಗೆ ಅನೇಕ ಮನವಿಗಳು ಸರ್ಕಾರಕ್ಕೆ ಬಂದಿದ್ದು, ಅವುಗಳನ್ನು ಆಯಾ ವಿಭಾಗದ ಶಿರಸ್ತೇದಾರ್ (ಸಿಬ್ಬಂದಿ) ಇವರು ಸರ್ಕಾರದ ಆದೇಶದಂತೆ ಪರಿಶೀಲಿಸಿ, ಕೆಲವು ಹೆಸರುಗಳು ಬಿಟ್ಟು ಹೋಗಿರುವುದನ್ನು ಗಮನಿಸಿ, ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಸದರಿ ವಿವರಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಕ್ರೋಢೀಕೃತ ರಾಜ್ಯ ಮಟ್ಟದ ಶಿರಸ್ತೇದಾರ್/ಉಪತಹಸೀಲ್ದಾರ್ ಜೇಷ್ಠತಾ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಹೆಸರುಗಳನ್ನು ದಿನಾಂಕ 14-7-2011ರ ಜೇಷ್ಠತಾ ಪಟ್ಟಿಯಲ್ಲಿ ಸೂಕ್ತ ಸ್ಥಾನದಲ್ಲಿ ಸೇರ್ಪಡೆ ಮಾಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಕ್ರ ಸಂ.	ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ	ನಿಗದಿಪಡಿಸಲಾದ ಜೇಷ್ಠತಾ ಕ್ರಸಂ.	ವಿಭಾಗ	ಹುಟ್ಟಿದ ದಿನಾಂಕ	ನೌಕರರು ಸೇವೆಗೆ ಸೇರಿದ ದಿನಾಂಕ	ನೀಡಲಾಗಿರುವ ಅರ್ಹತಾ ದಿನಾಂಕ
1	2	3	4	5	6	7
1	ಪಿ.ಬಿ. ಸಟ್ಟಿಗೇರಿ	3763-ಎ	ಬೆಳಗಾಂ	29-3-1939	25-3-1964	18-1-1982
2	ಎನ್.ಪಿ. ಗೋಳಿ	3763-ಬಿ	ಬೆಳಗಾಂ	23-4-1939	25-3-1964	28-1-1982
3	ಜಿ.ಎ. ಖಾಲಿದ್	4743-ಎ	ಬೆಂಗಳೂರು	14-12-1952	07-07-1977	31-5-1989
4	ಸಿ.ಟಿ. ನಾಗರಾಜು	4807-ಎ	ಬೆಂಗಳೂರು	5-11-1947	29-6-1971	31-5-1989
5	ಸಿ.ಹೆಚ್. ಸೂಲಯ್ಯ (ಎಸ್‌ಸಿ)	5424-ಎ	ಬೆಂಗಳೂರು	1-6-1957	16-5-1985	21-10-1995
6	ಎನ್.ಕೆ. ಶಾರದಾಂಬ (ಎಸ್‌ಟಿ)	5162-ಎ	ಮೈಸೂರು	16-4-1960	29-5-1985	24-12-1993
7	ಎಸ್. ಜೂಲೀರಪ್ಪ	5890-ಎ	ಬೆಳಗಾಂ	10-6-1947	2-12-1973	1-1-1998
8	ಎಸ್.ಎಂ. ಗರಡೆ	6115-ಎ	ಬೆಳಗಾಂ	20-7-1952	9-3-1976	5-2-2000
9	ಎಸ್.ವೈ. ಕಲಾರಕೊಪ್ಪ	6115-ಬಿ	ಬೆಳಗಾಂ	10-7-1958	11-9-1979	29-6-2000
10	ಎ.ಆರ್. ಶೇಟ್	6115-ಸಿ	ಬೆಳಗಾಂ	1-2-1949	3-6-1974	29-6-2000
11	ಎಂ.ಜಿ. ಶೇಟ್	6115-ಡಿ	ಬೆಳಗಾಂ	9-9-1950	4-7-1974	29-6-2000

ಕ್ರ ಸಂ.	ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ	ನಿಗದಿಪಡಿಸಲಾದ ಜೇಷ್ಠತಾ ಕ್ರ.ಸಂ.	ವಿಭಾಗ	ಹುಟ್ಟಿದ ದಿನಾಂಕ	ನೌಕರರು ಸೇವೆಗೆ ಸೇರಿದ ದಿನಾಂಕ	ನೀಡಲಾಗಿರುವ ಅರ್ಹತಾ ದಿನಾಂಕ
12	ಗಜಾನನ ಎಂ. ನಾಯಕ್	6115-ಇ	ಬೆಳಗಾಂ	11-2-1948	4-7-1974	29-6-2000
13	ಡಿ.ಹೆಚ್. ನಾಯಕ್	6115-ಎಫ್	ಬೆಳಗಾಂ	1-4-1949	1-7-1974	29-6-2000
14	ಎ.ಯು. ಕುಂಬಾರ್	6115-ಜಿ	ಬೆಳಗಾಂ	10-2-1945	27-6-1975	29-6-2000
15	ಪಿ.ಡಿ. ಆಚಾರಿ	6115-ಹೆಚ್	ಬೆಳಗಾಂ	28-5-1946	18-6-1975	29-6-2000
16	ಡಿ.ಎಸ್. ಗೊಜನೂರ್	6115-ಐ	ಬೆಳಗಾಂ	4-10-1943	26-5-1965	29-6-2000
17	ಎಸ್.ವಿ. ಹೆಬ್ಬಾಳ್ಕರ್	6115-ಜೆ	ಬೆಳಗಾಂ	8-2-1950	22-7-1973	29-6-2000
18	ಡಿ.ಎ. ಕುಲಕರ್ಣಿ (ಬೈಲಹೊಂಗಲ)	6115-ಕೆ	ಬೆಳಗಾಂ	5-4-1950	22-7-1973	29-6-2000
19	ಝುಹೀರುಲ್ ಹಸನ್	6115-ಎಲ್	ಬೆಳಗಾಂ	6-3-1945	7-7-1973	29-6-2000
20	ಎಸ್.ಹೆಚ್. ಫಿರ್ಜಾದೆ	6115-ಎಂ	ಬೆಳಗಾಂ	23-3-1951	18-9-1975	29-6-2000
21	ಸುಭಾಶ್ ಬ ಬಂಟ್ (ಪ.ಜಾ)	6115-ಎನ್	ಬೆಳಗಾಂ	15-9-1950	3-3-1977	29-6-2000
22	ಎಂ.ಡಿ. ಸೋಮಕ್ಕಳವರ (ಪ.ಜಾ)	6115-ಓ	ಬೆಳಗಾಂ	25-5-1953	12-9-1977	29-6-2000
23	ಮೀರಾ ಬಿ ಅಂಕೋಲೇಕರ್ (ಪ.ಜಾ)	6115-ಪಿ	ಬೆಳಗಾಂ	12-4-1954	2-3-1977	29-6-2000
24	ಐ.ಎಸ್. ಕುಲಕರ್ಣಿ	6115-ಕ್ಯೂ	ಬೆಳಗಾಂ	21-6-1952	28-12-1975	29-6-2000
25	ಎ.ಬಿ. ರಾವುಳ್	6115-ಆರ್	ಬೆಳಗಾಂ	29-8-1952	30-12-1975	29-6-2000
26	ಜಿ.ಟಿ. ಪ್ರಸಾದ್	6115-ಎಸ್	ಬೆಳಗಾಂ	13-6-1946	2-1-1965	29-6-2000
27	ಆರ್.ಬಿ. ಸಜ್ಜನ್	6115-ಟಿ	ಬೆಳಗಾಂ	1-1-1954	13-8-1982	29-6-2000
28	ವಿ.ಜಿ. ಹೆಗಡೆಕರ್	6115-ಯು	ಬೆಳಗಾಂ	1-6-1943	1-9-1966	29-6-2000
29	ಆರ್.ಕೆ. ಕಾಮತ್	6115-ವಿ	ಬೆಳಗಾಂ	30-7-1942	1-10-1966	29-6-2000
30	ಪಿ.ಎಸ್. ರೋಡ್ರಿಕ್ಸ್	6115-ಡಬ್ಲ್ಯೂ	ಬೆಳಗಾಂ	26-12-1947	1-4-1968	29-6-2000
31	ಕೆ.ಆರ್. ಕಲ್ಲುಗಟ್ಕರ್	6115-ಎಕ್ಸ್	ಬೆಳಗಾಂ	26-4-1946	19-2-1969	29-6-2000
32	ಎಂ.ಪಿ. ಗೋನ್ಸಾಲಿಸ್	6115-ವೈ	ಬೆಳಗಾಂ	16-3-1944	21-9-1969	29-6-2000
33	ಓಲ್ಡಾಮಾಡ್ತಾ	6115-ಜೆಡ್	ಬೆಳಗಾಂ	15-6-1946	9-2-1970	29-6-2000
34	ಎಸ್.ಎಂ. ಭಂಡಾರಿ	6115-ಎಎ	ಬೆಳಗಾಂ	1-12-1947	1-2-1970	. 9-6-2000
35	ಎನ್.ಜಿ. ಲೋಕರೆ	6115-ಎಬಿ	ಬೆಳಗಾಂ	1-8-1948	30-8-1971	29-6-2000
36	ವಿ.ವೈ. ಕೊವಾಳೇಕರ್	6115-ಎಸಿ	ಬೆಳಗಾಂ	6-3-1948	20-8-1971	29-6-2000
37	ಎಸ್.ಎನ್. ನಾಯಕ್ (ಕಾರವಾರ)	6115-ಎಡಿ	ಬೆಳಗಾಂ	9-2-1946	30-8-1971	29-6-2000
38	ಎಂ.ಕೆ. ಕಾಮತ್	6115-ಎಇ	ಬೆಳಗಾಂ	8-1-1952	15-6-1973	29-6-2000
39	ಮಾಲತಿ ಎಂ. ಮೈತ್ರಿ	6115-ಎಎಫ್	ಬೆಳಗಾಂ	26-12-19[illegible]5	7-8-1971	29-6-2000

ಕ್ರ ಸಂ.	ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ	ನಿಗದಿಪಡಿಸಲಾದ ಜೇಷ್ಠತಾ ಕ್ರಸಂ.	ವಿಭಾಗ	ಹುಟ್ಟಿದ ದಿನಾಂಕ	ನೌಕರರು ಸೇವೆಗೆ ಸೇರಿದ ದಿನಾಂಕ	ನೀಡಲಾಗಿರುವ ಅರ್ಹತಾ ದಿನಾಂಕ
40	ರಜನಿ ಶೆಟ್ಟಿ	6115–ಎಜಿ	ಬೆಳಗಾಂ	3–10–1948	27–7–1981	29–6–2000
41	ಎ.ಜಿ. ರಾಣೆ	6115–ಎಹೆಚ್	ಬೆಳಗಾಂ	3–11–1947	30–8–1971	29–6–2000
42	ಎಂ.ಜಿ. ಪಾಟೀಲ್	6630–ಎ	ಬೆಳಗಾಂ	12–10–1953	13–9–1977	19–1–2002

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಗೀತಾ ರಮೇಶ್,

ಪಿ.ಆರ್. 1165

ಸರ್ಕಾರದ ಜಂಟಿ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು, ಭೂಕಂ ಮತ್ತು ಭೂಮಂ)

ನಗರಾಭಿವೃದಿ ಇಲಾಖೆ

ಅಧಿಸೂಚನೆ

ಸಂ: ನಅಇ 971 ಬೆಂಭೂಸ್ವಾ 2010, ಬೆಂಗಳೂರು, ದಿನಾಂಕ 20–7–2011

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಗಿಡದಕೋನೇನಹಳ್ಳಿ ಗ್ರಾಮದ ಸರ್ವೆ ನಂ. 14/3ರಲ್ಲಿನ 03 ಎಕರೆ 09 ಗುಂಟೆ ಜಮೀನನ್ನು ಭೂಸ್ವಾಧೀನ ಕಾಯ್ದೆ ಕಲಂ 48(1)ರನ್ವಯ ಭೂಸ್ವಾಧೀನದಿಂದ ಕೈಬಿಟ್ಟು ಅಧಿಸೂಚನೆ ಸಂಖ್ಯೆ: UDD 442 ಎಂಎನ್‌ಎಕ್ಸ್ 2009, ದಿನಾಂಕ 7–4–2010ರಲ್ಲಿ ಹೊರಡಿಸಲಾಗಿದ್ದ ಆದೇಶವನ್ನು ಪುನರ್ ಪರಿಶೀಲಿಸಿ, ಈ ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಆದೇಶವನ್ನು ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ

ಪಿ.ಆರ್. 1166

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

IN THE COURT OF COMMISSIONER FOR WORKMEN'S COMPENSATION, BIDAR

No. LOB/WCA/Cr-F 50/2011

Applicants:-

1. Lalita W/o Sharnbasappa Sadananda, Age 35 yrs, Occupation: Household R/o Shahpur Locality Basava Kalyan District, Bidar

V/S

Respondents:-

1. Kale Abdul Gafur S/o Mohammed sab, Age: Major, Occup: Business, R/o Gujjoti Tq, Umarga District Osmanabad
2. The Manager Sri Ram General Insurance Co. Ltd., Bangalore

PROCLAIMATION

Smt. Lalita W/o Sharnabasappa Sadananda, R/o Shahpur Locality Basawa Kalyan District, Bidar have/has filed application in this Court claiming compensation stating that Late: Sharnbasappa Sadananda was working as Driver under the Respondent No. I he met with an accident arising out of and during the course of employment as a result he died on 21-2-2011.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no application on objections are received within the specified date the court will proceeded further in the matter.

Commissioner for Workmen's

P.R. 1170

Compensation, Bidar

ನಗರಸಭಾ ಕಾರ್ಯಾಲಯ, ಚಿತ್ರದುರ್ಗ

ಅಧಿಸೂಚನೆ

ಸಂ: ನಸಚಿ:ಮಾಹಳ:ಸಿಆರ್:70:2011–12, ದಿನಾಂಕ 19–9–2011

ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 5(1)ರ ಮೇರೆಗೆ ಅರ್ಜಿದಾರರಿಗೆ ಸಕಾಲಕ್ಕೆ ಹಾಗೂ ನಿಗದಿತ ಅವಧಿಯೊಳಗೆ ಮಾಹಿತಿ ನೀಡಲು ಅನುಕೂಲಕ್ಕಾಗಿ ಸದರಿ ಅಧಿನಿಯಮದ ಮೇರೆಗೆ ಈ ಕೆಳಕಂಡ ಚಿತ್ರದುರ್ಗ ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯಸ್ಥರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ನೇಮಿಸಲಾಗಿರುತ್ತದೆ.

ಕ್ರ ಸಂ.	ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು/ಹುದ್ದೆ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹೆಸರು/ಹುದ್ದೆ	ಕಾರ್ಯವ್ಯಾಪ್ತಿ
1	ಶ್ರೀ ಎನ್. ನರಸಿಂಹರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು	ಶ್ರೀ ರಾಜಭಕ್ಷಕಿತ್ತೂರ್, ಸಹಾಯಕ ಅಭಿಯಂತರರು	ತಾಂತ್ರಿಕ ಶಾಖೆಗೆ ಸಂಬಂಧಿಸಿದ ವಿಷಯಗಳು
2	ಶ್ರೀ ಎನ್. ನಿಸಾರ್ ಅಹ್ಮದ್, ವ್ಯವಸ್ಥಾಪಕರು	ಶ್ರೀ ಹೆಚ್.ಆರ್. ರಾಜೇಂದ್ರ, ಸಿಬ್ಬಂದಿ ಶಾಖೆಯ ವಿಷಯ ನಿರ್ವಾಹಕರು	ಆಡಳಿತ ಶಾಖೆಗೆ ಸಂಬಂಧಿಸಿದ ವಿಷಯಗಳು
3	ಶ್ರೀಮತಿ ರುಕ್ಮಿಣಿ, ಕಂದಾಯ ಅಧಿಕಾರಿ	ಶ್ರೀ ನಾಸೀರ್‌ಬಾಷ, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು	ಕಂದಾಯ ಶಾಖೆಗೆ ಸಂಬಂಧಿಸಿದ ವಿಷಯಗಳು
4	ಕು: ಸ್ನೇಹ, ಪರಿಸರ ಅಭಿಯಂತರರು	ಶ್ರೀ ಎ. ಬಾಬುರೆಡ್ಡಿ, ಕಿರಿಯ ಆರೋಗ್ಯ ನಿರೀಕ್ಷಕರು	ಆರೋಗ್ಯ ಶಾಖೆಗೆ ಸಂಬಂಧಿಸಿದ ವಿಷಯಗಳು
5	ಶ್ರೀ ವಿಜಯ, ಲೆಕ್ಕ ಅಧೀಕ್ಷಕರು	ಶ್ರೀ ಮಹಬೂಬ್ ಬಾಷ, ಅಕೌಂಟೆಂಟ್	ಲೆಕ್ಕ ಶಾಖೆಗೆ ಸಂಬಂಧಿಸಿದ ವಿಷಯಗಳು
6	ಶ್ರೀ ಜೆ.ಟಿ. ಹನುಮಂತರಾಜು, ಕಮ್ಯುನಿಟಿ ಆಫೇರ್ಸ್ ಆಫೀಸರ್	ಕು: ಮಂಜುಳಾ ಬಿ.ಆರ್. ಕಮ್ಯುನಿಟಿ ಆರ್ಗನೈಸರ್	ಎಸ್.ಜೆ.ಎಸ್.ಆರ್.ವೈ. ಶಾಖೆಗೆ ಸಂಬಂಧಿಸಿದ ವಿಷಯಗಳು

ಎಸ್. ವಿಜಯಕುಮಾರ್

ಪಿ.ಆರ್. 1038

ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪ ವಿಭಾಗ–1, ಬಳ್ಳಾರಿ

ಸಂ: ಕಾಅಬ–1/ಕಾನಪ/ಸಿಆರ್–59/2011/1013, ದಿನಾಂಕ 22–9–11

ಅರ್ಜಿದಾರರು:

1) ಶ್ರೀಮತಿ ರಮೀಜ ಬೀ ಗಂಡ ದಿ: ಶೇಕ್ಷವಲಿ @ ವಲಿ, ವರ್ಷ 45, ಮನೆ ಕೆಲಸ, ವಾಸ: ಬಿಸಲಹಳ್ಳಿ ಗ್ರಾಮ ಬಳ್ಳಾರಿ ತಾ. ಜಿಲ್ಲೆ

ವಿರುದ್ಧ

ಪ್ರತಿವಾದಿಗಳು:

1) ಶ್ರೀಮತಿ ಜಮೀಲ ಅಹಮದ್ ಖಾನ್ ತಂದೆ ಸಿ. ಅಬ್ಬಾಸ್ ಖಾನ್ ಮಿನಿ ವ್ಯಾನ್ ಮಾಲೀಕರು ನಂ. ಎಪಿ–02/ಎಬಿ–0178 ವಾಸ ಮನೆ ನಂ. 1–4–535/2, ಶಾಂತಿ ನಗರ ಬಳ್ಳಾರಿ ರಸ್ತೆ, ರಾಯದುರ್ಗ, ಅನಂತಪುರ ಜಿಲ್ಲೆ

2) ವ್ಯವಸ್ಥಾಪಕರು, ನ್ಯಾಷನಲ್ ಇನ್ಸೂರೆನ್ಸ್ ಕಂ. ಬಳ್ಳಾರಿ

ಪ್ರಕಟಣೆ

ಶ್ರೀಮತಿ ರಮೀಜ ಬೀ ಇವರು ಮೃತನ ಹೆಂಡತಿಯಾಗಿದ್ದು, ಮೃತ ದಿ. ಶೇಕ್ಷವಲಿ @ ವಲಿ, ಇವರು ಪ್ರತಿವಾದಿಯವರ ಸಂಸ್ಥೆಯಲ್ಲಿ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದಾಗ ವಾಹನ ಅಪಘಾತವಾಗಿರುವುದರಿಂದ ತೀವ್ರ ಗಾಯಗಳಿಗೀಡಾಗಿ ದಿನಾಂಕ 17–6–2011ರಂದು ಮೃತಪಟ್ಟಿದ್ದಾನೆಂದು ತಿಳಿಸಿ ತಾವು ಮೃತನ ವಾರಸುದಾರರು ನಷ್ಟ ಪರಿಹಾರ ಕೋರಿ ದಾವಾ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಸಾರ್ವಜನಿಕರಿಗೂ ಹಾಗೂ ಸಂಬಂಧಿಕರಿಗೂ ತಿಳಿಯಪಡಿಸುವುದೇನೆಂದರೆ ಮೃತನ ವಾರಸುದಾರರು ಎಂದು ಪರಿಗಣಿಸಬೇಕೆಂದು ಬೇರೆ ಯಾರಾದರೂ ಕೋರುವುದಾದರೆ ಅಂಥವರು ಈ ಪ್ರಕಟಣೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ಹೊರ ಮುದ್ರಣಾಲಯ, ಬೆಂಗಳೂರು ಹಾಗೂ ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ತಿಳಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಹೆಚ್. ಗೋಪಾಲಗೌಡ,

ಪಿ.ಆರ್. 1039

ಕಾರ್ಮಿಕಾಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಬಳ್ಳಾರಿ ಉಪ ವಿಭಾಗ–1, ಬಳ್ಳಾರಿ

ಖಜಾನೆ ನಿರ್ದೇಶಕರ ಕಛೇರಿ, ಪೋಡಿಯಂಬ್ಲಾಕ್, ವಿ.ವಿ. ಗೋಪುರ, ಬೆಂಗಳೂರು.

ಅಧಿಸೂಚನೆ

ಸಂಖ್ಯೆ: ಖನಿ/ಸಿಬ್ಬಂದಿ (5) ಸಿಆರ್/15/2011-12, ಬೆಂಗಳೂರು, ದಿನಾಂಕ: 26-9-2011.

ಖಜಾನೆ ಇಲಾಖೆಯ ಈ ಕೆಳಕಂಡ ಮುಖ್ಯ ಲೆಕ್ಕಿಗರುಗಳಿಗೆ ರೂ. 11400-300-12300-350-14400-400-16800-450-19500-525-21600 ವೇತನ ಶ್ರೇಣಿಯ ಸಹಾಯಕ ಖಜಾನಾಧಿಕಾರಿ/ ಪತ್ರಾಂಕಿತ ಉಪ ಖಜಾನಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಿಗೆ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕ್ರ. ಸಂ.	ಹೆಸರು ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ. ಶ್ರೀ/ಶ್ರೀಮತಿ	ಬಡ್ತಿಯ ನಂತರ ನಿಯುಕ್ತಿಗೊಳಿಸಿರುವ ಸ್ಥಳ
1.	ಎಸ್.ಕೆ. ಹಿರೇಕಟ್ಟು, ಮುಖ್ಯಲೆಕ್ಕಿಗರು, ಉಪ ಖಜಾನೆ, ಮುಂಡರಗಿ.	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ ಗೋಕಾಕ್
2.	ಕೆ. ನಾಗರಾಜ, ಮುಖ್ಯಲೆಕ್ಕಿಗರು, ಉಪ ಖಜಾನೆ, ಪಿರಿಯಾಪಟ್ಟಣ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ ಪೊನ್ನಂಪೇಟೆ
3.	ಕೆ. ಮಾದಪ್ಪ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಉಡುಪಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ ಹಳಿಯಾಳ
4.	ಪಿ.ಪಿ. ಕುಂಬಾರ್, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಹುಬ್ಬಳ್ಳಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ ಸವದತ್ತಿ
5.	ಎಂ.ಎಸ್. ಹೊಸಮನಿ, ಲೆಕ್ಕ ಅಧೀಕ್ಷಕರು, ತಾಲ್ಲೂಕ್ ಪಂಚಾಯತ್, ಹಳಿಯಾಳ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಕುಂದಗೋಳ
6.	ಇಕ್ಬಾಲ್ ಅಹಮದ್, ಸಹಾಯಕ ಲೆಕ್ಕಾಧಿಕಾರಿ, (ಸ್ವಪ್ರ), ತಾಲ್ಲೂಕ್ ಪಂಚಾಯತ್, ಸಿರುಗುಪ್ಪ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಸಿರುಗುಪ್ಪ
7.	ಕೆ.ಎಂ. ಧನಲಕ್ಷ್ಮಿ, ಸಹಾಯಕ ಲೆಕ್ಕಾಧಿಕಾರಿ, (ಸ್ವಪ್ರ) ತಾಲ್ಲೂಕ್ ಪಂಚಾಯತ್, ಆನೇಕಲ್	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಆನೇಕಲ್
8.	ಭೀಮಪ್ಪ ಎಂ. ಮಡಿವಾಳ, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವಪ್ರ), ಉಪ ಖಜಾನೆ, ಬೀಳಗಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ ಬೀಳಗಿ
9.	ಪಿ. ಶ್ರೀನಿವಾಸರಾವ್, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವಪ್ರ), ಉಪ ಖಜಾನೆ, ಲಿಂಗಸುಗೂರು	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಲಿಂಗಸುಗೂರು
10.	ಮಜೀದ್ ಅಹಮದ್ ಖಾನ್, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವಪ್ರ), ಉಪ ಖಜಾನೆ, ಔರಾದ್	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಔರಾದ್
11.	ಗಿರಿಯಪ್ಪ ಹಂಚಿನಾಳ, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವಪ್ರ) ಉಪ ಖಜಾನೆ, ಚಿತ್ತಾಪುರ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಚಿತ್ತಾಪುರ
12.	ಹೆಚ್.ಟಿ. ಶ್ರೀಕಂಠ, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವಪ್ರ) ಉಪ ಖಜಾನೆ, ಕೆ.ಆರ್. ಪುರಂ, ಬೆಂಗಳೂರು (ಪೂರ್ವ).	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಕೆ.ಆರ್. ಪುರಂ, ಬೆಂಗಳೂರು (ಪೂರ್ವ).
13.	ಎಸ್.ಆರ್. ಶಿವಮೂರ್ತಿ, ಸಹಾಯಕ ಖಜಾನಾಧಿಕಾರಿ, (ಸ್ವಪ್ರ) ಖಜಾನೆ ನಿರ್ದೇಶನಾಲಯ, ಬೆಂಗಳೂರು	ಸಹಾಯಕ ಖಜಾನಾಧಿಕಾರಿ, ಖಜಾನೆ ನಿರ್ದೇಶನಾಲಯ, ಬೆಂಗಳೂರು
14.	ಎಸ್.ವಿ. ರೇಣುಕ, ಆಯವ್ಯಯ ಅಧಿಕಾರಿ, (ಸ್ವಪ್ರ), ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು	ಆಯವ್ಯಯ ಅಧಿಕಾರಿ, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು.
15.	ಜಿ.ಎನ್. ಸೋಮಶೇಖರಯ್ಯ, ಸಹಾಯಕ ಖಜಾನಾಧಿಕಾರಿ (ಸ್ವಪ್ರ), ಖಜಾನೆ ನಿರ್ದೇಶನಾಲಯ, ಬೆಂಗಳೂರು	ಸಹಾಯಕ ಖಜಾನಾಧಿಕಾರಿ, ಖಜಾನೆ ನಿರ್ದೇಶನಾಲಯ, ಬೆಂಗಳೂರು
16.	ಎಂ. ರಹನಾ ಅಫ್ಸಾರಿ ಬೇಗಂ, ಸಹಾಯಕ ಲೆಕ್ಕಾಧಿಕಾರಿ, (ಸ್ವಪ್ರ), ತಾಲ್ಲೂಕ್ ಪಂಚಾಯತ್, ದೇವನಹಳ್ಳಿ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ದೇವನಹಳ್ಳಿ

ಕ್ರ. ಸಂ.	ಹೆಸರು ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ. ಶ್ರೀ/ಶ್ರೀಮತಿ	ಬಡ್ತಿಯ ನಂತರ ನಿಯುಕ್ತಿಗೊಳಿಸಿರುವ ಸ್ಥಳ
17.	ಜೆ. ಶಾರದಮ್ಮ, ಮುಖ್ಯಲೆಕ್ಕಿಗರು, ಉಪ ಖಜಾನೆ, ಆನೇಕಲ್	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಶಿಡ್ಲಘಟ್ಟ
18.	ಪುಷ್ಪ, ಸಹಾಯಕ ಲೆಕ್ಕಾಧಿಕಾರಿ, (ಸ್ವ.ಪ್ರ), ತಾಲ್ಲೂಕ್ ಪಂಚಾಯತ್, ನೆಲಮಂಗಲ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ನೆಲಮಂಗಲ
19.	ಡಿ. ಮೈಲಾರಪ್ಪ, ಸಹಾಯಕ ಲೆಕ್ಕಾಧಿಕಾರಿ, (ಸ್ವ.ಪ್ರ), ತಾಲ್ಲೂಕ್ ಪಂಚಾಯತ್, ಚಳ್ಳಕೆರೆ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಚಳ್ಳಕೆರೆ.
20.	ಮಹಮದ್ ಚಮ್ನುದ್ದೀನ್, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವ.ಪ್ರ) ಉಪ ಖಜಾನೆ, ಹೊಳಲ್ಕೆರೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಹೊಳಲ್ಕೆರೆ
21.	ಆರ್. ಶ್ರೀನಿವಾಸ್, ಸಹಾಯಕ ಲೆಕ್ಕಾಧಿಕಾರಿ, (ಸ್ವ.ಪ್ರ), ತಾಲ್ಲೂಕ್ ಪಂಚಾಯತ್, ಕುಣಿಗಲ್	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಕುಣಿಗಲ್
22.	ನರಸಿಂಹಮೂರ್ತಿ, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವ.ಪ್ರ) ಉಪ ಖಜಾನೆ, ಮಧುಗಿರಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಮಧುಗಿರಿ
23.	ಎ.ಹೆಚ್. ಶ್ರೀನಿವಾಸ್, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಚಿಕ್ಕಮಗಳೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್ ಬಂಟ್ವಾಳ (ದಿ. 31–10–2011 ಬಿ. ಲಕ್ಷ್ಮಣರವರ ನಿವೃತ್ತಿಯಿಂದ ತೆರವಾಗುವ ಹುದ್ದೆ)
24.	ಶ್ರೀನಿವಾಸ್, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವ.ಪ್ರ) ಉಪ ಖಜಾನೆ, ನರಸಿಂಹರಾಜಪುರ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ನರಸಿಂಹರಾಜಪುರ
25.	ಎಸ್.ಎನ್. ಶೇಷಾದ್ರಿ, ಮುಖ್ಯಲೆಕ್ಕಿಗರು, ಉಪ ಖಜಾನೆ, ಶಿರಾಳಕೊಪ್ಪ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಹೊಸನಗರ
26.	ಮಹ್ಮದ್ ಮೊಹಿಬುಲ್ಲಾ ಖಾನ್, ಸಹಾಯಕ ಲೆಕ್ಕಾಧಿಕಾರಿ, (ಸ್ವ.ಪ್ರ), ತಾಲ್ಲೂಕ್ ಪಂಚಾಯತ್, ತೀರ್ಥಹಳ್ಳಿ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ತೀರ್ಥಹಳ್ಳಿ
27.	ಆರ್. ಬಿಳಿಗಿರಿ ರಂಗಯ್ಯ, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವ.ಪ್ರ) ಉಪ ಖಜಾನೆ, ಕೊಳ್ಳೇಗಾಲ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಕೊಳ್ಳೇಗಾಲ
28.	ಎಸ್.ಹೆಚ್. ವೆಂಕಟೇಶ್, ಪತ್ರಾಂಕಿತ ಉಪ ಖಜಾನಾಧಿಕಾರಿ (ಸ್ವ.ಪ್ರ) ಉಪ ಖಜಾನೆ, ನರಗುಂದ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ನರಗುಂದ
29.	ಎಂ. ಶಿವಲಿಂಗಯ್ಯ, ಸಹಾಯಕ ಲೆಕ್ಕಾಧಿಕಾರಿ, (ಸ್ವ.ಪ್ರ), ತಾಲ್ಲೂಕ್ ಪಂಚಾಯತ್, ಯಳಂದೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಯಳಂದೂರು
30.	ಟಿ.ಆರ್. ಶಂಕರನಾರಾಯಣ, ಉಪ ಪ್ರಾಂಶುಪಾಲರು (ಸ್ವ.ಪ್ರ), ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಮಗಳೂರು	ಉಪ ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಮಗಳೂರು
31.	ಮಹದೇವಪ್ಪ ಹನುಮಂತಪ್ಪ ಕಳ್ಳೇರ, ಮುಖ್ಯಲೆಕ್ಕಿಗರು, ಉಪ ಖಜಾನೆ, ಯಲ್ಬುರ್ಗ	ಸಹಾಯಕ ಖಜಾನಾಧಿಕಾರಿ ಜಿಲ್ಲಾ ಖಜಾನೆ, ಕೊಪ್ಪಳ
32.	ಎ.ಹೆಚ್. ಚಂದ್ರಶೇಖರ್, ಮುಖ್ಯಲೆಕ್ಕಿಗರು, ಉಪ ಖಜಾನೆ, ಮೂಡಿಗೆರೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಬಂಟ್ವಾಳ (ದಿ. 31–10–2011 ಎ. ರಾಮಪ್ರಸಾದ್‌ರವರ ನಿವೃತ್ತಿಯಿಂದ ತೆರವಾಗುವ ಸ್ಥಳ)
33.	ಕುಶಾಲಪ್ಪ ಎಂ.ಪಿ. ಮುಖ್ಯಲೆಕ್ಕಿಗರು, ಉಪ ಖಜಾನೆ, ವಿರಾಜಪೇಟೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ನಾಪೋಕ್ಲು
34.	ಶಿವಶಂಕರ್ ಹೆಚ್.ಎಸ್. ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಶಿವಮೊಗ್ಗ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಭಟ್ಕಳ
35.	ಬಿ. ನಂದೀಶರಾಜೇ ಅರಸ್, ಮುಖ್ಯಲೆಕ್ಕಿಗರು, ಖಜಾನೆ ನಿರ್ದೇಶನಾಲಯ, ಬೆಂಗಳೂರು	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ದೇವದುರ್ಗ

ಕ್ರ. ಸಂ.	ಹೆಸರು ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ. ಶ್ರೀ/ಶ್ರೀಮತಿ	ಬಡ್ತಿಯ ನಂತರ ನಿಯುಕ್ತಿಗೊಳಿಸಿರುವ ಸ್ಥಳ
36.	ಸಿ.ಬಿ. ಪಾಟೀಲ್, ಲೆಕ್ಕ ಅಧೀಕ್ಷಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಮುಂಡಗೋಡ್
37.	ವಿ. ಶ್ರೀನಿವಾಸ ಮೂರ್ತಿ, ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾಸನ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಕಾರ್ಕಳ.
38.	ಎಸ್.ಸಿ. ಬಸವಪ್ರಭು, ಮುಖ್ಯಲೆಕ್ಕಿಗರು, ಉಪ ಖಜಾನೆ, ಕೆ.ಆರ್. ನಗರ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಮಡಿಕೇರಿ.
39.	ವಿ.ಎಸ್. ಶ್ರೀನಿವಾಸಕುಮಾರ್, ಮುಖ್ಯಲೆಕ್ಕಿಗರು, ಸಿಆಸುಇ, ವಿಧಾನಸೌಧ, ಬೆಂಗಳೂರು	ಸಹಾಯಕ ಲೆಕ್ಕಾಧಿಕಾರಿ, ಐ.ಆರ್.ಎಲ್.ಎ. ಶಾಖೆ, ಸಿಆಸುಇ, ವಿಧಾನಸೌಧ, ಬೆಂಗಳೂರು
40.	ಎನ್. ಚನ್ನಮಲ್ಲಿಕಾರ್ಜುನ, ಮುಖ್ಯಲೆಕ್ಕಿಗರು, ಉಪ ಖಜಾನೆ, ಕೊಳ್ಳೇಗಾಲ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಆಲೂರು
41.	ಎಂ.ಬಿ. ಸುಭದ್ರ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಮೈಸೂರು	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಸೋಮವಾರಪೇಟೆ
42.	ಎಂ.ಪಿ. ಶಿವಲಿಂಗಪ್ಪ, ಮುಖ್ಯಲೆಕ್ಕಿಗರು, ಉಪ ಖಜಾನೆ, ಹೆಬ್ರಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಪುತ್ತೂರು.
43.	ಹೆಚ್.ಎಸ್. ಜಯಲಕ್ಷ್ಮೀ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ ಹಾಸನ.	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಆಲೂರು
44.	ಎಸ್.ಕೆ. ಈಶ್ವರಯ್ಯ, ಮುಖ್ಯಲೆಕ್ಕಿಗರು, ಉಪ ಖಜಾನೆ, ಶೃಂಗೇರಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಶೃಂಗೇರಿ
45.	ಆರ್. ಧರ್ಮೇಗೌಡ, ಮುಖ್ಯಲೆಕ್ಕಿಗರು, ಉಪ ಖಜಾನೆ, ಸಕಲೇಶಪುರ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಎನ್.ಆರ್. ಪುರ
46.	ವಿ. ಶ್ರೀನಿವಾಸ, ಮುಖ್ಯಲೆಕ್ಕಿಗರು, ಉಪ ಖಜಾನೆ, ಹೆಗ್ಗಡದೇವನಕೋಟೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ವಿರಾಜಪೇಟೆ
47.	ಸಿದ್ದಪ್ಪಾಚಾರಿ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ ಹಾಸನ	ಸಹಾಯಕ ಖಜಾನಾಧಿಕಾರಿ, ಜಿಲ್ಲಾ ಖಜಾನೆ, ಮಂಗಳೂರು (ಶ್ರೀಮತಿ ಶೋಭಾರಾಣಿಯವರ ನಿವೃತ್ತಿ ಜಾಗಕ್ಕೆ)
48.	ಜಿ.ಎಸ್. ಮಂಜುಳಾಂಬ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಮಂಡ್ಯ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಹೊಳೆನರಸೀಪುರ
49.	ಜೆ.ಕೆ. ಶ್ರೀನಿವಾಸ, ಮುಖ್ಯಲೆಕ್ಕಿಗರು, ಉಪ ಖಜಾನೆ, ಸೋಮವಾರಪೇಟೆ, [illegible]	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಯಲ್ಲಾಪುರ
50.	ಎನ್.ಎಂ. ರಾಮಯ್ಯ, ಮುಖ್ಯಲೆಕ್ಕಿಗರು, ಉಪ ಖಜಾನೆ, ಹುಣಸೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ತರಿಕೆರೆ
51.	ಬಿ.ಓ. ಶಿವಪ್ಪನಾಯಕ್, ಮುಖ್ಯಲೆಕ್ಕಿಗರು, ಉಪ ಖಜಾನೆ, ಹೊಳಲ್ಕೆರೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಸಂಡೂರು
52.	ತುಳಸಮ್ಮ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಚಿಕ್ಕಬಳ್ಳಾಪುರ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಗೌರಿಬಿದನೂರು
53.	ಎಂ.ಎ. ಮೀರಜಮಾದಾರ್, ಮುಖ್ಯಲೆಕ್ಕಿಗರು, ಉಪ ಖಜಾನೆ, ತಾಳೀಕೋಟೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಆಲಮಟ್ಟಿ.
54.	ಎಸ್.ಕೆ. ಕನ್ನಾಳ್, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಬಿಜಾಪುರ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಕಾಗವಾಡ
55.	ಎಂ.ಎಂ. ಪಿಂಜಾರ್, ಲೆಕ್ಕ ಅಧೀಕ್ಷಕರು, ಜಿಲ್ಲಾ ಪಂಚಾಯತ್, ಬೆಳಗಾಂ.	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಸಂಕೇಶ್ವರ. (ದಿ. 31-10-2011 ಎಂ.ಆರ್. ಮಠದ್ ನಿವೃತ್ತಿಯಿಂದ ತೆರವಾಗುವ ಜಾಗಕ್ಕೆ)

ಕ್ರ. ಸಂ.	ಹೆಸರು ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ. ಶ್ರೀ/ಶ್ರೀಮತಿ	ಬಡ್ತಿಯ ನಂತರ ನಿಯುಕ್ತಿಗೊಳಿಸಿರುವ ಸ್ಥಳ
56.	ಎಸ್.ಜಿ. ಕುಂಬಾರ್, ಮುಖ್ಯಲೆಕ್ಕಿಗರು, ಉಪ ಖಜಾನೆ, ಬಾದಾಮಿ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಶಿರಹಟ್ಟಿ
57.	ನಂಜುಂಡೇಗೌಡ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ರಾಮನಗರ	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಹಾಸನ.
58.	ಮಿರ್ಜಾ ಶಫಿ ಹಸನ್, ಮುಖ್ಯಲೆಕ್ಕಿಗರು, ನಗರ ಜಿಲ್ಲಾ ಖಜಾನೆ, ಬೆಂಗಳೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಶ್ರೀನಿವಾಸಪುರ
59.	ಆರ್.ಬಿ. ಚಂದ್ರಶೇಖರಯ್ಯ, ಮುಖ್ಯಲೆಕ್ಕಿಗರು, ಉಪ ಖಜಾನೆ, ತುರುವೇಕೆರೆ	ಸಹಾಯಕ ಖಜಾನಾಧಿಕಾರಿ, ಜಿಲ್ಲಾ ಖಜಾನೆ, ಹಾವೇರಿ.
60.	ಚಿಕ್ಕದುರ್ಗೇಗೌಡ, ಮುಖ್ಯಲೆಕ್ಕಿಗರು, ಖಜಾನೆ ನಿರ್ದೇಶನಾಲಯ, ಬೆಂಗಳೂರು	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಬಾಗೇಪಲ್ಲಿ.
61.	ಪ್ರಭಾ, ಮುಖ್ಯಲೆಕ್ಕಿಗರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಮುಳಬಾಗಿಲು.
62.	ಸಿ.ಜಿ. ಕಲ್ಲಪ್ಪ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ದಾವಣಗೆರೆ	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ದಾಂಡೇಲಿ
63.	ಟಿ.ಎಸ್. ಕೃಷ್ಣಸ್ವಾಮಿ, ಮುಖ್ಯಲೆಕ್ಕಿಗರು, ಖಜಾನೆ ನಿರ್ದೇಶನಾಲಯ, ಬೆಂಗಳೂರು	ಸಹಾಯಕ ಖಜಾನಾಧಿಕಾರಿ ಜಿಲ್ಲಾ ಖಜಾನೆ, ತುಮಕೂರು
64.	ಜಿ.ಕೆ. ಮುಕುಂದರೆಡ್ಡಿ, ಮುಖ್ಯಲೆಕ್ಕಿಗರು, ಜಿಲ್ಲಾ ಖಜಾನೆ, ಚಿತ್ರದುರ್ಗ.	ಪತ್ರಾಂಕಿತ ಉಪ ಖಜಾನಾಧಿಕಾರಿ ಉಪ ಖಜಾನೆ, ಕೂಡ್ಲಿಗಿ
65.	ಸಾವಿತ್ರಿ, ಮುಖ್ಯಲೆಕ್ಕಿಗರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಗುಬ್ಬಿ.
66.	ವೈ.ಕೆ. ನಾಗರಾಜ, ಮುಖ್ಯಲೆಕ್ಕಿಗರು, ಪಿಂಚಣಿ ಪಾವತಿ ಖಜಾನೆ, ಬೆಂಗಳೂರು	ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕ್ ಪಂಚಾಯತ್, ಕೊರಟಗೆರೆ.

ಖಜಾನೆ ನಿರ್ದೇಶಕರು,

ಪಿ.ಆರ್. 1158 ಬೆಂಗಳೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ.

ಸಂಖ್ಯೆ: ಡಿಟಿಸಿಆರ್ : 91(ಪೋಲೀಸ್)/2010-11, ದಿನಾಂಕ : 20-09-2011.

ಉಪಸ್ಥಿತರು : **ಡಾ॥ ವೈ.ಮಂಜುನಾಥ್,** ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು **ವಿರುದ್ಧ** **ಆರೋಪಿ**

ಆರಕ್ಷಕ ನಿರೀಕ್ಷಕರು, ಸುರೇಶ್ ಬಿನ್ ನರಸಪ್ಪ

ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ನಗರ.

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 11-10-2010 ರಂದು ಮಧ್ಯಾಹ್ನ 12-45 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ನಗರ ಇವರು ಸಹ ಸಿಬ್ಬಂದಿಯೊಂದಿಗೆ ಕೆ.ಆರ್.ಎಸ್. ರಸ್ತೆಯಲ್ಲಿ ಗಸ್ತು ನಿರತ ಸಮಯದಲ್ಲಿ ಬಂದ ಖಚಿತ ವರ್ತಮಾನದ ಮೇರೆಗೆ ಮೈಸೂರು ನಗರದ ಕೆ.ಆರ್.ಎಸ್. ರಸ್ತೆ, ಯಾದವಗಿರಿ, ಸಂಕಲ್ಪ ಅಪಾರ್ಟ್‌ಮೆಂಟ್ ಬಳಿ ಕಾಯುತ್ತಿರುವಾಗ್ಗ ವಿಕ್ರಮ್ ಆಸ್ಪತ್ರೆ ಕಡೆಯಿಂದ ಆಕಾಶವಾಣಿ ವೃತ್ತದ ಮೂಲಕ ಕೆ.ಆರ್.ರಸ್ತೆ ಕಡೆಗೆ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನ ಬರುತ್ತಿದ್ದುದನ್ನು ತಡೆದು ನಿಲ್ಲಿಸಿ ಪರಿಶೀಲನೆ ನಡೆಸಲಾಗಿ ಕೆಎ-09/ಇಸಿ-2310 ಟಿವಿಎಸ್ ಎಕ್ಸೆಲ್ ಸೂಪರ್ ವಾಹನದಲ್ಲಿ ಅಕ್ರಮವಾಗಿ 10.800 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಪ್ರಕರಣದ ಆರೋಪಿಯಾದ ಸುರೇಶ್ ಬಿನ್ ನರಸಪ್ಪ ಎಂಬುವವರನ್ನು ದಸ್ತಗಿರಿ ಮಾಡಿ, ಠಾಣಾ

ಮೊಕದ್ದಮೆ ಸಂಖ್ಯೆ : 71/2010 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ **32, 34**ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ : 14-10-2010 ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 25-10-2010ರಂದು ಮೈಸೂರು ವಲಯ -2 ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ: 11-10-2010 ರಂದು ಮೈಸೂರು ಮೈಸೂರು ನಗರದ ಕೆ.ಆರ್.ಎಸ್. ರಸ್ತೆ, ಯಾದವಗಿರಿ, ಸಂಕಲ್ಪ ಅಪಾರ್ಟ್‌ಮೆಂಟ್ ಬಳಿ ಕಾಯುತ್ತಿರುವಾಗ್ಗೆ ವಿಕ್ರಮ್ ಆಸ್ಪತ್ರೆ ಕಡೆಯಿಂದ ಆಕಾಶವಾಣಿ ವೃತ್ತದ ಮೂಲಕ ಕೆ.ಆರ್.ರಸ್ತೆ ಕಡೆಗೆ ಒಬ್ಬ ಅಸಾಮಿಯು ಒಂದು ದ್ವಿಚಕ್ರ ವಾಹನ ಬರುತ್ತಿದ್ದುದ್ದನ್ನು ತಡೆದು ನಿಲ್ಲಿಸಿ ಪರಿಶೀಲನೆ ನಡೆಸಲಾಗಿ **ಕೆಎ-09/ಇಸಿ-2310 ಟಿವಿಎಸ್ ಎಕ್ಸೆಲ್ ಸೂಪರ್** ವಾಹನದಲ್ಲಿ ಅಕ್ರಮವಾಗಿ 10.800 ಲೀ. ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದುದ್ದು ಕಂಡು ಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಯಾದ ಸುರೇಶ್ ಬಿನ್ ನರಸಪ್ಪ ಎಂಬುವವನನ್ನು ಸ್ಥಳದಲ್ಲಿ ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ವಾಹನ ಮಾಲೀಕರ ಮೇಲೆ ಕಲಂ 43(ಬಿ)(2)ರ ಅಡಿಯಲ್ಲಿ ಕಾನೂನಿನಲ್ಲಿ ವಿಪುಲ ಜವಾಬ್ದಾರಿಗಳಿದ್ದು, ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ ಅರ್ಜಿದಾರರ ಮೇಲಿದ್ದು, ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡಾ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (9) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ / ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮಿಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/91 (ಪೋಲೀಸ್)/2010-11, ದಿನಾಂಕ : 20-09-2011.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ)(2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ನಗರ ಇವರು ಹೂಡಲಾದ ಪ್ರ.ಮಾ.ವರದಿ ಸಂ: 71/2010, ದಿ: 11-10-2010ರಂದು ವಶಪಡಿಸಿಕೊಂಡ **ಕೆಎ-09/ಇಸಿ-2310 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು** ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2011ನೇ ಇಸವಿ ಸೆಪ್ಟೆಂಬರ್ ತಿಂಗಳ 20ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ.ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್. 1145

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ.

ಸಂಖ್ಯೆ: ಡಿಟಿಸಿಆರ್ : 127 (ಪೋಲೀಸ್)/2010-11, ದಿನಾಂಕ : 20-09-2011.

ಉಪಸ್ಥಿತರು : **ಡಾ॥ ವೈ.ಮಂಜುನಾಥ್**, ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	ವಿರುದ್ಧ	ಆರೋಪಿ
ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ನಗರ.		ಚಿನ್ನಸ್ವಾಮಿ ಬಿನ್ ಲೇ॥ ವೆಂಕಟಪ್ಪ

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 06-12-2010 ರಂದು ಬೆಳಿಗ್ಗೆ 11-30 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ವಿಭಾಗ, ಮೈಸೂರು ನಗರ ಇವರು ಸಹ ಸಿಬ್ಬಂದಿಯೊಂದಿಗೆ ಕೆ.ಆರ್.ಮೊಹಲ್ಲಾದಲ್ಲಿ ಗಸ್ತಿನಲ್ಲಿದ್ದಾಗ ಬಂದ ಖಚಿತ ವರ್ತಮಾನದ ಮೇರೆಗೆ ಮೈಸೂರು

ನಗರ, ಎಸ್.ಆರ್. ರಸ್ತೆಯ ಕೆ.ಆರ್. ಆಸ್ಪತ್ರೆಯ ಗೇಟ್ ಮುಂಭಾಗ ಕಾಯುತ್ತಿರುವಾಗ ಒಬ್ಬ ಆಸಾಮಿಯು ಒಂದು ಸೈಕಲಿನಲ್ಲಿ ಅಕ್ಕಿಚೌಕದ ಕಡೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದನ್ನು ಕಂಡು ಅನುಮಾನ ಬಂದು ಸೈಕಲನ್ನು ನಿಲ್ಲಿಸಿ ನೋಡಲಾಗಿ ಅಕ್ರಮವಾಗಿ 4.500 ಲೀ. ಮದ್ಯ ಹಾಗೂ 1.950 ಬಿಯರನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ಸೈಕಲ್ ಮತ್ತು ಮಾದಕ ದ್ರವ್ಯಗಳನ್ನು ಜಪ್ತುಗೊಳಿಸಿ, ಪ್ರಕರಣದ ಆರೋಪಿಯಾದ ಚಿನ್ನಸ್ವಾಮಿ ಬಿನ್ ಲೇ॥ ವೆಂಕಟಪ್ಪ ಎಂಬುವವರನ್ನು ದಸ್ತಗಿರಿ ಮಾಡಿ, ಠಾಣಾ ಮೊಕದ್ದಮೆ ಸಂಖ್ಯೆ : 93/2010 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ **32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ಸೈಕಲ್** ಮತ್ತು ಮಾದಕ ದ್ರವ್ಯಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ: 08-03-2010 ರಲ್ಲಿ ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅದರಂತೆ ದಿನಾಂಕ : 15-12-2010ರಂದು ಮೈಸೂರು ವಲಯ -3 ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ.

